वैकुंठादागतं कृष्णं गोपीनांवल्लभं प्रियं ।







ಶ್ರೀ ದಯಾನಿಧಿತೀರ್ಥರು



ಶ್ರೀ ಸತ್ಯನಿಧಿತೀರ್ಥರು



ಶ್ರೀ ವಿಜಯನಿಧಿತೀರ್ಥರು

॥ ಶ್ರೀ ಗೋಪೀನಾಥೋ ವಿಜಯತೇ ॥

## ಶ್ರೀ ಶ್ರೀಮನ್ಮಧ್ವಾಚಾರ್ಯ ಮೂಲ ಮಹಾಸಂಸ್ಥಾನ
## ಶ್ರೀ ಶ್ರೀ ಪದ್ಮನಾಭತೀರ್ಥರ ಪರಂಪರಾ

# ಶ್ರೀ ಶ್ರೀಪಾದರಾಜ ಮಠ

(ಮುಳಬಾಗಿಲು ಮಠ) ಮುಳಬಾಗಿಲು

## ಸೂರ್ಯ ಸಿದ್ಧಾಂತ ಪಂಚಾಂಗ

**ಶ್ರೀ ವಿಶ್ವಾವಸು ನಾಮ ಸಂವತ್ಸರ**

**ಶಕೆ 1947**
**2025-26**



ಶ್ರೀ ವಿಜ್ಞಾನನಿಧಿತೀರ್ಥರು



ಶ್ರೀ ಕೇಶವನಿಧಿತೀರ್ಥರು



ಶ್ರೀ ಸುಜಯನಿಧಿತೀರ್ಥರು
(ಪ್ರಸ್ತುತ ಪೀಠಾಧಿಪತಿಗಳು)



# ಶ್ರೀ ಶ್ರೀಮನ್ಮಧ್ವಾಚಾರ್ಯ ಮೂಲ ಮಹಾಸಂಸ್ಥಾನ ಶ್ರೀ ಶ್ರೀಪದ್ಮನಾಭತೀರ್ಥರ ಪರಂಪರಾ
# ಶ್ರೀ ಶ್ರೀಪಾದರಾಜಮಠದ ಗುರು ಪರಂಪರಾ



ಅಸ್ಮದ್ಗುರುಸಮಾರಂಭಾಂ ಶ್ರೀಪಾದರಾಜ ಮಧ್ಯಗಾಮ್ ।
ಶ್ರೀಮದಾಚಾರ್ಯಪರ್ಯಂತಾಂ ವಂದೇ ಗುರುಪರಂಪರಾಮ್ ॥
ಶ್ರೀಮದ್ಧಂಸಂ ವಿಧಾತಾರಂ ಸನಕಾದಿ ಗುರೂನಪಿ ।
ದುರ್ವಾಸಸಂ ಜ್ಞಾನನಿಧಿಂ ತಾರ್ಕ್ಷ್ಯವಾಹನ ಸಂಜ್ಞಿತಮ್ ॥
ಕೈವಲ್ಯತೀರ್ಥಂ ಜ್ಞಾನೇಶಂ ಪರತೀರ್ಥಗುರುಂ ತಥಾ ।
ಸತ್ಯಪ್ರಜ್ಞಂ ಪ್ರಾಜ್ಞತೀರ್ಥಂ ಅಚ್ಯುತಪ್ರೇಕ್ಷಕಂ ಭಜೇ ॥




**1. ಶ್ರೀಮದಾನಂದತೀರ್ಥರು : 1238–1317** ಮಾಘ ಶುದ್ಧ ನವಮಿ

ಬ್ರಹ್ಮಾಂತಾಗುರವಃ ಸಾಕ್ಷಾದಿಷ್ಟಂ ದೈವಂ ಶ್ರಿಯಃ ಪತಿಃ ।
ಆಚಾರ್ಯಾಃ ಶ್ರೀಮದಾಚಾರ್ಯಾಃ ಸಂತು ಮೇ ಜನ್ಮಜನ್ಮನಿ॥
ಅಭ್ರಮಂ ಭಂಗರಹಿತಂ ಅಜಡಂ ವಿಮಲಂ ಸದಾ
ಆನಂದತೀರ್ಥಮತುಲಂ ಭಜೇ ತಾಪತ್ರಯಾಪಹಮ್॥

**2. ಶ್ರೀಪದ್ಮನಾಭತೀರ್ಥರು : 1317–1324** ಕಾರ್ತೀಕ ಬಹುಳ ಚತುರ್ದಶಿ

ಪೂರ್ಣಪ್ರಜ್ಞಕೃತಂ ಭಾಷ್ಯಮಾದೌ ತದ್ಭಾವಪೂರ್ವಕಮ್।
ಯೋ ವ್ಯಾಕರೋನ್ನಮಸ್ತಸ್ಮೈ ಪದ್ಮನಾಭಾಖ್ಯ ಯೋಗಿನೇ ॥
ಶ್ರೀಮಧ್ವಸಂಸೇವನ ಲಬ್ಧ ಗೋಪಾಕೃತೀರ್ಭಕ್ತಿ ನಿಷೇವಣೇನ।
ಲೋಕೇಷು ವಿಖ್ಯಾತ ಸುಕೀರ್ತಿಮಂತಂ ಶ್ರೀಪದ್ಮನಾಭಾರ್ಯ
ಮುನಿಂ ಪ್ರಣೌಮಿ ॥

**3. ಶ್ರೀಲಕ್ಷ್ಮೀಧರತೀರ್ಥರು : 1324–1334**

**ಮಾರ್ಗಶಿರ ಪೌರ್ಣಮಿ (ಪದ್ಮನಾಭತೀರ್ಥ ಪ್ರಥಮ ಶಿಷ್ಯರು)**

ಗೋವರ್ಧನಧರಂ ದೇವಂ ಗೋಪೀನಾಥಂ ಮನೋಹರಂ।
ಧ್ಯಾಯಂತಂ ಸತತಂ ನೌಮಿ ಲಕ್ಷ್ಮೀಧರಯತೀಶ್ವರಮ್ ॥

**4. ಶ್ರೀಸಂಕರ್ಷಣತೀರ್ಥರು : 1334 –1354**

**ಮಾಘ ಶುದ್ಧ ಬಿದಿಗೆ (ಶ್ರೀನಗರ ಕಾಶ್ಮೀರ)**

ಶ್ರೀಲಕ್ಷ್ಮೀಧರಸಂಜಾತಾನ್ ಸಂಕರ್ಷಣ ಮುನೀಶ್ವರಾನ್।
ಭಾಷ್ಯಪ್ರವಚನಾಸಕ್ತಾನ್ ಗುರೂನ್ ವಂದೇ ನಿರಂತರಮ್॥

**5. ಶ್ರೀಪರಶುರಾಮತೀರ್ಥರು : 1354–1364**

**ಫಾಲ್ಗುಣ ಪೌರ್ಣಮಿ (ಶ್ರೀರಂಗ ಚಂದ್ರಪುಷ್ಕರಣಿ ಗಡ್ಡೆ)**

ಸಂಕರ್ಷಣ ಕರಾಭ್ಜೋತ್ಥ ವಿದ್ವತ್ಕುಮುದಬಾಂಧವಃ ।
ಪರಶುರಾಮಾಖ್ಯಯತಿಃ ರಾಜತಾಂ ಮಮ ಮಾನಸೇ ॥

**6. ಶ್ರೀಆದಿರಾಜತೀರ್ಥರು : 1364 – 1384**

**ಪುಷ್ಯ ಶುದ್ಧ ದಶಮಿ (ಶ್ರೀರಂಗ)**

ಪರಶುರಾಮಾಬ್ಧಿಸಂಭೂತಂ ಸುಶಾಂತ್ಯಾದಿಗುಣಾರ್ಣವಮ್।
ತತ್ವಪ್ರದೀಪ ಸಂಸಕ್ತಮಾದಿರಾಜಗುರುಂ ಭಜೇ ॥

**7. ಶ್ರೀ ಸತ್ಯವ್ರತತೀರ್ಥರು : 1384 –1400**

**ಚೈತ್ರ ಶುದ್ಧ ಪೌರ್ಣಮಿ (ಶ್ರೀರಂಗ)**

ಲೋಕೇಷು ವಿಖ್ಯಾತ ಸುಕೀರ್ತಿಮಂತಂ ಧೀಮಂತಮಾದ್ಯಂ
ಕ್ಷಿತಿಪಾಲಜಾತಮ್। ಸತ್ಯವ್ರತಂ ಜ್ಞಾನವಿರಾಗಯುಕ್ತಂ ಭಕ್ತಂ ಹರೇ
ಸ್ಸತ್ಯವ್ರತಂ ಭಜೇಽಹಮ್॥

**8. ಶ್ರೀಸ್ವರ್ಣವರ್ಣತೀರ್ಥರು : 1400–1420**

**ಜ್ಯೇಷ್ಠ ಬಹುಳ ಚೌತಿ (ಶ್ರೀರಂಗ)**

ವಸುಧಾತಲವಿಖ್ಯಾತಂ ವೈರಾಗ್ಯಾದಿ ಗುಣಾರ್ಣವಮ್।
ವೇದವೇದಾಂಗ ಚತುರಂ ಸ್ವರ್ಣವರ್ಣಗುರುಂ ಭಜೇ॥

**9. ಶ್ರೀ ಶ್ರೀಪಾದರಾಜರು : 1412 – 1504**

**ಜ್ಯೇಷ್ಠ ಶುದ್ಧ ಚತುರ್ದಶಿ (ಮುಳಬಾಗಿಲು)**

ಜ್ಞಾನವೈರಾಗ್ಯ ಭಕ್ತ್ಯಾದಿ ಕಲ್ಯಾಣ ಗುಣಶಾಲಿನಃ ।
ಲಕ್ಷ್ಮೀನಾರಾಯಣ ಮುನೀನ್ ವಂದೇ ವಿದ್ಯಾಗುರೂನ್ಮಮ॥

**10. ಶ್ರೀಹಯಗ್ರೀವತೀರ್ಥರು : 1500 –1536**

**ಕಾರ್ತೀಕ ಶುದ್ಧ ಪೌರ್ಣಮಿ (ಮುಳಬಾಗಿಲು)**

ವಾಗ್ವಜ್ರಗ್ರಂಥ ಸಾರಾರ್ಥಕೋವಿದಂ ಜ್ಞಾನ ಭಾಗ್ಯದಮ್ ।
ಸರ್ವಾಭೀಷ್ಟಪ್ರದಾತಾರಂ ಹಯಗ್ರೀವಗುರುಂ ಭಜೇ ॥

**11. ಶ್ರೀ ಶ್ರೀಪತಿತೀರ್ಥರು : 1536 –1571**

**ವೈಶಾಖ ಬಹುಳ ದಶಮಿ (ಮಾರಂಡಹಳ್ಳಿ)**

ಶ್ರೀಹಯಗ್ರೀವಸಂಜಾತಂ ಸಂಪ್ರದಾಯಾರ್ಥಕೋವಿದಮ್ ।
ಸಚ್ಛಾಸ್ತ್ರಾಮೃತಪಾತಾರಂ ಭಜೇ ಶ್ರೀಪತಿತೀರ್ಥಕಮ್ ॥

**12. ಶ್ರೀ ಶ್ರೀಧರತೀರ್ಥರು : 1570 – 1598**

**ಆಶ್ವೀಜ ಶುದ್ಧ ಚತುರ್ದಶಿ (ಮುಳಬಾಗಿಲು)**

ಶ್ರೀಪತೇರ್ಯತಿರಾಜಸ್ಯ ಕರಕಂಜಸಮುದ್ಭವಮ್ ।
ಶ್ರೀಧರಾಖ್ಯಮುನೀನ್ ವಂದೇ ಸಚ್ಛಾಸ್ತ್ರಾಧ್ಯಯನೇ ರತಮ್ ॥

**13. ಶ್ರೀಗೋಪಾಲಸ್ವಾಮಿತೀರ್ಥರು : 1598 – 1620**

**ಶ್ರಾವಣ ಶುದ್ಧ ಪೌರ್ಣಮಿ (ಮುಳಬಾಗಿಲು)**

ಸನ್ನ್ಯಾಯರತ್ನವಲ್ಯಾದಿ ವ್ಯಾಖ್ಯಯಾ ಮೋದದಾಯಕಮ್ ।
ಗೋಪೀನಾಥ ಪದಾಸಕ್ತಂ ಗೋಪಾಲಸ್ವಾಮಿನಂ ಭಜೇ ॥

**14. ಶ್ರೀಉದ್ದಂಡ ರಾಮಚಂದ್ರತೀರ್ಥರು : 1620 – 1645**

**ಫಾಲ್ಗುಣ ಬಹುಳ ಸಪ್ತಮಿ – ಘನಗಿರಿ (ಪೆನುಗೊಂಡ)**

ಗೋಪಾಲಸ್ವಾಮಿ ಸಂಜಾತಂ ದುರ್ಮತಧ್ವಾಂತಭಾಸ್ಕರಮ್ ।
ಉದ್ದಂಡರಾಮಚಂದ್ರಾಖ್ಯ ಗುರುಂ ವಂದೇ ನಿರಂತರಮ್ ॥

**15. ಶ್ರೀರಘುನಾಥತೀರ್ಥರು : 1645 – 1670**

**ಆಷಾಢ ಶುದ್ಧ ಪಂಚಮಿ (ಎರಗಂಬಳ್ಳಿ)**

ರಾಮಚಂದ್ರಪದಾಸಕ್ತಂ ಪ್ರಸನ್ನೀಕೃತರಾಮಕಮ್ ।
ಪದವ್ಯಾಖ್ಯಾನ ಕುಶಲಂ ರಘುನಾಥಗುರುಂ ಭಜೇ ॥

**16. ಶ್ರೀಲಕ್ಷ್ಮೀಮನೋಹರತೀರ್ಥರು : 1670 – 1708**

**ಪುಷ್ಯ ಶುದ್ಧ ಪೌರ್ಣಮಿ (ಪಳ್ಳಿಪಾಳ್ಯಂ)**

ಶ್ರೀರಂಗವಿಠ್ಠಲಾಸಕ್ತಂ ರಘುನಾಥಾಬ್ಧಿಚಂದ್ರಮಮ್।
ಲಕ್ಷ್ಮೀಕಟಾಕ್ಷಪಾತ್ರಂ ತಂ ಭಜೇ ಲಕ್ಷ್ಮೀಮನೋಹರಮ್॥

**17. ಶ್ರೀಲಕ್ಷ್ಮೀಪತಿತೀರ್ಥರು : 1700 – 1715**

**ಆಷಾಢ ಶುದ್ಧ ದ್ವಾದಶಿ (ಪಳ್ಳಿಪಾಳ್ಯಂ)**

ಸುಖತೀರ್ಥಮತಾಬ್ಧೀಂದು ಜಾತಂ ಲಕ್ಷ್ಮೀಮನೋಹರಾತ್।
ಸರ್ವಾಭೀಷ್ಟಪ್ರದಂ ನೃಣಾಂ ಲಕ್ಷ್ಮೀಪತಿಗುರುಂ ಭಜೇ ॥

**18. ಶ್ರೀಲಕ್ಷ್ಮೀನಾಥತೀರ್ಥರು : 1715 – 1726**

**ವೈಶಾಖ ಶುದ್ಧ ಪೌರ್ಣಮಿ (ಅಬ್ಬೂರು)**

ಶ್ರೀ ಶ್ರೀಪಾದರಾಜ ಪಾದಕಮಲೇ ಭ್ರಮರಾಯಿತಮ್ ।
ಬ್ರಹ್ಮಣ್ಯಪುರವಾಸಂ ತಂ ಲಕ್ಷ್ಮೀನಾಥಗುರುಂ ಭಜೇ ॥

**19. ಶ್ರೀಲಕ್ಷ್ಮೀಕಾಂತತೀರ್ಥರು : 1726 – 1746**

**ಜ್ಯೇಷ್ಠ ಶುದ್ಧ ಚತುರ್ದಶಿ (ವೆಂಗೆರೆ)**

ನರಸಿಂಹಪದಾಸಕ್ತಂ ಭಕ್ತಾಭೀಷ್ಟಪ್ರದಾಯಕಮ್ ।
ವಿಜ್ಞಾನ ವಿಮಲಂ ಶಾಂತಂ ಲಕ್ಷ್ಮೀಕಾಂತಗುರುಂ ಭಜೇ ॥

**20. ಶ್ರೀಶ್ರೀಕಾಂತತೀರ್ಥರು : 1740 – 1761**

**ಮಾಘ ಬಹುಳ ಅಮಾವಾಸ್ಯೆ (ನಂಗಲಿ)**

ಸಚ್ಛಾಸ್ತ್ರಾಸಕ್ತ ಹೃದಯಂ ವಿದ್ವತ್ಕಮಲಭಾಸ್ಕರಮ್ ।
ಶ್ರೀಕಾಂತಮುನಿಮೀಡೇಽಹಂ ಶ್ರೀನಿವಾಸ ಸಮರ್ಚಕಮ್॥

**21. ಶ್ರೀಶ್ರೀನಿಧಿತೀರ್ಥರು : 1761 – 1787**

**ಆಶ್ವಯುಜ ಬಹುಳ ಸಪ್ತಮಿ (ಪಳ್ಳಿಪಾಳ್ಯಂ)**

ಸುಸಂಸ್ತುತಿ ಪ್ರಣಯನ ಪ್ರಸನ್ನ ಗುರುರಾಜಕಮ್ ।
ಗುರುಂ ಶ್ರೀನಿಧಿತೀರ್ಥಾಖ್ಯಂ ಸಂತಂ ಶ್ರೀಕಾಂತಮಾಭಜೇ ॥

**22. ಶ್ರೀವಿದ್ಯಾನಿಧಿತೀರ್ಥರು : 1782 – 1795**

**ವೈಶಾಖ ಶುದ್ಧ ಪಾಡ್ಯ (ಪಳ್ಳಿಪಾಳ್ಯಂ)**

ಶ್ರೀನಿಧ್ಯಂಬೋಧಿಸಂಭೂತಂ ವಿದುಷಾಂ ಚ ಸದಾಪ್ರಿಯಮ್ ।
ಪೂಜಯಂತಂ ವಿಠ್ಠಲಾದೀನ್ ವಂದೇ ವಿದ್ಯಾನಿಧಿಂ ಮುದಾ ॥

**23. ಶ್ರೀಜ್ಞಾನನಿಧಿತೀರ್ಥರು : 1788 – 1800**

**ಮಾಘ ಶುದ್ಧ ಪೌರ್ಣಮಿ (ಶ್ರೀರಂಗಪಟ್ಟಣ)**

ಪಶ್ಚಿಮೇ ಶ್ರೀರಂಗನಾಥ ಕ್ಷೇತ್ರೇ ಬೃಂದಾವನೇ ಸ್ಥಿತಮ್ ।
ವಿದ್ಯಾನಿಧಿಕರಾಬ್ಜೋತ್ಥಂ ನೌಮಿ ಜ್ಞಾನನಿಧಿಂ ಯತಿಮ್ ॥

**24. ಶ್ರೀಗುಣನಿಧಿತೀರ್ಥರು : 1798 – 1804**

**ಮಾಘ ಬಹುಳ ಸಪ್ತಮೀ (ತಾಯೂರು)**

ಜ್ಞಾನನಿಧಿ ಕರಾಬ್ಜೋತ್ಥಂ ಸುವಿದ್ವನ್ಮಣಿರಾಜಿತಮ್ ।
ಸುಮೃಷ್ಟಾನ್ನಪ್ರದಾತಾರಂ ವಂದೇ ಗುಣನಿಧಿಂ ಮುನಿಮ್ ॥

**25. ಶ್ರೀಗುಣಸಾರನಿಧಿತೀರ್ಥರು : 1804 – 1813**

**ಪುಷ್ಯ ಶುದ್ಧ ದಶಮಿ (ಮುಳಬಾಗಿಲು)**

ಗುಣರತ್ನಾಕರಂ ಪೂರ್ಣಂ ಗುಣನಿಧ್ಯರ್ಣವೋದಿತಮ್ ।
ಗುಣಸಾರಾಖ್ಯ ಯೋಗೀಂದ್ರಂ ಸೇವೇಽಹಂ ಜ್ಞಾನಸಿದ್ಧಯೇ ॥

**26. ಶ್ರೀಪ್ರಾಜ್ಞನಿಧಿತೀರ್ಥರು : 1813 – 1818**

**ಚೈತ್ರ ಶುದ್ಧ ನವಮಿ (ಮುಳಬಾಗಿಲು)**

ವೇದಶಾಸ್ತ್ರಾಬ್ಧಿಮಥನಾದ್ ಜ್ಞಾನಂ ಯಸ್ಯ ಪ್ರಕಾಶತೇ ।
ಪ್ರಾಜ್ಞನಿಧಿತೀರ್ಥಾಖ್ಯಃ ದದ್ಯಾನ್ಮೇ ಜ್ಞಾನ ಸಂಪದಮ್ ॥

**27. ಶ್ರೀಸುಬೋಧನಿಧಿತೀರ್ಥರು : 1818 – 1839**

**ಆಶ್ವಯುಜ ಬಹುಳ ಚೌತಿ (ಮುಳಬಾಗಿಲು)**

ಪ್ರಾಜ್ಞನಿಧಿಸಂಜಾತಂ ಷಾಷ್ಠೀಕ ಕುಲ ಭೂಷಣಮ್ ।
ಭಕ್ತ್ಯಾದಿಭೂಷಣಂ ನೌಮಿ ಸುಬೋಧನಿಧಿತೀರ್ಥಕಮ್ ॥

**28. ಶ್ರೀವೈರಾಗ್ಯನಿಧಿತೀರ್ಥರು : 1839 – 1851**

**ಆಶ್ವಯುಜ ಶುದ್ಧ ಸಪ್ತಮಿ (ಮುಳಬಾಗಿಲು)**

ವೈರಾಗ್ಯಾದಿ ಗುಣೋಪೇತಂ ಭಕ್ತಿವೈರಾಗ್ಯದಂ ಮುನಿಮ್ ।
ನರಸಿಂಹತಟಾವಾಸಂ ವೈರಾಗ್ಯನಿಧಿಮಾಭಜೇ ॥

**29. ಶ್ರೀಸುಜ್ಞಾನನಿಧಿತೀರ್ಥರು : 1851 – 1886**

**ಫಾಲ್ಗುಣ ಶುದ್ಧ ಪೌರ್ಣಿಮಿ (ಮುಳಬಾಗಿಲು)**

ಗೋಪೀನಾಥ ಪದದ್ವಂದ್ವ ವಾರಿಜಾಸಕ್ತಮಾನಸಮ್ ।
ಶ್ರೀಸುಜ್ಞಾನನಿಧಿಂ ವಂದೇ ವೈರಾಗ್ಯನಿಧಿಪುತ್ರಕಮ್ ॥

**30. ಶ್ರೀಸುಗುಣನಿಧಿತೀರ್ಥರು : 1856 – 1885**

**ವೈಶಾಖ ಬಹುಳ ಚತುರ್ದಶಿ (ಭವಾನಿ)**

ಸುಜ್ಞಾನನಿಧಿತೀರ್ಥಾರ್ಯೋರ್ ಹ್ಯಂತಃ ಸಂತಾಪ ಶಾಂತಯೇ ।
ಪಾಯಾತ್ ಸುಗುಣ ನಿಧ್ಯಾಖ್ಯೋ ಗುರುರಸ್ಮಾನ್ ವಿಪದ್ಗಣಾತ್ ॥

**31. ಶ್ರೀಸುಧೀನಿಧಿತೀರ್ಥರು : 1881 – 1906**

**ಫಾಲ್ಗುಣ ಬಹುಳ ಅಷ್ಟಮಿ (ಪಳ್ಳಿಪಾಳ್ಯಂ)**

ಸತ್ಯದೀಪ್ತಂ ವಶ್ಯವಾಚಂ ಯಮಾದ್ಯೈರಷ್ಟಭಿರ್ಯುತಮ್ ।
ಹಂಸಾಧೀಶಂ ನಿಷೇವಧ್ವಂ ಸುಧೀನಿಧಿವಿಧಿಂ ಬುಧಾಃ ॥

**32. ಶ್ರೀಮೇಧಾನಿಧಿತೀರ್ಥರು : 1906 – 1926**

**ಕಾರ್ತೀಕ ಬಹುಳ ಅಮಾವಾಸ್ಯೆ (ಪಳ್ಳಿಪಾಳ್ಯಂ)**

ಗೋಪೀನಾಥ ಸಪರ್ಯಾದಿ ವೈರಾಗ್ಯಗುಣಶಾಲಿನಃ ।
ಮೇಧಾನಿಧಿಗುರೂನ್ ವಂದೇ ಸಚ್ಛಿಷ್ಯಾಪನ್ನಿವಾರಕಾನ್ ॥

**33. ಶ್ರೀದಯಾನಿಧಿತೀರ್ಥರು : 1926 – 1962**

**ಮಾರ್ಗಶಿರ ಬಹುಳ ತ್ರಯೋದಶಿ (ಮುಳಬಾಗಿಲು)**

ಮೇಧಾನಿಧಿ ಕರಾಬ್ಜೋತ್ಥಂ ವ್ಯಾಸತ್ರಯ ಪ್ರಪಾಠಕಮ್ ।
ದಯಾನಿಧಿಗುರುಂ ವಂದೇ ಭಕ್ತ್ಯಾದಿಗುಣಮಂಡಿತಮ್ ॥

**34. ಶ್ರೀಸತ್ಯನಿಧಿತೀರ್ಥರು : 1955 – 1980**

**ಆಷಾಢ ಬಹುಳ ಷಷ್ಠಿ (ಮುಳಬಾಗಿಲು)**

ಗೋಪೀನಾಥ ಪದಾಸಕ್ತಂ ವಾರಿಜಾಸಕ್ತ ಮಾನಸಮ್ ।
ಶ್ರೀಮತ್ಸತ್ಯನಿಧಿಂ ವಂದೇ ದಯಾನಿಧಿ ಸುಪುತ್ರಕಮ್ ॥

**35. ಶ್ರೀವಿಜಯನಿಧಿತೀರ್ಥರು : 1980 – 1987**

**ಫಾಲ್ಗುಣ ಬಹುಳ ಬಿದಿಗೆ (ಮುಳಬಾಗಿಲು)**

ಸತ್ಯದೀಪ್ತಂ ವಶ್ಯವಾಚ್ಯಂ ಶಾಂತ್ಯಾದಿ ಗುಣಮಂಡಿತಮ್ ।
ಶ್ರೀಸತ್ಯನಿಧಿಸಂಜಾತಂ ವಿಜಯಾಖ್ಯನಿಧಿಂ ಭಜೇ ॥

**36. ಶ್ರೀವಿಜ್ಞಾನನಿಧಿತೀರ್ಥರು : 1987 – 2010**

**ಭಾದ್ರಪದ ಬಹುಳ ತ್ರಯೋದಶಿ (ಮುಳಬಾಗಿಲು)**

ಪೂರ್ಣ ಪ್ರಜ್ಞಸುಹೃತ್ ಪಾದ್ಮ ರಾಜಮಂದಿರ ವರ್ಧಕಮ್ ।
ಶ್ರೀವಿಜ್ಞಾನನಿಧಿಂ ವಂದೇ ವೇದವಿಜ್ಞಾನ ದರ್ಶಕಮ್ ॥

**37. ಶ್ರೀ ಶ್ರೀಕೇಶವನಿಧಿತೀರ್ಥರು : 2009 – 2022**

**ಪುಷ್ಯ ಬಹುಳ ಏಕಾದಶಿ (ಮುಳಬಾಗಿಲು)**

ವಿಜ್ಞಾನನಿಧಿ ಸಂಜಾತಾನ್ ಶಾಂತ್ಯಾದಿಗುಣ ಮಂಡಿತಾನ್ ।
ಗೋಪೀನಾಥ ಪದಾಸಕ್ತಾನ್ ಶ್ರೀಕೇಶವನಿಧೀನ್ ಭಜೇ ॥

**ಪ್ರಸ್ತುತ ಪೀಠಾಧಿಪತಿಗಳು**

**ಶ್ರೀ ಶ್ರೀಸುಜಯನಿಧಿತೀರ್ಥ ಶ್ರೀಪಾದಂಗಳವರು**

---

## ಮುಳಬಾಗಿಲು ಶ್ರೀ ಶ್ರೀಪಾದರಾಜಮಠದ ಶಾಖಾ ಮಠ (ಒಡಪಳ್ಳಿ ಮುಳಬಾಗಿಲು ಮಠ)

**1. ಶ್ರೀಶ್ರೀವಲ್ಲಭತೀರ್ಥರು : 1758 – 1770**

**ಮಾಘ ಶುದ್ಧ ಪಂಚಮಿ (ಒಡಪಳ್ಳಿ)**

ಶ್ರೀಕಾಂತತೀರ್ಥ ಸಂಜಾತಂ ತೀರ್ಥಂ ವಲ್ಲಭ ಸಂಜ್ಞಕಮ್ ।
ಜ್ಞಾನವೈರಾಗ್ಯ ಭಕ್ತ್ಯಾದಿ ಭೂಷಿತಂ ತಂ ನಮಾಮ್ಯಹಮ್ ॥

**2. ಶ್ರೀಲಕ್ಷ್ಮೀವಲ್ಲಭತೀರ್ಥರು (ಶ್ರೀಲಕ್ಷ್ಮೀನಿಧಿತೀರ್ಥರು) : 1768 – 1808**

**ಮಾರ್ಗಶಿರ ಶುದ್ಧ ತ್ರಯೋದಶಿ (ಒಡಪಳ್ಳಿ)**

ಶ್ರೀಕಾಂತತೀರ್ಥ ಮೌನೀಶೈಃ ಭೂವೈಕುಂಠೇಯದಾದಿತಂ ।
ಮಠಾಭಿವೃದ್ಧಿದೀಕ್ಷಾಪ್ತಂ ಶ್ರೀಲಕ್ಷ್ಮೀವಲ್ಲಭಂ ಭಜೇ ॥

**3. ಶ್ರೀತೇಜೋನಿಧಿತೀರ್ಥರು : 1770 –1813**

**ಶ್ರಾವಣ ಶುದ್ಧ ಬಿದಿಗೆ (ಪಳ್ಳಿಪಾಳ್ಯಂ)**

ತೇಜಸಾ ರವಿಸಂಕಾಶಂ ಭಕ್ತಾನಾಂ ದುಃಖಹಾರಕಮ್ ।
ತೇಜೋನಿಧಿಂ ಸುಧಾಸಕ್ತಂ ನಮಾಮಿ ಜ್ಞಾನಸಿದ್ಧಯೇ ॥

**4. ಶ್ರೀತಪೋನಿಧಿತೀರ್ಥರು : 1813 – 1838**

**ಭಾದ್ರಪದ ಶುದ್ಧ ಪಂಚಮಿ (ಪಳ್ಳಿಪಾಳ್ಯಂ)**

ತೇಜೋನಿಧಿಕರಾಬ್ಜೋತ್ಥಂ ತಪಸಾ ಚಿಂತಿತ ಪ್ರದಮ್ ।
ತಪೋನಿಧಿಂ ಮಹಾಪ್ರಾಜ್ಞಂ ವಂದೇ ವಾಗ್ವಜ್ರಬೋಧಕಮ್ ॥

**5. ಶ್ರೀಯಶೋನಿಧಿತೀರ್ಥರು : 1838 – 1856**

**ಪುಷ್ಯ ಶುದ್ಧ ದಶಮಿ (ಪಳ್ಳಿಪಾಳ್ಯಂ)**

ಯಥೇಚ್ಛಮನ್ನದಾತಾರಂ ಸದಾ ದೀನಾನುರಾಗಿಣಂ ।
ಯಶೋನಿಧಿಂ ಸ್ತುವೇ ನಿತ್ಯಂ ಯಶಸಾಭಾಸಿತಂ ಗುರುಮ್ ॥

**6. ಶ್ರೀಆನಂದನಿಧಿತೀರ್ಥರು : 1855 –1883**

**ಆಶ್ವಯುಜ ಬಹುಳ ಅಷ್ಟಮಿ (ಮೈಸೂರು)**

ಆನಂದನಿಧಿತೀರ್ಥಂ ಚ ಗಯಾಪಾಲ್ಯೆ ಸ್ಸುಪೂಜಿತಮ್ ।
ಮಹಿಷಾಸುರ ಪುರ್ಯಾಂತು ವಂದೇ ಬೃಂದಾವನೇ ಸ್ಥಿತಮ್ ॥

**7. ಶ್ರೀಸುಮತಿನಿಧಿತೀರ್ಥರು : 1885 – 1901**

**ಆಷಾಢ ಶುದ್ಧ ಸಪ್ತಮಿ (ಭವಾನಿ)**

ಭವಾನೀತಿಪುರಸ್ಥಾಯಾಃ ಕಾವೇರ್ಯಾಸ್ತೀರಸಂಸ್ಥಿತಮ್ ।
ಮೂಲೇ ಶಾಖಾ ಮಠಾಲೀನಂ ತಂ ವಂದೇ ಸುಮತಿಂನಿಧಿಮ್ ॥

## ಪೂರ್ಣಗೊಂಡಿರುವ ನೂತನ ಕಟ್ಟಡ



ಶ್ರೀ ಶ್ರೀಪಾದರಾಜ ಮಠ, ಮುಳಬಾಗಿಲು ಊರಿನ ಮಠ



## ॥ ಶ್ರೀ ಶ್ರೀಪಾದರಾಜ ಪಂಚರತ್ನಮಾಲಿಕಾ ॥

ವಂದೇ ಶ್ರೀಪಾದರಾಜಂ ರುಜಿತಮಹೃದಯಂ ಪೂಜಿತಶ್ರೀಸಹಾಯಂ।
ನಿರ್ಧೂತಾಶೇಷಹೇಯಂ ನಿಭೃತಶುಭಚಯಂ ಭೂಮಿದೇವಾಭಿಗೇಯಮ್।
ವಿಪ್ರೇಭ್ಯೋ ದತ್ತದೇಯಂ ನಿಜಜನಸದಯಂ ಖಂಡಿತಾಶೇಷಮಾಯಂ।
ನಿಷ್ಠ್ಯೂತ ಸ್ವರ್ಣಕಾಯಂ ಬಹುಗುಣನಿಲಯಂ ವಾದಿಸಂಘೈರಜೇಯಮ್ ॥ 1 ॥

ಕ್ಷುಭ್ಯದ್ವಾದಿಕರೀಂದ್ರ ವಾದಿಪಟಲೀ ಕುಂಭಚ್ಛಟಾ ಭೇದನ।
ಪ್ರೌಢಪ್ರಾಭವತರ್ಕಸಂಘನಿಕರ ಶ್ರೇಣೀವಿಲಾಸೋಜ್ಜ್ವಲಃ ।
ಗೋಪೀನಾಥಮಹೀಂದ್ರ ಶೇಖರಲಸತ್ಪಾದಸ್ಥಲಾವಾಸಕೃತ್।
ಪಾಯಾನ್ಮಾಂ ಭವಘೋರಕುಂಜರಭಯಾಚ್ಛ್ರೀಪಾದರಾಟ್ ಕೇಸರೀ ॥ 2 ॥

ಬಿಭ್ರಾಣಂ ಕ್ಷೌಮವಾಸಃ ಕರಧೃತವಲಯಂ ಹಾರಕೇಯೂರಕಾಂಚೀ।
ಗ್ರೈವೇಯಸ್ವರ್ಣಮಾಲಾ ಮಣಿಗಣಖಚಿತಾನೇಕ ಭೂಷಾಪ್ರಕರ್ಷಮ್।
ಭುಂಜಾನಂ ಷಷ್ಠಿಶಾಕಂ ಹಯಗಜಶಿಬಿಕಾನರ್ಘ್ಯ ಶಯ್ಯಾರಥಾಢ್ಯಮ್।
ವಂದೇ ಶ್ರೀಪಾದರಾಜಂ ತ್ರಿಭುವನವಿದಿತಂ ಘೋರದಾರಿದ್ರ್ಯಶಾಂತ್ಯೈ ॥ 3 ॥

ಯದ್ವೃಂದಾವನ ಸೇವಯಾ ಸುವಿಮಲಾಂ ವಿದ್ಯಾಂ ಪಶೂನ್ ಸಂತತಿಮ್।
ಧ್ಯಾನಾದ್ಜ್ಞಾನಮನಲ್ಪಕೀರ್ತಿನಿವಹಂ ಪ್ರಾಪ್ನೋತಿ ಸೌಖ್ಯಂ ಜನಃ ।
ತಂ ವಂದೇ ನರಸಿಂಹತೀರ್ಥನಿಲಯಂ ಶ್ರೀವ್ಯಾಸರಾಟ್ ಪೂಜಿತಮ್।
ಧ್ಯಾಯಂತಂ ಮನಸಾ ನೃಸಿಂಹಚರಣಂ ಶ್ರೀಪಾದರಾಜಂ ಗುರುಮ್ ॥ 4 ॥

ಕಾಶೀಕೇದಾರ ಮಾಯಾ ಕರಿಗಿರಿ ಮಥುರಾ ದ್ವಾರಕಾ ವೇಂಕಟಾದ್ರಿ ।
ಶ್ರೀಮುಷ್ಣಕ್ಷೇತ್ರ ಪೂರ್ವ ತ್ರಿಭುವನವಿಲಸತ್ಪುಣ್ಯಭೂಮೀನಿವಾಸಃ ॥
ಗುಲ್ಮಾದಿವ್ಯಾಧಿಹರ್ತಾ ಗುರುಗುಣನಿಲಯೋ ಭೂತಭೇತಾಲಭೇದೀ।
ಭೂಯಾಚ್ಛ್ರೀಪಾದರಾಜೋ ನಿಖಿಲ ಶುಭತತಿಂ ಪ್ರಾಪ್ತಯೇ ಸಂತತಂ ನಃ ॥ 5 ॥

॥ ಇತಿ ಶ್ರೀವ್ಯಾಸರಾಜತೀರ್ಥ ವಿರಚಿತ ಶ್ರೀ ಶ್ರೀಪಾದರಾಜಪಂಚರತ್ನಮಾಲಿಕಾ ॥

### ಶ್ರೀ ಶ್ರೀಪಾದರಾಜಮಠದ ಯತಿಗಳ ಮಹಾಸಮಾರಾಧನೆಗಳ ಪಕ್ಷಿನೋಟ

ಶ್ರೀಮನ್ಮಧ್ವನವಮೀ ರಥೋತ್ಸವ
**27–01–2026**

ಶ್ರೀಪದ್ಮನಾಭತೀರ್ಥರ ಆರಾಧನೆ
ಶ್ರೀಪಂಕಜನಾಭ ವಿದ್ವತ್‌ಸಭಾ
**19–11–2025**

ಶ್ರೀಸ್ವರ್ಣವರ್ಣತೀರ್ಥರ ಆರಾಧನೆ
ಶ್ರೀಆದಿರಾಜತೀರ್ಥ ವಿದ್ವತ್‌ಸಭಾ
**15–06–2025**

ಶ್ರೀ ಶ್ರೀಪಾದರಾಜರ ಆರಾಧನೆ
**10–06–2025**

ಶ್ರೀವಿಜ್ಞಾನನಿಧಿತೀರ್ಥರ
ಆರಾಧನೆ
**19–09–2025**

ಶ್ರೀವಿಜ್ಞಾನನಿಧಿತೀರ್ಥರ ಸಭಾ

ಶ್ರೀಕೇಶವನಿಧಿತೀರ್ಥರ
ಮಹಾಸಮಾರಾಧನೆ
**15–01–2026**

ಶ್ರೀ ಸುಜಯನಿಧಿತೀರ್ಥರ
ಆಶ್ರಮ ದಿನ
**07–05–2025**

## ಪರಂಪರಾ ಸ್ತೋತ್ರ

ಶ್ರೀಮಧ್ವಪದ್ಮನಾಭಾರ್ಯ ಲಕ್ಷ್ಮೀಧರಮುನೀನಹಮ್ ।
ಸಂಕರ್ಷಣಾರ್ಯಂ ಪರಶುರಾಮಾಖ್ಯಂ ಚ ಗುರುಂ ಭಜೇ ॥

ಆದಿರಾಜಮುನೀಶಾನಂ ಸತ್ಯವ್ರತಯತೀಶ್ವರಮ್ ।
ಸ್ವರ್ಣವರ್ಣಯತಿಂ ನೌಮಿ ವಂದೇ ಶ್ರೀಪಾದರಾಡ್‌ಗುರುಮ್ ॥

ಹಯಗ್ರೀವಗುರುಂ ವಂದೇ ನೌಮಿ ಶ್ರೀಪತಿತೀರ್ಥಕಮ್ ।
ಶ್ರೀಧರಾಖ್ಯಯತಿಶ್ರೇಷ್ಠಂ ಗೋಪಾಲಸ್ವಾಮಿನಂ ತಥಾ ॥

ರಾಮಚಂದ್ರಮುನಿಂ ನಿತ್ಯಂ ರಘುನಾಥಾಖ್ಯ ಯೋಗಿನಮ್।
ಲಕ್ಷ್ಮೀಮನೋಹೃದ್ ಯೋಗೀಂದ್ರಂ ಲಕ್ಷ್ಮೀಪತಿಗುರುಂ ತಥಾ ॥

ಲಕ್ಷ್ಮೀನಾಥಮುನಿಂ ನಿತ್ಯಂ ಲಕ್ಷ್ಮೀಕಾಂತ ಸುತೀರ್ಥಕಮ್ ।
ಶ್ರೀ ಶ್ರೀಕಾಂತಯತಿಂ ವಂದೇ ಮುನೀಂದ್ರಂ ಶ್ರೀನಿಧಿಂ ತಥಾ ॥

ಶ್ರೀವಿದ್ಯಾಜ್ಞಾನನಿಧ್ಯಾರ್ಯಾನ್ ಗುಣನಿಧ್ಯಾಖ್ಯ ಯೋಗಿನಮ್ ।
ಗುಣಸಾರನಿಧಿಂ ವಂದೇ ಶ್ರೀಮತ್ಪ್ರಾಜ್ಞನಿಧಿಂ ತಥಾ ॥

ಶ್ರೀಮತ್ ಸುಭೋಧ–ವೈರಾಗ್ಯ ಸಂಪನ್ನಾನ್ ನೌಮಿ ಸದ್ಗುರೂನ್।
ಶ್ರೀಮತ್ ಸುಜ್ಞಾನ–ಸುಗುಣ–ಸುಧೀ–ಮೇಧಾನಿಧೀಂಸ್ತಥಾ ॥

ದಯಾ–ಸತ್ಯನಿಧೀನ್ ವಂದೇ ವಿಜಯಾಖ್ಯನಿಧಿಂ ಭಜೇ ।
ಶ್ರೀವಿಜ್ಞಾನನಿಧಿಂ ವಂದೇ ಶ್ರೀಕೇಶವನಿಧಿಂ ತಥಾ ॥

*~*~*~*~*~*~*~*

ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಮ್।
ಪ್ರಸನ್ನವದನಂ ಧ್ಯಾಯೇತ್ ಸರ್ವವಿಘ್ನೋಪಶಾಂತಯೇ॥
ಶಮಯನ್ ಭವಸಂತಾಪಂ ರಮಯನ್ ಸಾಧು ಚಾತಕಾನ್।
ಕೃಷ್ಣಮೇಘಕೃಪಾದೃಷ್ಟಿವೃಷ್ಟ್ಯಾ ಪುಷ್ಣಾತು ಮಾಮಪಿ॥
ವಿಜಯಾಖ್ಯನಿಧೇಃ ಸಮ್ಯಗಾಜ್ಞಾನುಗ್ರಹೇಣ ಚ।
ರಚಿತಂ ಸೂರ್ಯಸಿದ್ಧಾಂತ ಪಂಚಾಂಗಂ ಧರ್ಮಸಿದ್ಧಯೇ ॥

## ಶ್ರೀ ವಿಶ್ವಾವಸು ನಾಮ ಸಂವತ್ಸರದ ಫಲ ಮತ್ತು ಪಂಚಾಂಗ ಪೀಠಿಕಾ

ಚೈತ್ರಾದಾವುಷಸಿಸ್ಮರನ್ ರಘುಪತಿಂ ಚೋತ್ಥಾಯ ಚಂದ್ರಂ ಸ್ಮರೇತ್
ವೃದ್ಧಾಜ್ಞಾಮನುಗೃಹ್ಯ ನಿಂಬಕದಲಂ ಪ್ರಾಶ್ಯಾಜ್ಯಪಾತ್ರೇ ಸ್ವಕಮ್ ।
ವಕ್ತ್ರಂ ವೀಕ್ಷ್ಯ ಚ ದರ್ಪಣೇ ಸುಮನಸೋ ದೈವಜ್ಞಮಿತ್ರಾನ್ವಿತಃ
ಪಂಚಾಂಗಂ ಶೃಣುಯಾನ್ನೃಪಃ ಪ್ರಮುದಿತಃ ಸಂಭಾವ್ಯ ಮೌಹೂರ್ತಿಕಾನ್ ॥

ಅಬ್ದಾದೌ ಮಿತ್ರಸಂಯುಕ್ತೋ ಮಂಗಲಸ್ನಾನಮಾಚರೇತ್ ।
ವಸ್ತ್ರೈರಾಭರಣೈರ್ದೇಹಮಲಂಕೃತ್ಯ ತತಃ ಶುಚಿಃ ॥ 1 ॥

ದೇವದ್ವಿಜಾನ್ ಸಮಭ್ಯರ್ಚ್ಯ ಪ್ರಗೃಹ್ಯ ಬ್ರಾಹ್ಮಣಾಶಿಷಃ ।
ಭಕ್ಷಯಿತ್ವಾ ನಿಂಬಪತ್ರಂ ಶೃಣುಯಾದ್ವರ್ಷಜಂ ಫಲಮ್ ॥ 2 ॥

ವತ್ಸರಾದೌ ವಸಂತಾದೌ ಬಲಿರಾಜ್ಯೇ ತಥೈವ ಚ ।
ತೈಲಸ್ನಾನಮಕುರ್ವಾಣೋ ನರಕಂ ಪ್ರತಿಪದ್ಯತೇ ॥ 3 ॥

ತೈಲೇ ಲಕ್ಷ್ಮೀರ್ಜಲೇ ಗಂಗಾ ವತ್ಸರಾದಿತಿಥೌ ಶುಭೇ ।
ಅಲಕ್ಷ್ಮೀಪರಿಹಾರಾರ್ಥಂ ಮಂಗಲಸ್ನಾನಮಾಚರೇತ್ ॥ 4 ॥

ತೈಲಾಭ್ಯಂಗಸ್ನಾನಮಾದೌ ಚ ಕೃತ್ವಾ ಪೀಯೂಷೋತ್ಥಂ ಪಾರಿಭದ್ರಸ್ಯ ಪತ್ರಮ್ ।
ಭಕ್ಷೇತ್ ಸೌಖ್ಯಂ ಮಾನದಂ ವ್ಯಾಧಿನಾಶಂ ದೀರ್ಘಾಯುಷ್ಯಂ ಲಭ್ಯತೇ ವರ್ಷಮೂಲೇ ॥ 5 ॥

ಶತಾಯುರ್ವಜ್ರದೇಹಾಯ ಸರ್ವಸಂಪತ್ಕರಾಯ ಚ ।
ಸರ್ವಾರಿಷ್ಟವಿನಾಶಾಯ ನಿಂಬಕಂ ದಲಭಕ್ಷಣಮ್ ॥ 6 ॥

ಯಃ ಶೃಣೋತಿ ಮಧುಶುಕ್ಲಪಕ್ಷಕೇ ವರ್ಷನಾಥ ಸಚಿವಾದಿಕಂ ಫಲಮ್ ।
ಪ್ರಾಪ್ನುಯಾದ್ದುರಿತಮುಕ್ತವಿಗ್ರಹಃ ಚಾಯುರರ್ಥಮತುಲಂ ಯಶಃ ಸುಖಮ್ ॥ 7 ॥

ಶ್ರುತ್ವಾ ರಾಜಫಲಂ ಭವಂತಿ ಸುಖಿನೋ ಶ್ರುತ್ವಾಫಲಂ ಮಂತ್ರಿಣೋ
ಬುಧ್ಯುತ್ಸಾಹಸುಕೀರ್ತಯೋ ಭಟಪತೇಃ ಸಸ್ಯಾದಿನಾಥಸ್ಯ ಚ ।
ಶ್ರುತ್ವಾರ್ಘೇಶಫಲಂ ರಸಾಧಿಪಫಲಂ ಧಾನ್ಯಾದಿನಾಥಸ್ಯ ಚ ।
ಶ್ರುತ್ವಾನೀರಸನಾಯಕಸ್ಯ ಚ ಫಲಂ ಚೈಶ್ವರ್ಯವಂತಃ ಸದಾ ॥ 8 ॥

ಆಯುರ್ವೃದ್ಧಿಂ ಪುತ್ರಪೌತ್ರಾಭಿವೃದ್ಧಿಂ ನಿತ್ಯಾರೋಗ್ಯಂ ಸಂಪದಂ ಚಾನಪಾಯಾಮ್ ।
ಅಚ್ಛಿನ್ನಾನಾಮುತ್ಸವಾನಾಮವಾಪ್ತಿಂ ಯಚ್ಛಂತ್ಯಂತೇ ವತ್ಸರಾಧೀಶಮುಖ್ಯಾಃ ॥ 9 ॥

ತಿಥೇಶ್ಚ ಶ್ರಿಯಮಾಪ್ನೋತಿ ವಾರಾದಾಯುಷ್ಯವರ್ಧನಮ್
ನಕ್ಷತ್ರಾದ್ಧರತೇ ಪಾಪಂ ಯೋಗಾದ್ರೋಗನಿವಾರಣಮ್
ಕರಣಾತ್ಕಾರ್ಯಸಿದ್ಧಿಃಸ್ಯಾತ್ ಪಂಚಾಂಗ ಫಲಮುತ್ತಮಮ್ ॥ 10 ॥

ಇತೀದಂ ವತ್ಸರಫಲಂ ವತ್ಸರಾದಿತಿಥೌ ಶುಭಮ್ ।
ಯಃಶೃಣೋತಿ ನರೋ ಭಕ್ತ್ಯಾ ವತ್ಸರಂ ಸ ಸುಖೀ ಭವೇತ್ ॥ 11 ॥

ಸಾಂಗೋಪಾಂಗಂ ವತ್ಸರಸ್ಯ ಬ್ರಹ್ಮಣೋ ಜನ್ಮನಃ ಫಲಮ್ ।
ಯೇ ಶೃಣ್ವಂತಿ ಕ್ರತುಫಲಂ ಭಜಂತೇ ನಾತ್ರ ಸಂಶಯಃ ॥ 12 ॥

ಎಂದು ಇರುವುದರಿಂದ ಮೊದಲು ಬ್ರಹ್ಮನ ಆಯುಃ ಪ್ರಮಾಣಾದಿಗಳನ್ನು ತಿಳಿಸಬೇಕು.

## ಬ್ರಹ್ಮನ ದಿನವೆಂದರೆ

**'ಚತುರ್ಯುಗ ಸಹಸ್ರಾಣಿ ಬ್ರಹ್ಮಣೋ ದಿನಮುಚ್ಯತೇ'** ಎಂದು ಪ್ರಸಿದ್ಧವಾಗಿದೆ. ಇಂಥಾ ಬ್ರಹ್ಮನ ದಿನ ಅವನ ಆಯುಃಪ್ರಮಾಣವನ್ನೂ ಅನಿಷ್ಟ ನಿವೃತ್ತಿ ಪೂರ್ವಕ ಇಷ್ಟ ಫಲಪ್ರಾಪ್ತಿಗಾಗಿ ತಿಳಿಯಬೇಕು.

ಜಗತ್ತಿನ ಉತ್ಪತ್ತಿ–ಸ್ಥಿತಿ–ಲಯಗಳಿಗೆ ಕಾರಣನಾದ ಶ್ರೀಮಹಾವಿಷ್ಣುವಿನ ನಾಭಿ ಕಮಲದಿಂದುದಯಿಸಿದ ಬ್ರಹ್ಮನ ದಿನ ಪ್ರಮಾಣವನ್ನು ಮತ್ತು ಆ ದಿನದ ವಿಶೇಷವನ್ನೂ ಕೂಡ ತಿಳಿಯಬೇಕು. ಬ್ರಹ್ಮನ ಒಂದು ಹಗಲಿನಲ್ಲಿ ಕೃತ, ತ್ರೇತಾ, ದ್ವಾಪರ, ಕಲಿಯುಗಗಳು ಒಂದು ಸಾವಿರವಾದರೆ ಬ್ರಹ್ಮನ ಒಂದು ಹಗಲು, ಅಂತಹದೇ ಮತ್ತೊಂದು ರಾತ್ರಿ ಎಂದು ತಿಳಿಯಬೇಕು. ಇಂತಹ ಹಗಲು ರಾತ್ರಿಗಳು ಬ್ರಹ್ಮದೇವರಿಗೆ ಒಂದು ದಿನವೆಂದು ತಿಳಿಯಬೇಕು. ಇಂತಹ 360 ದಿನಗಳಿಗೆ ಒಂದು ವರ್ಷ. ಇಂಥಾ ನೂರು ವರ್ಷಗಳು ಬ್ರಹ್ಮನ ಆಯುಃ ಪ್ರಮಾಣವು. ಈ ನೂರು ವರ್ಷಗಳಲ್ಲಿ ಈಗ 50 ವರ್ಷಗಳು ಕಳೆದುಹೋಗಿವೆ. 2ನೇ ಪರಾರ್ಧವಾದ 51ನೇ ವರ್ಷದಲ್ಲಿ ಪ್ರಥಮವರ್ಷ, ಪ್ರಥಮ ಮಾಸ, ಪ್ರಥಮ ಪಕ್ಷ, ಪ್ರಥಮ ದಿನದ ಹಗಲು 13 ಘಳಿಗೆ 42 ಪಳಗಳು ಕಳೆದಿವೆ. ಇಷ್ಟರಲ್ಲಿ ಸ್ವಾಯಂಭುವ, ಸ್ವಾರೋಚಿಷ, ಉತ್ತಮ ತಾಪಸ, ರೈವತ, ಚಾಕ್ಷುಷವೆಂಬ ಆರು ಮನ್ವಂತರಗಳು ಕಳೆದು, ಸಪ್ತಮವಾದ ವೈವಸ್ವತ ಮನ್ವಂತರವು ನಡೆದಿದೆ.

ಮಹಾಯುಗ ಪ್ರಮಾಣ 43 ಲಕ್ಷ 20 ಸಹಸ್ರವರ್ಷ ಇಂಥಾ ಮಹಾಯುಗಗಳು ಎಪ್ಪತ್ತೊಂದಾದರೆ 1 ಮನ್ವಂತರ. ಅಂತಹ 14 ಮನ್ವಂತರಗಳು ಕೃತ ಪ್ರಮಾಣ ಸಂಖ್ಯೆ ಸರಿಯಾದ ವರ್ಷಗಳ ಕಾಲ ಮನ್ವಂತರದ ಸಂಧಿಕಾಲ. ಇಂಥಾ 14 ಸಂಧಿಗಳು ಮತ್ತು ಆದಿಯಲ್ಲಿ 1 ಸಂಧಿಕಾಲ ಸೇರಿ 15 ಸಂಧಿಕಾಲ ಸೇರಿದರೆ 1000 ಮಹಾಯುಗಗಳು ಆಗುತ್ತವೆ. ಇದೇ ಬ್ರಹ್ಮನ ಒಂದು ಹಗಲು ಅಂದರೆ ನಮ್ಮ 4,32,00,00,000 ನಾನೂರಮೂವತ್ತೆರಡು ಕೋಟಿ ವರ್ಷಗಳು.

**ಕೃತಯುಗ** ಪ್ರಮಾಣ 17 ಲಕ್ಷ 28 ಸಹಸ್ರವರ್ಷ. 4 ಪಾದಧರ್ಮ, ಅಸ್ಥಿಗತಪ್ರಾಣ, ಸತ್ಯವಾದಿಜನ, ಮನುಷ್ಯೋಚ್ಚತೆ 28 ಹಸ್ತ, ಆಯುಸ್ಸು 1 ಲಕ್ಷ ವರ್ಷ, 7 ಸಲ ಧಾನ್ಯೋತ್ಪತ್ತಿ, ಸುವರ್ಣ ಪಾತ್ರೆಗಳು, ರತ್ನಮಯ ವ್ಯಾಪಾರ, ಪುಣ್ಯ 20, ಪಾಪ 0.

**ತ್ರೇತಾಯುಗ** ಪ್ರಮಾಣ 12 ಲಕ್ಷ 96 ಸಹಸ್ರವರ್ಷ, 3 ಪಾದಧರ್ಮ, ಮಾಂಸಗತಪ್ರಾಣ, ಮನುಷ್ಯೋಚ್ಯತೆ 4 ಹಸ್ತ, ಆಯುಸ್ಸು 10 ಸಹಸ್ರ ವರ್ಷ, 4 ಸಲ ಧ್ಯಾನ್ಯೋತ್ಪತ್ತಿ, ರಜತ ಪಾತ್ರೆಗಳು, ಸುವರ್ಣ ವ್ಯಾಪಾರ, ಪುಣ್ಯ 15, ಪಾಪ 5.

**ದ್ವಾಪರಯುಗ** ಪ್ರಮಾಣ 8 ಲಕ್ಷ 64 ಸಹಸ್ರವರ್ಷ, 2 ಪಾದಧರ್ಮ, ರಕ್ತಗತಪ್ರಾಣ, ಮನುಷ್ಯೋಚ್ಯತೆ 7 ಹಸ್ತ, ಆಯುಸ್ಸು 1 ಸಹಸ್ರ ವರ್ಷ, 3 ಸಲ ಧಾನ್ಯೋತ್ಪತ್ತಿ, ತಾಮ್ರ ಪಾತ್ರೆಗಳು, ರಜತಮಯ ವ್ಯಾಪಾರ, ಪುಣ್ಯ 10 ಪಾಪ 10.

**ಕಲಿಯುಗ** ಪ್ರಮಾಣ 4 ಲಕ್ಷ 32 ಸಹಸ್ರವರ್ಷ, 1 ಪಾದ ಧರ್ಮ, ಅನ್ನಗತ ಪ್ರಾಣ, ಮನಷ್ಯೋಚ್ಚತಾ 3 1/2 ಹಸ್ತ, ಆಯುಸ್ಸು 120 ವರ್ಷ, ಅಸತ್ಯವಾದಿ ಜನ, 2 ಸಲ ಧಾನ್ಯೋತ್ಪತ್ತಿ – ಮಣ್ಣಿನ ಪಾತ್ರೆಗಳು, ತಾಮ್ರಮಯ ವ್ಯಾಪಾರ, ಪುಣ್ಯ 5, ಪಾಪ 15.

ಗತಕಲಿವರ್ಷಾ 5124 ಏಷ್ಯತ್ ಕಲಿವರ್ಷಾ 4,26877 ಈ ಯುಗದಲ್ಲಿ 6 ಜನ ರಾಜರು ಶಕ ಕರ್ತರು.

**ಯುಧಿಷ್ಠಿರ ಶಕವರ್ಷ 3044**
**ವಿಕ್ರಮ ಶಕವರ್ಷ 135**
**ಶಾಲಿವಾಹನ ಶಕವರ್ಷ 18000**
**ಗತಶಾಲಿವಾಹನ ಶಕವರ್ಷ 1947**
**ಏಷ್ಯತ್ ಶಾಲಿವಾಹನ ಶಕವರ್ಷ 16,055**
**ವಿಜಯಾಭಿನಂದನ ಶಕವರ್ಷ 10,000**
**ನಾಗಾರ್ಜುನ ಶಕವರ್ಷ 4,00,000**
**ಕಲ್ಕಿಭೂಪ ಶಕವರ್ಷ 824**

## ಪಂಚಾಂಗ ವಿಷಯ : ಸಂವತ್ಸರಗಳು – 60

| | | | | |
|---|---|---|---|---|
| ಪ್ರಭವ | ಪ್ರಮಾಥಿ | ಖರ | ಶೋಭನಕೃತ್ | ರಾಕ್ಷಸ |
| ವಿಭವ | ವಿಕ್ರಮ | ನಂದನ | ಕ್ರೋಧಿ | ನಳ |
| ಶುಕ್ಲ | ವಿಷು | ವಿಜಯ | ವಿಶ್ವಾವಸು | ಪಿಂಗಳ |
| ಪ್ರಮೋದ | ಚಿತ್ರಭಾನು | ಜಯ | ಪರಾಭವ | ಕಾಳಯುಕ್ತ |
| ಪ್ರಜೋತ್ಪತ್ತಿ | ಸುಭಾನು | ಮನ್ಮಥ | ಪ್ಲವಂಗ | ಸಿದ್ಧಾರ್ಥಿ |
| ಆಂಗೀರಸ | ತಾರಣ | ದುರ್ಮುಖಿ | ಕೀಲಕ | ರೌದ್ರ |
| ಶ್ರೀಮುಖ | ಪಾರ್ಥಿವ | ಹೇಮಲಂಬಿ | ಸೌಮ್ಯ | ದುರ್ಮತಿ |
| ಭಾವ | ವ್ಯಯ | ವಿಳಂಬಿ | ಸಾಧಾರಣ | ದುಂದುಭಿ |
| ಯುವ | ಸರ್ವಜಿತ್ | ವಿಕಾರಿ | ವಿರೋಧಿಕೃತ್ | ರುಧಿರೋದ್ಗಾರಿ |
| ಧಾತು | ಸರ್ವಧಾರಿ | ಶಾರ್ವರಿ | ಪರಿಧಾವಿ | ರಕ್ತಾಕ್ಷಿ |
| ಈಶ್ವರ | ವಿರೋಧಿ | ಪ್ಲವ | ಪ್ರಮಾದಿ | ಕ್ರೋಧನ |
| ಬಹುಧಾನ್ಯ | ವಿಕೃತಿ | ಶುಭಕೃತ್ | ಆನಂದ | ಕ್ಷಯ |

## ಋತುಗಳು – 6

| | | |
|---|---|---|
| 1. ವಸಂತ ಋತು | 3. ವರ್ಷ ಋತು | 5. ಹೇಮಂತ ಋತು |
| 2. ಗ್ರೀಷ್ಮ ಋತು | 4. ಶರದೃತು | 6. ಶಿಶಿರಋತು |

## ಮಾಸಗಳು – 12

| | | |
|---|---|---|
| 1. ಚೈತ್ರ | 5. ಶ್ರಾವಣ | 9. ಮಾರ್ಗಶಿರ |
| 2. ವೈಶಾಖ | 6. ಭಾದ್ರಪದ | 10. ಪುಷ್ಯ |
| 3. ಜ್ಯೇಷ್ಠ | 7. ಆಶ್ವಯುಜ | 11. ಮಾಘ |
| 4. ಆಷಾಢ | 8. ಕಾರ್ತೀಕ | 12. ಫಾಲ್ಗುಣ |

## ನಕ್ಷತ್ರಗಳು – 27

| | | | |
|---|---|---|---|
| 1. ಅಶ್ವಿನೀ | 8. ಪುಷ್ಯಾ | 15. ಸ್ವಾತೀ | 22. ಶ್ರವಣಾ |
| 2. ಭರಣೀ | 9. ಆಶ್ಲೇಷಾ | 16. ವಿಶಾಖಾ | 23. ಧನಿಷ್ಠಾ |
| 3. ಕೃತ್ತಿಕಾ | 10. ಮಘಾ | 17. ಅನುರಾಧಾ | 24. ಶತಭಿಷಾ |
| 4. ರೋಹಿಣೀ | 11. ಪೂ.ಫಲ್ಗುನೀ | 18. ಜ್ಯೇಷ್ಠಾ | 25. ಪೂ.ಭಾ |
| 5. ಮೃಗಶಿರಾ | 12. ಉ.ಫಲ್ಗುನೀ | 19. ಮೂಲಾ | 26. ಉ.ಭಾ |
| 6. ಆರ್ದ್ರಾ | 13. ಹಸ್ತಾ | 20. ಪೂ.ಷಾಢಾ | 27. ರೇವತೀ |
| 7. ಪುನರ್ವಸು | 14. ಚಿತ್ತಾ | 21. ಉ.ಷಾಢಾ | |

## ತಿಥಿಗಳು – 15

| | | | | |
|---|---|---|---|---|
| 1. ಪ್ರತಿಪತ್ | 4. ಚೌತಿ | 7. ಸಪ್ತಮೀ | 10. ದಶಮೀ | 13.ತ್ರಯೋದಶೀ |
| 2. ದ್ವಿತೀಯಾ | 5. ಪಂಚಮೀ | 8. ಅಷ್ಟಮೀ | 11. ಏಕಾದಶೀ | 14.ಚತುರ್ದಶೀ |
| 3. ತೃತೀಯಾ | 6. ಷಷ್ಠೀ | 9. ನವಮೀ | 12. ದ್ವಾದಶೀ | 15.ಪೂರ್ಣಿಮಾ – ಅಮಾವಾಸ್ಯಾ |

## ಯೋಗಗಳು – 27

| | | | |
|---|---|---|---|
| 1. ವಿಷ್ಕಂಭ | 8. ಧೃತಿ | 15. ವಜ್ರ | 22. ಸಾಧ್ಯ |
| 2. ಪ್ರೀತಿ | 9. ಶೂಲ | 16. ಸಿದ್ಧಿ | 23. ಶುಭ |
| 3. ಆಯುಷ್ಮಾನ್ | 10. ಗಂಡ | 17. ವ್ಯತೀಪಾತ | 24. ಶುಕ್ಲ |
| 4. ಸೌಭಾಗ್ಯ | 11. ವೃದ್ಧಿ | 18. ವರೀಯಾನ್ | 25. ಬ್ರಹ್ಮ |
| 5. ಶೋಭನ | 12. ಧ್ರುವ | 19. ಪರಿಘ | 26. ಐಂದ್ರ |
| 6. ಅತಿಗಂಡ | 13. ವ್ಯಾಘಾತ | 20. ಶಿವ | 27. ವೈಧೃತಿ |
| 7. ಸುಕರ್ಮ | 14. ಹರ್ಷಣ | 21. ಸಿದ್ಧ | |

**ಕರಣಗಳು – 11**

| | | | |
|---|---|---|---|
| 1. ಬವ | 4. ತೈತಿಲ | 7. ಭದ್ರ | 10. ನಾಗವಾನ್ |
| 2. ಬಾಲವ | 5. ಗರಜ | 8. ಶಕುನಿ | 11. ಕಿಂಸ್ತುಘ್ನ |
| 3. ಕೌಲವ | 6. ವಣಿಕ್ | 9. ಚತುಷ್ಪಾತ್ | |

**ವಾರಗಳು – 7**

| | | |
|---|---|---|
| 1. ರವಿವಾರ | 4. ಬುಧವಾರ | 7. ಶನಿವಾರ |
| 2. ಸೋಮವಾರ | 5. ಗುರುವಾರ | |
| 3. ಮಂಗಳವಾರ | 6. ಶುಕ್ರವಾರ | |

## ಶ್ರೀ ವಿಶ್ವಾವಸು ನಾಮ ಸಂವತ್ಸರದ ರಾಜಾದಿ ನವನಾಯಕರು

| | | | | | |
|---|---|---|---|---|---|
| **ರಾಜ** | : | ರವಿ | **ಮಂತ್ರಿ** | : | ಚಂದ್ರ |
| **ಸೇನಾಧಿಪ** | : | ರವಿ | **ಪೂರ್ವಸಸ್ಯಾಧಿಪ** | : | ಗುರು |
| **ಪರಸಸ್ಯಾಧಿಪ** | : | ಚಂದ್ರ | **ಧಾನ್ಯಾಧಿಪ** | : | ಮಂಗಳ |
| **ರಸಾಧಿಪ** | : | ಶನಿ | **ನೀರಸಾಧಿಪ** | : | ಬುಧ |
| **ಅರ್ಘಾಧಿಪ** | : | ರವಿ | **ಮೇಘಾಧಿಪ** | : | ರವಿ |

### ಉಪನಾಯಕರು

| | | | | | |
|---|---|---|---|---|---|
| **ಪಶ್ವಾಧಿಪ** | : | ಗುರು | **ಕೋಶಾಧಿಪ** | : | ಗುರು |
| **ಅಶ್ವಾಧಿಪ** | : | ಶನಿ | **ಗಜಾಧಿಪ** | : | ಚಂದ್ರ |
| **ಯುದ್ಧಾಧಿಪ** | : | ರವಿ | **ವ್ಯಾಪಾರಾಧಿಪ** | : | ರವಿ |
| **ಛತ್ರಾಧಿಪ** | : | ಬುಧ | **ವ್ಯವಹಾರಾಧಿಪ** | : | ಶುಕ್ರ |
| **ದೇವಾಧಿಪ** | : | ಬುಧ | **ದ್ರವ್ಯಾಧಿಪ** | : | ರವಿ |
| **ನರಾಧಿಪ** | : | ಬುಧ | **ವಸ್ತ್ರಾಧಿಪ** | : | ಶುಕ್ರ |
| **ಸ್ತ್ರೀಣಾಮಧಿಪ** | : | ಚಂದ್ರ | **ರತ್ನಾಧಿಪ** | : | ರವಿ |
| **ಸರ್ಪಾಧಿಪ** | : | ರವಿ | **ಮಾಂಗಲ್ಯಾಧಿಪ** | : | ಶನಿ |
| **ಮೃಗಾಧಿಪ** | : | ಗುರು | **ವೃಕ್ಷಾಧಿಪ** | : | ಮಂಗಳ |
| **ಪಶುನಾಯಕ** | : | ಯಮ | **ಸರ್ವೇಷಾಮಧಿಪ** | : | ರವಿ |

## ಶ್ರೀ ವಿಶ್ವಾವಸು ನಾಮ ಸಂವತ್ಸರ ಫಲಂ

**ಸರ್ವತ್ರ ಜಾಯತೇ ಕ್ಷೇಮಂ ಸರ್ವದೇಶೇ ಮಹಾರ್ಘತಾ।**
**ವಿಶ್ವಾವಸು ಸಮೇ ವೃದ್ಧಿಃ ಕಾಷ್ಟಲೋಹೇ ಮಹಾರ್ಘತಾ ॥**

ಶ್ರೀ ವಿಶ್ವಾವಸು ನಾಮ ಸಂವತ್ಸರದಲ್ಲಿ ದೇಶದೆಲ್ಲೆಡೆ ಕ್ಷೇಮವುಂಟಾಗುವುದು. ಸಕಲ ರೀತಿಯಲ್ಲಿ ತೇಜಿಯುಂಟಾಗುವುದು. ಕಟ್ಟಿಗೆ ಮತ್ತು ಲೋಹದ ವಸ್ತುಗಳು ತೇಜಿಯಿಂದ ಮಾರಾಟವಾಗುವವು.

### ರಾಜಾ ರವಿ ಫಲಂ

**ಸೂರ್ಯೇ ನೃಪೇ ಸ್ವಲ್ಪ ಜಲಾಶ್ಚ ಮೇಘಾಃ ಸ್ವಲ್ಪಂ ಪಯೋ ಗೋಷು ಜನೇಷು ಪೀಡಾ।**
**ಸ್ವಲ್ಪಂ ಚ ಧಾನ್ಯಂ ಫಲಮಲ್ಪವೃಕ್ಷಾಃ ಚೋರಾಗ್ನಿಶಂಕಾ ಮರಣಂ ನೃಪಾಣಾಮ್ ॥**

ರವಿಯು ರಾಜನಾಗಿರುವುದರಿಂದ ಮೋಡಗಳು ಅಲ್ಪ ಮಳೆಯನ್ನು ಸುರಿಸುವವು. ಇದರಿಂದ ದನಕರುಗಳು ಕಡಿಮೆ ಹಾಲನ್ನು ಕೊಡುವುದು. ಜನರಲ್ಲಿ ನಾನಾ ವಿಧವಾದ ತೊಂದರೆ ತಲೆದೋರುವುದು. ಬೆಳೆಗಳು ಅಲ್ಪವಾಗಿ ಬೆಳೆಯುವುದು. ವೃಕ್ಷಗಳು ಕಡಿಮೆ ಫಲವನ್ನು ನೀಡುವುದು. ದೇಶದೆಲ್ಲೆಡೆ ಕಳ್ಳಕಾರರ ಭಯ ಮತ್ತು ಅಗ್ನಿಯ ಪೀಡೇಯು ತಲೆದೋರಿದರೆ ನಾಯಕರುಗಳಿಗೆ ಅಕಾಲ ಮರಣವುಂಟಾಗುವುದು.

### ಮಂತ್ರಿ ಚಂದ್ರ ಫಲಮ್

**ಆನಂದಃ ಸರ್ವಲೋಕಾನಾಂ ಭೂಪಾನಾಂ ಧನದಾ ಪ್ರಜಾಃ ।**
**ಪಚ್ಯಂತಿ ಶಾಲಿಗೋಧೂಮಾಃ ಯತ್ರ ಮಂತ್ರೀ ಶಶೀ ಭವೇತ್ ॥**

ಈ ವರ್ಷ ಮಂತ್ರಿಯು ಚಂದ್ರನಾಗಿರುವುದರಿಂದ ಪ್ರಜೆಗಳೆಲ್ಲರೂ ಆನಂದ ತುಂಬಿದವರಾಗುವರು. ಪ್ರಜೆಗಳೆಲ್ಲರೂ ರಾಜರುಗಳಿಗೆ ಕಪ್ಪ ಕಾಣಿಕೆಗಳನ್ನು ಸಮರ್ಪಿಸುವರು. ಶಾಲಿ, ಗೋಧಿ ಮುಂತಾದ ಆಹಾರ ಪದಾರ್ಥಗಳು ತೇಜಿಯಿಂದ ಮಾರಾಟವಾಗುವುದು.

**ಸೇನಾಧಿಪ ರವಿ ಫಲಮ್**

**ಅನ್ಯೋನ್ಯವೈರಂ ಧರಣೀಶ್ವರಾಣಾಮಲ್ಪಂ ಪಯೋ ವಾರಿಧರಾ ಸವಾತಾಃ ।**
**ರತ್ನಾನಿ ಧಾನ್ಯಾನಿ ಭವಂತಿ ಭೂಮೌ ಸೇನಾಧಿಪತ್ಯೇ ದಿವಸಾದಿನಾಥೇ ।**

ದೇಶವನ್ನು ಆಳುವವರಲ್ಲಿ ಅನ್ಯೋನ್ಯತೆಯಿದ್ದರೂ ವೈರತ್ವವುಂಟಾಗುವುದು. ರತ್ನಗಳು, ಧಾನ್ಯಗಳ ಬೆಲೆಯು, ಹೇರಳವು, ಗಾಳಿಯಿಂದ ಕೂಡಿದ ಅಲ್ಪಮಳೆ ಬೀಳುವುದು.

**ಪೂರ್ವಸಸ್ಯಾಧಿಪ ಗುರು ಫಲಮ್**

**ಆನಂದಃ ಸರ್ವಲೋಕಾನಾಂ ಸವೃಷ್ಟಿಶ್ಚ ಪ್ರಜಾಯತೇ ।**
**ನಿಷ್ಪತ್ತಿಃ ಸರ್ವಸಸ್ಯಾನಾಂ ಯತ್ರ ಸಸ್ಯಾಧಿಪೇ ಗುರೌ ॥**

ಗುರುವು ಪೂರ್ವಸಸ್ಯಾಧಿಪತಿಯಾಗಿರುವುದರಿಂದ ದೇಶದಲ್ಲಿ ಉತ್ತಮ ಮಳೆ ಬೀಳುವುದು. ಎಲ್ಲಾ ರೀತಿಯ ಸಸ್ಯಗಳು ಉತ್ತಮ ಫಸಲನ್ನು ನೀಡುವುದು. ಇದರಿಂದ ಸಕಲ ಪ್ರಜೆಗಳೂ ಸಂತೋಷವನ್ನು ಹೊಂದುವರು.

**ಪರಸಸ್ಯಾಧಿಪ ಚಂದ್ರ ಫಲಮ್**

**ಸಮರ್ಘಂ ಜಾಯತೇ ಧಾನ್ಯಂ ಸರ್ವಂ ವೃಷ್ಟಿರನುತ್ತಮಾ ।**
**ಸರ್ವ ಧಾನ್ಯಾನಿ ಪಚ್ಯಂತೆ ಯತ್ರ ಸಸ್ಯಾಧಿಪಶ್ಶಶೀ ॥**

ಚಂದ್ರನು ಪರಸಸ್ಯಾಧಿಪತಿಯಾಗಿರುವುದರಿಂದ ಉತ್ತಮ ಮಳೆ, ಧಾನ್ಯಗಳ ಸಂವೃದ್ಧಿ, ಧಾನ್ಯಗಳಿಗೆ ಹೆಚ್ಚಿನ ಬೆಲೆ ಉಂಟು ಮಾಡುತ್ತಾನೆ.

**ಧಾನ್ಯಾಧಿಪ ಕುಜ ಫಲಮ್**

**ವಿಷಮಂ ಚ ಜಗತ್ಸರ್ವಂ ವ್ಯಾಕುಲಂ ಭವತಿ ಧ್ರುವಮ್ ।**
**ಪ್ರಜಾನಾಶಾಃ ಪ್ರಜಾಯಂತೇ ಧಾನ್ಯಾನಾಮಧಿಪೇ ಕುಜೇ ॥**

ಧಾನ್ಯಾಧಿಪತಿಯು ಕುಜನಾಗಿರುವುದರಿಂದ ಪ್ರಪಂಚದಲ್ಲಿ ತಿಳಿಯಲು ಅಸಾಧ್ಯವಾದ ವಿಷಮತೆಯಿಂದ ಕೂಡಿರುವುದು. ಅಲ್ಲದೇ ಪ್ರಜೆಗಳ ನಾಶವುಂಟಾಗುವುದು.

**ರಸಾಧಿಪ ಶನಿ ಫಲಮ್**

**ರಸೇಶಶ್ಚ ಯದಾ ಶೌರೀ ದುಃಖಿತಾಃ ಸರ್ವಜಂತವಃ ।**
**ನಶ್ಯಂತಿ ಪಶವಸ್ತತ್ರ ಧಾನ್ಯಂ ಚೈವ ಮಹರ್ಘತಾ ॥**

ಶನಿ ರಸಾಧಿಪತಿಯಾಗಿರುವುದರಿಂದ ಎಲ್ಲರೂ ದುಃಖವನ್ನು ಅನುಭವಿಸುವರು. ಪಶುಗಳ ನಾಶವಾಗುವುದು ಹಾಗೂ ಧಾನ್ಯಗಳಿಗೆ ಹೆಚ್ಚಿನ ಬೆಲೆ ಬರುವುದು.

**ನೀರಸಾಧಿಪ ಬುಧ ಫಲಮ್**

**ಗಾರುಡಾತ್ಮನಿ ರತ್ನಾನಿ ಧಾನ್ಯಾನಿ ವಿವಿಧಾನಿ ಚ ।**
**ಸವರ್ಣಂ ವೃದ್ಧಿಮಾಯಾತಿ ಬುಧೇ ನೀರಸನಾಯಕೇ ॥**

ನೀರಸಾಧಿಪ ಬುಧನಾಗಿರುವುದರಿಂದ ಗರುಡನಿಗೆ ಸಂಬಂಧವಾದ ಬಣ್ಣದ ರತ್ನಗಳು, ವಿವಿಧ ಧಾನ್ಯಾದಿಗಳು ಚೆನ್ನಾಗಿ ವೃದ್ಧಿಯಾಗುತ್ತದೆ.

**ಅರ್ಘಾಧಿಪ ರವಿ ಫಲಮ್**

**ಸಮರ್ಘಮಲ್ಪವೃಷ್ಟಿಶ್ಚ ಪ್ರಜಾನಾಂ ಕ್ಷುದ್ಭಯಂ ತಥಾ ।**
**ರಾಜ್ಞಾಂ ಪರಸ್ಪರಃ ಕ್ರೋಧಃ ಸೂರ್ಯೇ ತ್ವರ್ಘಾಧಿಪೇ ಸತಿ ॥**

ಅರ್ಘಾಧಿಪತಿ ರವಿಯಾಗಿರುವುದರಿಂದ ತೇಜಿಯು ಸಮವಾಗಿರುವುದು. ಅಲ್ಪವೃಷ್ಟಿಯಿಂದ ಪ್ರಜೆಗಳು ಹಸಿವೆಯಿಂದ ಬಳಲುತ್ತಾರೆ. ರಾಜರುಗಳು ಪರಸ್ಪರ ಕ್ರೋಧದಿಂದಿರುತ್ತಾರೆ.

**ಮೇಘಾಧಿಪ ರವಿ ಫಲಮ್**

**ಸೂರ್ಯೇ ಮೇಘಾಧಿಪೇ ಜಾತೇ ವ್ಯಾಕುಲಾ ಪೃಥಿವೀ ತದಾ ।**
**ಕ್ವಚಿತ್ಪುಷ್ಪಾ ಕ್ವಚಿತ್ಸ್ವಲ್ಪಾ ಮೇಘಾಂತೇ ವರ್ಷತೇ ತದಾ ॥**

ಮೇಘಾಧಿಪತಿಯು ರವಿಯಾಗಿರುವುದರಿಂದ ಅಲ್ಲಲ್ಲಿ ಸ್ವಲ್ಪ ಮಳೆ ಬೀಳುವುದು. ಪ್ರಪಂಚದಲ್ಲಿ ಪ್ರಜರಿಗೆ ವ್ಯಾಕುಲವುಂಟಾಗುತ್ತದೆ.

**ಪಶುಪಾಲಕ ಯಮ ಫಲಮ್**

**ಅನರ್ಘಮಲ್ಪವೃಷ್ಟಿಶ್ಚ ಅಲ್ಪಕ್ಷೀರಂ ತಥಾ ತೃಣಮ್ ।**
**ಪಶುಪೀಡಾ ಭವೇನ್ನಿತ್ಯಂ ಯಮಶ್ಚೇತ್ಪಶುನಾಯಕೇ ॥**

ಯಮನು ಪಶುಪಾಲಕನಾಗಿರುವುದರಿಂದ ದೇಶದೆಲ್ಲೆಡೆ ಅನಾವೃಷ್ಟಿಯಾಗುವುದರಿಂದ ಹುಲ್ಲು, ಮೇವು ಅಲ್ಪವಾಗಿ ಬೆಳೆಯುವುವು. ಗೋವು, ಮಹಿಷ ಮುಂತಾದವುಗಳು ಅಲ್ಪ ಹಾಲನ್ನು ಕೊಡುವವು. ಅಲ್ಲದೇ ಪಶುಗಳಿಗೆ ಘೋರಪೀಡೆಯುಂಟಾಗುವುದು.

**ಕಾಲ ನಾಮಕ ಮೇಘ ಫಲಮ್**

**ಮಧ್ಯದೇಶೇ ಸುವೃಷ್ಟಿಃ ಸ್ಯಾತ್ ನೈರಂತರ್ಯಂ ಮಹಾಜಲಮ್ ।**
**ಫಲಂತಿ ಸರ್ವಧಾನ್ಯಾನಿ ಕಾಲಮೇಘಸ್ಯ ಲಕ್ಷಣಮ್ ॥**

ಕಾಲನಾಮಕ ಮೇಘವು ಮೇರುಶಿಖರದಲ್ಲಿ ಉತ್ಪತ್ತಿಯಾಗಿ ಮಧ್ಯ ದೇಶದಲ್ಲಿ ನಿರಂತರವಾಗಿ ಉತ್ತಮ ಮಳೆಯು ಬೀಳುವುದು. ಎಲ್ಲಾ ರೀತಿಯ ಬೆಳೆಗಳು ಉತ್ತಮವಾಗಿ ಬೆಳೆದು ತೇಜಿಯಲ್ಲಿ ಮಾರಾಟವಾಗುವವು.

**ವೃಷಭಗತ ಗುರುಚಾರಫಲಮ್**

**ವೃಷರಾಶಿಗತೇ ಜೀವೇ ಶಿಶುಸ್ತ್ರೀಪತಿನಾಶನ, ।**
**ಮಧ್ಯವೃಷ್ಟಿಃ ಸಸ್ಯಹಾನಿಃ ನೃಪಾಣಾಂ ಸಮರೋ ಮಹಾನ್ ॥**

ಗುರುವು ವೃಷಭರಾಶಿಯಲ್ಲಿ ಸಂಚರಿಸುವಾಗ ಶಿಶುಗಳ, ಪುರುಷರ ನಾಶ, ಮಳೆಯು ಮಧ್ಯಮ ಸ್ತರದಲ್ಲಿ ಬೀಳುವುದು. ಇದರಿಂದ ಸಸ್ಯಗಳ ನಾಶ, ರಾಜರುಗಳ ಮಧ್ಯೆ ಯುದ್ಧವು ನಡೆಯುವುದು.

**ಮಿಥುನಗತ ಗುರುಚಾರ ಫಲಮ್**

**ಸುರೇಂದ್ರಪೂಜ್ಯೇ ಯದಿ ಯುಗ್ಮರಾಶಿಗೇ ಭೂಮೌ ಕ್ಷಿತೀಶಾಃ ಕಲಹಪ್ರಿಯಾ ಸ್ಯುಃ ।**
**ಯುದ್ಧಭಯಂ ಸಸ್ಯಭಯಂ ಜನಾನಾಂ ಕ್ವಚಿತ್ಪ್ರವರ್ಷಂತಿ ಪಯೋಧರಾಶ್ಚ ॥**

ಗುರುವು ಮಿಥುನ ರಾಶಿಯಲ್ಲಿ ಸಂಚರಿಸುವಾಗ ಭೂಮಿಯಲ್ಲಿರುವ ರಾಜರುಗಳು ಪರಸ್ಪರ ಕಲಹದಲ್ಲಿ ತೊಡಗುವರು. ಜನರುಗಳಿಗೆ ಯುದ್ಧಭಯ ಉಂಟಾಗುವುದು. ಮೋಡಗಳು ಕೆಲವೆಡೆ ಮಳೆ ಸುರಿಸುವುದರಿಂದ ಸಸ್ಯಗಳು ಅಲ್ಪ ಬೆಳೆ ನೀಡುವುವು.

**ಕುಂಭಗತ ಶನಿಚಾರ ಫಲಮ್**

**ಮಂದೇ ಘಟಸ್ಥೇ ಸತಿ ವೃಷ್ಟಿನಾಶೋ ರಾಜ್ಞಾಂ ಭಯಂ ಸಸ್ಯಲಯೋ ನರಾಣಾಮ್।**
**ಭಿಷಗ್ವರಾಣಾಂ ಚ ಕವೀಶ್ವರಾಣಾಂ ಕೋಶಾಧಿಪಾನಾಂ ಚ ಮಹದ್ಭಯಂ ಸ್ಯಾತ್॥**

ಶನಿಯು ಕುಂಭರಾಶಿಯಲ್ಲಿರುವಾಗ ಮಳೆಯ ನಾಶ, ರಾಜರುಗಳಿಗೆ ಭಯ, ಸಸ್ಯಗಳ ನಾಶ, ಮನುಷ್ಯರಿಗೆ, ವೈದ್ಯರಿಗೆ, ಕವಿಗಳಿಗೆ, ಧನಿಕರಿಗೆ ಮಹದ್ಭಯವುಂಟಾಗುವುದು.

**ಮೀನಗತ ಶನಿಚಾರ ಫಲಮ್**

**ಮೀನಸ್ಥಿತೇ ಸೂರ್ಯಸುತೇ ಧರಿತ್ರೀ ವಿನಷ್ಟಸಸ್ಯಾನಿ ವಿವಿಧಾಪಮೃತ್ಯುಃ ।**
**ನದ್ಯಶ್ಚ ಗೋದಾವನಿತಾಹಿರಣ್ಯಂ ಮೃಗ್ಯಂ ಭಯಂ ದಾರುಣಕರ್ಮಭೂಪಾಃ ॥**

ಶನಿಯು ಮೀನರಾಶಿಯಲ್ಲಿರುವಾಗ ಸಸ್ಯಗಳು ನಾಶ ಹೊಂದುವವು, ಜನರು ವಿವಿಧ ಅಪಮೃತ್ಯುವಿಗೆ ಒಳಗಾಗುವರು. ನದಿಗಳು, ಹಸುಗಳು, ಸ್ತ್ರೀಯರು, ಕನಕಾದಿ ವಸ್ತುಗಳು ತೇಜಿಯಾಗುವುವು. ರಾಜರುಗಳು ದಾರುಣವಾದ ಕರ್ಮಗಳಲ್ಲಿ ನಿರತರಾಗುವರು.

**ಆರ್ದ್ರಾಪ್ರವೇಶ ಫಲಮ್**

ಈ ವರ್ಷ ಆರ್ದ್ರಾ ನಕ್ಷತ್ರವು 22–06–2025 ಭಾನುವಾರ ಜ್ಯೇಷ್ಠ ಕೃಷ್ಣ ದ್ವಾದಶಿ, ಭರಣಿ ನಕ್ಷತ್ರದಲ್ಲಿ ಮಧ್ಯಾಹ್ನ 14.44 ನಿಮಿಷಕ್ಕೆ (21ಘಟಿ 44 ಘಳ) ಪ್ರವೇಶವಾಗಿರುವುದರಿಂದ ದೇಶದೆಲ್ಲೆಡೆ ಮಳೆ ಸಮೃದ್ಧಿಯಾಗಿ ಬೆಳೆಗಳು ಉತ್ತಮಫಲವನ್ನು ಕೊಡುವವು.

**ದ್ವಾದಶಿ ಫಲಮ್ :** ಸಮಸ್ತ ಪ್ರಜೆಗಳು ನಾನಾವಿಧವಾದ ಶುಭಫಲಗಳನ್ನು ಹೊಂದುವರು.

**ರವಿವಾರ ಫಲಮ್ :** ಪಶುಗಳ ನಾಶ.

**ಭರಣಿ ನಕ್ಷತ್ರ ಫಲಮ್ :** ರೋಗವು ಬಹುವಿಧವಾಗಿ ಕಾಡುವುದು.

**ಸುಕರ್ಮ ಯೋಗ ಫಲಮ್ :** ಬ್ರಾಹ್ಮಣರು ಉತ್ತಮ ಕಾರ್ಯಗಳಲ್ಲಿ ತೊಡಗುವರು.

**ಮಧ್ಯಾಹ್ನ ಪ್ರವೇಶ ಫಲಮ್ :** ದೇಶದೆಲ್ಲೆಡೆ ಕಡಿಮೆ ಮಳೆಯು ಆಗುವುದರಿಂದ ಸಸ್ಯಗಳು ಉತ್ತಮ ಬೆಳೆಯನ್ನು ನೀಡಲಾರವು. ಕಳ್ಳಕಾಕರ ಭಯವು ಹೆಚ್ಚಾಗುವುದು.

**ವೃಷ್ಟಿ ಪ್ರಮಾಣ** 2 ಅಧಿಕ ವೃಷ್ಟಿಯಾಗುತ್ತದೆ.

**ದಶಭಾಗಾಃ ಸಮುದ್ರೇಷು ಷಡ್ಭಾಗಾಃ ಪರ್ವತೇಷು ಚ ।**
**ಚತ್ವಾರೋ ಭುವಿ ಪರ್ಜನ್ಯೋ ಹ್ಯೇವಂ ವರ್ಷತಿ ಚ ತ್ರಿಧಾ ॥**

**ಗುರು–ಶುಕ್ರಾಸ್ತ ವಿಚಾರ:** ಗುರುವು 14.06.2025 ಜ್ಯೇಷ್ಠ ಕೃಷ್ಣ ತೃತೀಯ ಶನಿವಾರದಂದು ಪಶ್ಚಿಮದಲ್ಲಿ ಅಸ್ತನಾಗಿ 06.07.2025 ಆಷಾಢ ಶುಕ್ಲ ಏಕಾದಶಿ ರವಿವಾರದಂದು ಪೂರ್ವದಲ್ಲಿ ಉದಯಿಸುವನು.

ಶುಕ್ರನು 13.12.2025 ಮಾರ್ಗಶಿರ ಕೃಷ್ಣ ನವಮೀ ಶನಿವಾರದಂದು ಪಶ್ಚಿಮದಲ್ಲಿ ಅಸ್ತನಾಗಿ 31.01.2026 ಮಾಘ ಶುಕ್ಲ ಚತುರ್ದಶಿ ಶನಿವಾರದಂದು ಪೂರ್ವದಲ್ಲಿ ಉದಯಿಸುವನು.

## ಕರ್ಕ ಸಂಕ್ರಮಣ

ಶ್ರೀ ವಿಶ್ವಾವಸುನಾಮ ಸಂವತ್ಸರ ಆಷಾಢ ಕೃಷ್ಣ ಸಪ್ತಮೀ ದಿನಾಂಕ 17–07–2026 ರಂದು ಬೆಳಗಿನ ಜಾವ 05–36 ಗಂ.ನಿ. (59ಘ.19ಫ)ಕ್ಕೆ ಸೂರ್ಯನು ಉತ್ತರಾಭಾದ್ರಾ ನಕ್ಷತ್ರದಲ್ಲಿ ಕರ್ಕ ರಾಶಿಯನ್ನು ಪ್ರವೇಶಮಾಡುತ್ತಾನೆ.

ವಿಂಶತಿ (ತ್ರಿಂಶತಿ ವಾ) ಕರ್ಕಟಗೇ ಪೂರ್ವೇ.. ಎನ್ನುವ ಪ್ರಮಾಣದಂತೆ ಕರ್ಕಾಟಕ ಸಂಕ್ರಮಣದಲ್ಲಿ ಸಂಕ್ರಮಣಕ್ಕಿಂತ ಪೂರ್ವದಲ್ಲಿ 30 ಘಳಿಗೆ ಸಂಕ್ರಮಣ ಪುಣ್ಯಕಾಲ ಎಂದಿರುವುದು. ಸೂರ್ಯನು ಕರ್ಕರಾಶಿಯನ್ನು 17–07–2025ರಂದು ಬೆಳಗಿನ ಜಾವ 5.36ನಿ.ಕ್ಕೆ ಪ್ರವೇಶ ಮಾಡುತ್ತಿರುವುದರಿಂದ 16–07–2025 ರಂದು ಮಧ್ಯಾಹ್ನ 12–20ನಿ.ದಿಂದ ಸೂರ್ಯಾಸ್ತದವರೆಗೆ ಕರ್ಕಸಂಕ್ರಮಣದ ನಿಮಿತ್ತ ದಕ್ಷಿಣಾಯನ ಪರ್ವಪುಣ್ಯಕಾಲವಿರುವುದು. ಈ ಪ್ರಯುಕ್ತ ಸ್ನಾನ, ತರ್ಪಣ, ದಾನಾದಿಗಳನ್ನು ಮಾಡಬೇಕು.

ವೃಂದಾವನಗಳಿಗೆ ಬೆಳಿಗ್ಗೆ ಜಲಾಭಿಷೇಕ, ಮತ್ತೊಮ್ಮೆ ಪರ್ವಕಾಲ ಪ್ರಯುಕ್ತ 12.20ರ ನಂತರ ಜಲಾಭಿಷೇಕ, ನಂತರ ಪಂಚಾಮೃತ, ದೇವಪೂಜೆ, ನೈವೇದ್ಯ, ವೈಶ್ವದೇವ, ಹಸ್ತೋದಕಾದಿಗಳನ್ನು ಪ್ರತಿನಿತ್ಯದಂತೆ ಮಾಡಬೇಕು.

## ಮಕರ ಸಂಕ್ರಮಣ

ಶ್ರೀ ವಿಶ್ವಾವಸು ನಾಮ ಸಂವತ್ಸರ ಪುಷ್ಯ ಕೃಷ್ಣ ಏಕಾದಶೀ ಬುಧವಾರ 14.01.2026 ರಾತ್ರಿ 8–56ನಿ.(35.16–ಘ.ಪಳ) ಕ್ಕೆ ಅನುರಾಧಾ ನಕ್ಷತ್ರದಲ್ಲಿ ಸೂರ್ಯನು ಮಕರರಾಶಿಯನ್ನು ಪ್ರವೇಶಿಸುತ್ತಾನೆ. ಆದ್ದರಿಂದ 13.01.2026 ಮಂಗಳವಾರದಂದು ಭೋಗಿಹಬ್ಬ.

**ಸಂಕ್ರಮಣ ಪುಣ್ಯಕಾಲ :** ಶ್ರೀ ವಿಶ್ವಾವಸು ನಾಮ ಸಂವತ್ಸರ ಪುಷ್ಯಮಾಸ ಕೃಷ್ಣಪಕ್ಷ ಏಕಾದಶೀ ಬುಧವಾರ ದಿನಾಂಕ 14.01.2026ರ ರಾತ್ರಿ 8–56ನಿ. (35.16 ಘ.ಫ) ಕ್ಕೆ ಅನುರಾಧ ನಕ್ಷತ್ರದಲ್ಲಿ ಸೂರ್ಯನು ಮಕರರಾಶಿಯನ್ನು ಪ್ರವೇಶಿಸುತ್ತಾನೆ. ಆದ್ದರಿಂದ 15.01.2026 ಗುರುವಾರದಂದು ಸೂರ್ಯೋದಯದಿಂದ ಬೆಳಿಗ್ಗೆ 8.56ನಿ. ವರೆಗೆ ಉತ್ತರಾಯಣ ಪರ್ವಪುಣ್ಯಕಾಲವಿರುವುದು. ಆದಕಾರಣ ಉತ್ತರಾಯಣ ಪರ್ವಕಾಲ ಪ್ರಯುಕ್ತ ಸ್ನಾನದಾನಾದಿ ಷಟ್‌ತಿಲ ಕರ್ಮಗಳನ್ನು ಆಚರಿಸಬೇಕು. ಷಟ್ತಿಲ ಕರ್ಮಗಳಾದ ತಿಲಸ್ನಾನ, ತಿಲದೀಪ ಹಚ್ಚುವುದು. ತಿಲಹೋಮ, ತಿಲತರ್ಪಣ, ತಿಲಭಕ್ಷಣ, ತಿಲದಾನಗಳನ್ನು ಮಾಡಬೇಕು.

## ಮಕರಸಂಕ್ರಮಣ ಸ್ವರೂಪ

| | | |
|---|---|---|
| ಸಂಜ್ಞಾ–ಮಂದಾಕಿನೀ | ದಿಶಾಮುಖ–ದಕ್ಷಿಣ | ದಿಶಾಗಮನ–ಪಶ್ಚಿಮ |
| ದಿಶಾದೃಷ್ಟಿ–ವಾಯುವ್ಯ | ವಾಹನ–ಮಹಿಷ | ಉಪವಾಹನ–ಉಷ್ಟ್ರ |
| ತತ್ಫಲ–ಕ್ಲೇಶ | ವಸ್ತ್ರ–ಶ್ಯಾಮಲ | ಸ್ಥಿತಿ–ತಿಷ್ಠ |
| ಭೂಷಣ–ವಿದ್ರುಮ | ಆಯುಧ–ತೋಮರ | ಪಾತ್ರ–ಖರ್ಪೂರ |
| ಭಕ್ಷಣ–ದಧಿ | ಲೇಪನ–ಲಾಕ್ಷಾ | ಜಾತಿ–ಮೃಗ |
| ಪುಷ್ಪ–ಅರ್ಕ | ಫಲ–ತಾಳೆ | ಆಭರಣ–ರತ್ನ |
| ಕಂಚುಕ–ಪಾಂಡು | ಅವಸ್ಥೆ–ಪ್ರಗಲ್ಭಾ | ಸ್ನಾನ–ಸ್ನಾನೋದಕ |
| ಬಿಲ್ವ | ಛತ್ರ–ಮಯೂರ | |

## ಸಂಕ್ರಮಣ ನಾಮಾದಿಗಳು

ವಾರನಾಮ ಮಂದಾಕಿನೀ ನಾಮಕ ಸಂಕ್ರಮಣವಾಗಿರುವುದರಿಂದ ರಾಜರಿಗೆ ಸುಖವುಂಟಾಗುವುದು. ಪ್ರಜೆಗಳಿಗೆ ವಿಶೇಷವಾಗಿ ಧನ ಲಾಭವಾಗುವುದು. ಇದರಿಂದ ಸುಖವನ್ನನುಭವಿಸುವರು.

**ಪಶ್ಚಿಮ ಗಮನ ಫಲ :** ಮ್ಲೇಂಚ್ಛ ದೇಶದ ನಾಯಕರುಗಳಿಗೆ ಮರಣ ಭೀತಿ, ಬೇರೆ ರಾಜರುಗಳಿಗೆ ಆಯುಧದಿಂದ ಗಾಯವಾಗುವ ಭಯ. ಭೂಮಿಯಲ್ಲಿ ರಕ್ತವು ನದಿಯಂತೆ ಹರಿಯುವುದು.

**ವಾಯುವ್ಯ ದೃಷ್ಟಿ ಫಲ :** ಯವನರಿಗೆ ಮರಣವುಂಟಾಗುವುದು, ಬೇರೆ ರಾಜರುಗಳು ವಿವಿಧ ರೀತಿಯ ಅಸ್ತ್ರಗಳಿಂದ ಗಾಯಗೊಳ್ಳುವರು.

**ರಾತ್ರಿ ಫಲ :** ಪಿಪ್ಪಲ. ವಟ ಮುಂತಾದ ವೃಕ್ಷಗಳಿಲ್ಲಿ ವಾಸಿಸುವ ಪಿಶಾಚಿಗಳ ನಾಶವಾಗುವುದು.

**ವಾಹನ ಮಹಿಷ :** ದೇವಿಯ ಜಾತ್ರೆಯಲ್ಲಿ ಸುಂದರಿಯರಾದ ಕೆಂಪು ಬಣ್ಣದ ಮಾಯಾಂಗನೆಯರು ಕೊಲ್ಲಲ್ಪಡುತ್ತಾರೆ. ಹಾಲು, ಮೊಸರು, ತುಪ್ಪದ ಮಾರಾಟಗಾರರಿಗೆ ಬಹುವಿಧದ ತೊಂದರೆ, ಹಾಲು, ಮೊಸರು, ತುಪ್ಪ ತೇಜಿಯಾಗುವುದು. ಮೇವಿನ ಕೊರೆಯುಂಟಾಗುವುದು.

**ಉಪವಾಹನ ಉಷ್ಟ್ರ:** ಅವಂತಿಯ ಪಶ್ಚಿಮದಲ್ಲಿರುವ ಸಾಗರ ತೀರವಾಸಿಗಳಿಗೆ ಬಹುವಿಧವಾದ ಪೀಡೆ, ಅವಂತಿಯ ಪೂರ್ವದಲ್ಲಿರುವ ಜನರಿಗೆ ಹಸಿವಿನ ಬಾಧೆ.

**ಸಂಕ್ರಮಣ ಫಲ :** ಯಾವ ಯಾವ ವಸ್ತುಗಳನ್ನು ಸ್ವೀಕರಿಸುವನೋ ಆ ವಸ್ತುಗಳು ತುಟ್ಟಿಯಾಗುವವು, ಇಲ್ಲವೇ ನಾಶಹೊಂದುವವು. ಇದರಿಂದ ವರ್ತಕರಿಗೆ ಭೀತಿಯುಂಟಾಗುವುದು. ಸಂಕ್ರಮಣನು ಯಾವ ದಿಕ್ಕಿನಿಂದ ಬಂದಿರುವನೋ ಆ ದಿಕ್ಕಿನ ದೇಶಗಳಿಗೆ ಸೌಖ್ಯವು. ಸಂಕ್ರಮಣನು ಯಾವ

ದಿಕ್ಕಿಗೆ ಗಮನ ಮಾಡುತ್ತಿರುವನೋ ಆ ದಿಕ್ಕಿನ ದೇಶಗಳಿಗೆ ದುಃಖವು. ಸಂಕ್ರಮಣನ ದೃಷ್ಟಿ ಯಾವ ದಿಕ್ಕಿನ ಕಡೆಗೋ ಆ ದಿಕ್ಕಿನ ದೇಶಗಳಿಗೆ ವಿವಿಧ ರೀತಿಯ ಹಾನಿಯುಂಟಾಗುವುವು.

## ಜನ್ಮನಕ್ಷತ್ರಾನುಸಾರ ಸಂಕ್ರಮಣ ಫಲ

| | | | |
|---|---|---|---|
| **ಯಾತ್ರ** : | ಸ್ವಾತಿ | ವಿಶಾಖ | ಅನುರಾಧ |
| **ಸುಖ** : | ಜ್ಯೇಷ್ಠ, ಮೂಲ | ಪೂ.ಷಾ | ಶ್ರವಣ, ಧನಿಷ್ಠ |
| **ಪೀಡಾ** : | ಶತಭಿಷ | ಉಷಾ | ಉಭಾ |
| **ವಸ್ತುಲಾಭ** : | ರೇವತಿ, ಅಶ್ವಿನಿ | ಪೂಭಾ, ಭರಣಿ | ರೋಹಿ, ಮೃಗ |
| **ದ್ರವ್ಯಹಾನಿ** : | ಆರ್ದ್ರಾ | ಕೃತ್ತಿಕ, ಪುನ | ಪುಷ್ಯಾ |
| **ದ್ರವ್ಯಲಾಭ** : | ಆಶ್ಲೇಷ, ಮಘಾ | ಪೂಫ, ಉತ್ತ | ಹಸ್ತಾ, ಚಿತ್ತಾ |

## ಮೇಷಾದಿ ರಾಶಿಗಳ ಆಯವ್ಯಯ

| ರಾಶಿ | ಆಯ | ವ್ಯಯ | ರಾಶಿ | ಆಯ | ವ್ಯಯ |
|---|---|---|---|---|---|
| ಮೇಷ | 14 | 11 | ತುಲಾ | 8 | 5 |
| ವೃಷಭ | 8 | 5 | ವೃಶ್ಚಿಕ | 14 | 11 |
| ಮಿಥುನ | 14 | 2 | ಧನುಸ್ಸು | 11 | 2 |
| ಕಟಕ | 8 | 14 | ಮಕರ | 5 | 5 |
| ಸಿಂಹ | 11 | 11 | ಕುಂಭ | 5 | 5 |
| ಕನ್ಯಾ | 14 | 2 | ಮೀನ | 11 | 2 |

## ನಕ್ಷತ್ರ ಕಂದಾಯ

| ನಕ್ಷತ್ರ | ಪ್ರಥಮ | ದ್ವಿತೀಯ | ತೃತೀಯ | ನಕ್ಷತ್ರ | ಪ್ರಥಮ | ದ್ವಿತೀಯ | ತೃತೀಯ |
|---|---|---|---|---|---|---|---|
| ಅಶ್ವಿನೀ | 0 | 2 | 3 | ಸ್ವಾತೀ | 2 | 1 | 0 |
| ಭರಣೀ | 3 | 0 | 1 | ವಿಶಾಖಾ | 5 | 2 | 3 |
| ಕೃತ್ತಿಕಾ | 6 | 1 | 4 | ಅನುರಾಧಾ | 0 | 0 | 1 |
| ರೋಹಿಣೀ | 1 | 2 | 2 | ಜ್ಯೇಷ್ಠಾ | 3 | 1 | 4 |
| ಮೃಗಶಿರಾ | 4 | 0 | 0 | ಮೂಲಾ | 6 | 2 | 2 |
| ಆರ್ದ್ರಾ | 7 | 1 | 3 | ಪೂ.ಷಾ | 1 | 0 | 0 |
| ಪುನರ್ವಸು | 2 | 2 | 1 | ಉ.ಷಾ | 4 | 1 | 3 |
| ಪುಷ್ಯಾ | 5 | 0 | 4 | ಶ್ರವಣಾ | 7 | 2 | 1 |
| ಆಶ್ಲೇಷಾ | 0 | 1 | 2 | ಧನಿಷ್ಠಾ | 2 | 0 | 4 |
| ಮಘಾ | 3 | 2 | 0 | ಶತಭಿಷಾ | 5 | 1 | 2 |
| ಪೂ.ಫ | 6 | 0 | 3 | ಪೂ.ಭಾ | 0 | 2 | 0 |
| ಉ.ಫ | 1 | 1 | 1 | ಉ.ಭಾ | 3 | 0 | 3 |
| ಹಸ್ತಾ | 4 | 2 | 4 | ರೇವತೀ | 6 | 1 | 1 |
| ಚಿತ್ತಾ | 7 | 0 | 2 | | | | |

**ವಿಷಮೇ ತ್ವರ್ಥಲಾಭಸ್ಸ್ಯಾತ್ ಸಮೇ ತು ಸಮತಾ ಭವೇತ್।**
**ಶೂನ್ಯೇ ಶೂನ್ಯಮವಾಪ್ನೋತಿ ಕಂದಾಯ ಫಲಮೀದೃಶಮ್।**
**ಆದಿಶೂನ್ಯೇ ಮಹಾವ್ಯಾಧಿಃ ಮಧ್ಯಶೂನ್ಯೇ ಮಹದ್ಭಯಮ್।**
**ಅಂತ್ಯಶೂನ್ಯೇ ರೋಗಪೀಡಾ ತ್ರಿಶೂನ್ಯೇ ಮರಣಂ ಧ್ರುವಮ್ ॥**

**ಶ್ರೀ ಶ್ರೀಪಾದರಾಜ ಮಠ (ಮುಳಬಾಗಿಲು ಮಠ)**
**ನರಸಿಂಹತೀರ್ಥ ಮುಳಬಾಗಿಲು,**
**ದೂರವಾಣಿ – 08159 200699 / 82772 92062**
**Email : druvaloka162@gmail.com**

**ಮುಳಬಾಗಿಲು ಊರಿನ ಮಠ**

ಶ್ರೀ ಶ್ರೀಪಾದರಾಜ ಪ್ರತಿಷ್ಠಿತ ಶ್ರೀ ಲಕ್ಷ್ಮೀನಾರಾಯಣದೇವರು ಮತ್ತು
ಶ್ರೀ ವ್ಯಾಸರಾಜ ಪ್ರತಿಷ್ಠಿತ ಪ್ರಥಮ ಪ್ರಾಣದೇವರು
ಶ್ರೀ ವೆಂಕಟೇಶ ಹೆಚ್.ಎಸ್ – 99860 43965

**ಶ್ರೀಮಠದ ಶಾಖೆಗಳು**

**1. ಬೆಂಗಳೂರು** : ಶ್ರೀ ಶ್ರೀಪಾದರಾಜ ಮಠ, ನಂ.58, ಶ್ರೀರಾಘವೇಂದ್ರ ಕಾಲೋನಿ, ಚಾಮರಾಜಪೇಟೆ, ಬೆಂಗಳೂರು–560 018. (080–26673032)
ಶ್ರೀ ಶ್ರೀಧರಾಚಾರ್ಯ – 99720 88859.

**2. ಬೆಂಗಳೂರು** : ಶ್ರೀ ಶ್ರೀಪಾದರಾಜ ಮಠ, 542/31, 63ನೇ ಅಡ್ಡರಸ್ತೆ, 5ನೇ ಬ್ಲಾಕ್, ಭಾಷ್ಯಂ ಸರ್ಕಲ್ ಹತ್ತಿರ, ರಾಜಾಜಿನಗರ, ಬೆಂಗಳೂರು–560 010,
ಶ್ರೀ ಅಶ್ವಥ ನಾರಾಯಣ – 94483 83529.

**3. ಜಿಗಣಿ** : ಶ್ರೀ ರಾಘವೇಂದ್ರಸ್ವಾಮಿ ಬೃಂದಾವನ ಸನ್ನಿಧಿ, ಬಸ್‌ಸ್ಟ್ಯಾಂಡ್ ಹತ್ತಿರ, ಜಿಗಣಿ–560 105.
ಶ್ರೀ ವಾದಿರಾಜ – 99723 93666.

**4. ನಂಗಲಿ** : ಶ್ರೀ ಶ್ರೀಕಾಂತತೀರ್ಥರ ಬೃಂದಾವನ, ಶ್ರೀ ಶ್ರೀಪಾದರಾಜ ಮಠ, ನಂಗಲಿ–563 132, ಮುಳಬಾಗಿಲು ತಾ॥.

**5. ಶ್ರೀರಂಗಪಟ್ಟಣ** : ಶ್ರೀ ಜ್ಞಾನನಿಧಿತೀರ್ಥರ ಬೃಂದಾವನ ಸನ್ನಿಧಿ, ಶ್ರೀ ಶ್ರೀಪಾದರಾಜ ಮಠ, ವಾಟರ್ ಗೇಟ್, ಶ್ರೀರಂಗಪಟ್ಟಣ–571 438.
ಶ್ರೀ ಜಯಸಿಂಹಾಚಾರ್ಯ – 99001 25773.

**6. ಎರಗಂಬಳ್ಳಿ** : ಶ್ರೀ ರಘುನಾಥತೀರ್ಥರ ಬೃಂದಾವನ ಸನ್ನಿಧಿ, ಶ್ರೀ ಶ್ರೀಪಾದರಾಜ ಮಠ, ಎರಗಂಬಳ್ಳಿ, ಯಳಂದೂರು ತಾ॥, ಚಾಮರಾಜನಗರ ಜಿಲ್ಲೆ. 98441 28980.

**7. ತಾಯೂರು** : ಶ್ರೀ ಗುಣನಿಧಿತೀರ್ಥರ ಬೃಂದಾವನ ಸನ್ನಿಧಿ, ಶ್ರೀ ಶ್ರೀಪಾದರಾಜ ಮಠ, ಕಪಿಲಾನದಿದಂಡೆ, ತಾಯೂರು, ಟಿ.ನರಸೀಪುರ ತಾ॥, ಚಾಮರಾಜನಗರ ಜಿಲ್ಲೆ.
ಶ್ರೀ ಗೋಪಾಲಕೃಷ್ಣಾಚಾರ್ಯ – 99018 07912.

**8. ಉಡುಪಿ** : ಶ್ರೀ ಶ್ರೀಪಾದರಾಜ ಮಠ, ರಥಬೀಧಿ, ಉಡುಪಿ–576101.
ಶ್ರೀ ವಾಗೀಶಾಚಾರ್ಯ – 87625 41272.

**9. ಆನೆಗೊಂದಿ** : ಶ್ರೀ ಶ್ರೀಪಾದರಾಜ ಮಠ. ಆನೆಗೊಂದಿ, ಗಂಗಾವತಿ ತಾ॥.
ಶ್ರೀ ವಿಜಯ್ ದೇಶಾಯಿ – 96064 19337.

**10. ಶ್ರೀರಂಗಂ** : ಶ್ರೀ ಸ್ವರ್ಣವರ್ಣತೀರ್ಥರ ಬೃಂದಾವನ ಸನ್ನಿಧಿ, 41, ಸೌತ್ ಚಿತ್ತಿರೈ ಸ್ಟ್ರೀಟ್, ಶ್ರೀರಂಗಂ–620 006, ತಿರುಚಿ ಜಿಲ್ಲೆ. (0431–2431344)
ಶ್ರೀ ಗುರುರಾಜನ್ ಆಚಾರ್ಯ – 94431 31344.

**11. ಶ್ರೀಮುಷ್ಣಂ** : ಶ್ರೀ ಶ್ರೀಪಾದರಾಜ ಮಠ, ಈಸ್ಟ್ ಮಾಢ್ವಸ್ಟ್ರೀಟ್, ಶ್ರೀಮುಷ್ಣಂ–608 702. (04144245023).

**12. ದೇವಿಪಟ್ಟಣಂ**: ಶ್ರೀ ಆಂಜನೇಯಸ್ವಾಮಿ ಸನ್ನಿಧಿ, ಶ್ರೀ ಶ್ರೀಪಾದರಾಜ ಮಠ, ರಾಮನಾಥಪುರಂ,

ಮೈನ್‌ರೋಡ್, ದೇವೀಪಟ್ಟಣಂ–623 514,
ಶ್ರೀ ಪ್ರಸಾದ ಆಚಾರ್ಯ – 96888 64591.

**13. ವೆಂಗೆರೆ** : ಶ್ರೀ ಲಕ್ಷ್ಮೀಕಾಂತತೀರ್ಥರ ಬೃಂದಾವನ ಸನ್ನಿಧಿ.
ಶ್ರೀ ಶ್ರೀಪಾದರಾಜ ಮಠ, ವೆಂಗೆರೆ, ಪರಮತ್ತಿ, ವೇಲೂರು
ತಾ॥ ನಾಮಕಲ್ ಜಿಲ್ಲಾ,
ಶ್ರೀ ಗುರುಪ್ರಸಾದ್ ಆಚಾರ್ಯ – 9489750755.

**14. ಈರೋಡ್** : ಶ್ರೀ ರಾಘವೇಂದ್ರಸ್ವಾಮಿಗಳ ಬೃಂದಾವನ ಸನ್ನಿಧಿ,
ನಂ.242, ಅಗ್ರಹಾರಂ, ಪುದುವೀದಿ,
ಈರೋಡ್–638 001.
ಶ್ರೀ ರಾಮಚಂದ್ರಾಚಾರ್ಯ – 99420 47774.
(0424 2223141).

**15. ಪಳ್ಳಿಪಾಳ್ಯಂ** : ನವಬೃಂದಾವನ ಸನ್ನಿಧಿ, ಕಾವೇರಿನದಿ ತೀರ,
ವಸಂತನಗರ, ಪಳ್ಳಿಪಾಳ್ಯಂ–636 008,
ಕುಮಾರಪಾಳ್ಯ ತಾಲ್ಲೂಕ್, ನಾಮಕಲ್ ಜಿಲ್ಲೆ.
ಶ್ರೀ ರಾಮಚಂದ್ರಾಚಾರ್ಯ – 99420 47774.

**16. ಸೇಲಂ** : 135 ಎ. ಮೊದಲನೇ ಅಗ್ರಹಾರ, ಸೇಲಂ–636 001.
ಶ್ರೀ ರವಿ – 99650 72722.

**17. ಭವಾನಿ** : ಶ್ರೀ ಸುಗುಣನಿಧಿತೀರ್ಥರ ಬೃಂದಾವನ ಸನ್ನಿಧಿ, ಕಾವೇರಿ
ರೋಡ್, ಭವಾನಿ–638 301.

**18. ಹೊಸೂರು** : ಶ್ರೀ ರಾಘವೇಂದ್ರಸ್ವಾಮಿಗಳ ಬೃಂದಾವನ ಸನ್ನಿಧಿ,
ರಾಯಕೋಟ ಹೈವೇ ರೋಡ್, ಸಂತೇಪೇಟೆ,
ಹೊಸೂರು–635 125. (04344243764)
ಶ್ರೀ ರಾಘವೇಂದ್ರನ್ – 99523 48955.

**19. ಕಾವೇರಿಪಟ್ಟಣಂ:** ಶ್ರೀ ರಾಘವೇಂದ್ರಸ್ವಾಮಿಗಳ ಬೃಂದಾವನ ಸನ್ನಿಧಿ,
ಪೀಳ್ಳಿಯಾರ್ ಕೋವಿಲ್ ಬೀದಿ, ಕೃಷ್ಣಗಿರಿ ಜಿಲ್ಲಾ.
ಕಾವೇರಿಪಟ್ಟಣಂ–6351 12.
ಶ್ರೀ ಲಕ್ಷ್ಮೀನರಸಿಂಹನ್ – 96006 96596.

**20. ಚೆನ್ನೈ** : ನಂ.9, ವಿವೇಕಾನಂದಪುರಂ, ಮೊದಲ ಬೀದಿ, ವೆಸ್ಟ್
ಮಾಂಬಳಂ, ಚೆನ್ನೈ–600 033.
ಶ್ರೀ ಗೋಪಾಲಕೃಷ್ಣ – 98405 39908.

**21. ಕೊಯಂಬತ್ತೂರು:** ಶ್ರೀ ಶ್ರೀಪಾದರಾಜ ಮಠ. ಆಂಬಾಳ್‌ನಗರ,
ಮರುದೂರ್, ವಯಾ ಸೆಲ್ವಪುರಂ,
ಕೊಯಂಬತ್ತೂರು–641 104
ಶ್ರೀ ಕೃಷ್ಣ ಸಂಪತ್ – 93632 72799 /
99447 25770.

**22. ಪೆನುಗೊಂಡ** : ಶ್ರೀ ರಾಘವೇಂದ್ರಸ್ವಾಮಿಗಳ ಬೃಂದಾವನ ಸನ್ನಿಧಿ,
ಶ್ರೀ ಶ್ರೀಪಾದರಾಜ ಮಠ, ಹಳೇಪೋಸ್ಟ್ ಆಫೀಸ್ ರಸ್ತೆ,
ಪೆನುಗೊಂಡ–515 110.

**23. ಪೆನುಗೊಂಡ:** ಶ್ರೀ ಲಕ್ಷ್ಮೀನರಸಿಂಹಸ್ವಾಮಿ ಸನ್ನಿಧಿ,
ಶ್ರೀ ಉದ್ದಂಡರಾಮಚಂದ್ರತೀರ್ಥರ ಬೃಂದಾವನ, ಸನ್ನಿಧಿ,
ಶ್ರೀ ಶ್ರೀಪಾದರಾಜ ಮಠ, ಬೆಂಗಳೂರು –
ಹೈದಾರಾಬಾದ್ ಹೆದ್ದಾರಿ, ಪೆನುಗೊಂಡ–515 110.

**24. ಪುಂಗನೂರು:** ಶ್ರೀ ರಾಘವೇಂದ್ರಸ್ವಾಮಿಗಳ ಬೃಂದಾವನ ಸನ್ನಿಧಿ,
ಶ್ರೀ ಶ್ರೀಪಾದರಾಜ ಮಠ, ಬ್ರಾಹ್ಮಣ ಸ್ಟ್ರೀಟ್,
ಪುಂಗನೂರು–517 247, ಚಿತ್ತೂರು ಜಿಲ್ಲೆ.

**25. ತಿರುಮಲ** : ಶ್ರೀ ಶ್ರೀಪಾದರಾಜ ಮಠ, ನಿರ್ಮಾಣ ಹಂತದಲ್ಲಿದೆ.

## ಸಂಕ್ರಮಣಗಳು

| ಸಂಕ್ರಮಣ | | | | | ಪರ್ವಪುಣ್ಯಕಾಲ |
|---|---|---|---|---|---|
| 13.04.25 | ಮೇಷ | 29.39 | ರವಿ | 14.04.25 | ಸೂರ್ಯೋದಯದಿಂದ ಬೆಳಿಗ್ಗೆ 10.22ನಿ ವರೆಗೆ |
| 14.05.25 | ವೃಷಭ | 28.03 | ಬುಧ | 15.05.25 | ಸೂರ್ಯೋದಯದಿಂದ ಬೆಳಿಗ್ಗೆ 10.27ನಿ ವರೆಗೆ |
| 15.06.25 | ಮಿಥುನ | 14.18 | ರವಿ | 15.06.25 | ಮಧ್ಯಾಹ್ನ 2.18ನಿ.ದಿಂದ ಸೂರ್ಯಾಸ್ತದವರೆಗೆ |
| 16.07.25 | ಕಟಕ | 29.36 | ಬುಧ | 16.07.25 | ಮಧ್ಯಾಹ್ನ 12.20ನಿ.ದಿಂದ ಸೂರ್ಯಾಸ್ತದವರೆಗೆ |
| 17.08.25 | ಸಿಂಹ | 17.00 | ರವಿ | 17.08.25 | ಬೆಳಗ್ಗೆ 10.36 ರಿಂದ ಸಂಜೆ 5.00ರ ವರೆಗೆ |
| 17.09.25 | ಕನ್ಯಾ | 17.27 | ಬುಧ | 17.09.25 | ಸಂಜೆ 05.27 ರಿಂದ ಸೂರ್ಯಾಸ್ತದವರೆಗೆ |
| 17.10.25 | ತುಲಾ | 28.04 | ಶುಕ್ರ | 18.10.25 | ಸೂರ್ಯೋದಯದಿಂದ ಮಧ್ಯಾಹ್ನ 12.21ನಿ.ವರೆಗೆ |
| 16.11.25 | ವೃಶ್ಚಿಕ | 25.31 | ರವಿ | 16.11.25 | ಮಧ್ಯಾಹ್ನ 12.15 ನಿ.ದಿಂದ ಸೂರ್ಯಾಸ್ತದವರೆಗೆ |
| 16.12.25 | ಧನುಸ್ಸು | 13.18 | ಮಂಗಳ | 16.12.25 | ಮಧ್ಯಾಹ್ನ 1.18 ನಿ.ದಿಂದ ಸೂರ್ಯಸ್ತದವರೆಗೆ |
| 14.01.26 | ಮಕರ | 20.56 | ಬುಧ | 15.01.26 | ಸೂರ್ಯೋದಯದಿಂದ ಬೆಳಿಗ್ಗೆ 08.56ನಿ.ದವರೆಗೆ |
| 13.02.26 | ಕುಂಭ | 07.40 | ಶುಕ್ರ | 13.02.26 | ಸೂರ್ಯೋದಯದಿಂದ ಬೆಳಿಗ್ಗೆ 07.40ನಿ.ದವರೆಗೆ |
| 14.03.26 | ಮೀನ | 27.22 | ಶನಿ | 15.03.26 | ಸೂರ್ಯೋದಯದಿಂದ ಮಧ್ಯಾಹ್ನ 12.30ನಿದವರೆಗೆ |

## ಷಣ್ಣವತೀ (96) ಶ್ರಾದ್ಧತಿಥಿಗಳು

### 1. ಅಮಾವಾಸ್ಯೆ 12 ಅಮಾಶ್ರಾದ್ಧ (ಪಿಂಡಸಹಿತವಾಗಿ, ಅಪರಾಹ್ಣೇ ಕಾರ್ಯಂ)

| | | | | | |
|---|---|---|---|---|---|
| ಚೈತ್ರ | ಕೃಷ್ಣ | 27.04.25 | ಆಶ್ವಯುಜ | ಕೃಷ್ಣ | 21.10.25 |
| ವೈಶಾಖ | ಕೃಷ್ಣ | 26.05.25 | ಕಾರ್ತೀಕ | ಕೃಷ್ಣ | 19.11.25 |
| ಜ್ಯೇಷ್ಠ | ಕೃಷ್ಣ | 25.06.25 | ಮಾರ್ಗಶಿರ | ಕೃಷ್ಣ | 19.12.25 |
| ಆಷಾಢ | ಕೃಷ್ಣ | 24.07.25 | ಪುಷ್ಯ | ಕೃಷ್ಣ | 18.01.26 |
| ಶ್ರಾವಣ | ಕೃಷ್ಣ | 22.08.25 | ಮಾಘ | ಕೃಷ್ಣ | 17.02.26 |
| ಭಾದ್ರಪದ | ಕೃಷ್ಣ | 21.09.25 | ಫಾಲ್ಗುಣ | ಕೃಷ್ಣ | 18.03.26 |

### 2. ಯುಗಾದಿಗಳು 4 ಸಂಕಲ್ಪಶ್ರಾದ್ಧ(ತರ್ಪಣ ಮಾತ್ರ, ಪೂರ್ವಾಹ್ನೇಕಾರ್ಯಂ)

| | | | | |
|---|---|---|---|---|
| ವೈಶಾಖ | ಶುಕ್ಲ | ತೃತೀಯ | ತ್ರೇತಾಯುಗಾದಿ | 30.04.25 |
| ಭಾದ್ರಪದ | ಕೃಷ್ಣ | ತ್ರಯೋದಶಿ | ಕಲಿಯುಗಾದಿ | 19.09.25 |
| ಕಾರ್ತೀಕ | ಶುಕ್ಲ | ನವಮೀ | ಕೃತಯುಗಾದಿ | 30.10.25 |
| ಮಾಘ | ಕೃಷ್ಣ | ಅಮಾವಾಸ್ಯೆ | ದ್ವಾಪರಯುಗಾದಿ | 17.02.26 |

### 3. ಮನ್ವಾದಿಗಳು - 14 ಸಂಕಲ್ಪಶ್ರಾದ್ಧ(ತರ್ಪಣ ಮಾತ್ರ,ಪೂರ್ವಾಹ್ನೇಕಾರ್ಯಂ)

| | | | | |
|---|---|---|---|---|
| ಚೈತ್ರ | ಶುಕ್ಲ | ತೃತೀಯ | ಉತ್ತಮಮನ್ವಾದಿ | 01.04.25 |
| ಚೈತ್ರ | ಶುಕ್ಲ | ಪೌರ್ಣಮಿ | ರೌಚ್ಯ ಮನ್ವಾದಿ | 12.04.25 |
| ಜ್ಯೇಷ್ಠ | ಶುಕ್ಲ | ಪೌರ್ಣಮಿ | ಭೌಚ್ಯಕ ಮನ್ವಾದಿ | 11.06.25 |
| ಆಷಾಢ | ಶುಕ್ಲ | ದಶಮೀ | ಚಾಕ್ಷುಷ ಮನ್ವಾದಿ | 05.07.25 |
| ಆಷಾಢ | ಶುಕ್ಲ | ಪೌರ್ಣಮಿ | ತಾಪಸ ಮನ್ವಾದಿ | 10.07.25 |
| ಶ್ರಾವಣ | ಕೃಷ್ಣ | ಅಷ್ಟಮೀ | ಸೂರ್ಯಸಾವರ್ಣಿ ಮನ್ವಾದಿ | 16.08.25 |
| ಭಾದ್ರಪದ | ಶುಕ್ಲ | ತೃತೀಯ | ತಾಪಸ ಮನ್ವಾದಿ | 26.08.25 |
| ಆಶ್ವಯುಜ | ಶುಕ್ಲ | ನವಮೀ | ಸ್ವಾರೋಚಿಷ ಮನ್ವಾದಿ | 01.10.25 |
| ಕಾರ್ತೀಕ | ಶುಕ್ಲ | ದ್ವಾದಶಿ | ಸ್ವಾಯಂಭುವಮನ್ವಾದಿ | 02.11.25 |
| ಕಾರ್ತೀಕ | ಶುಕ್ಲ | ಪೌರ್ಣಿಮೇ | ಇಂದ್ರಸಾವರ್ಣಿ ಮನ್ವಾದಿ | 05.11.25 |
| ಪುಷ್ಯ | ಶುಕ್ಲ | ಏಕಾದಶಿ | ರೈವತ ಮನ್ವಾದಿ | 30.12.25 |

| | | | | |
|---|---|---|---|---|
| ಮಾಘ | ಶುಕ್ಲ | ಸಪ್ತಮಿ | ವೈವಸ್ವತ ಮನ್ವಾದಿ | 25.01.26 |
| ಫಾಲ್ಗುಣ | ಶುಕ್ಲ | ಪೌರ್ಣಮಿ | ಬ್ರಹ್ಮಸಾವರ್ಣಿ ಮನ್ವಾದಿ | 03.03.26 |
| ಪಾಲ್ಗುಣ | ಕೃಷ್ಣ | ಅಮಾವಾಸ್ಯೆ | ರುದ್ರಸಾವರ್ಣಿ ಮನ್ವಾದಿ | 18.03.26 |

| **4. ವೈಧೃತಿ –12** (ತರ್ಪಣ ಮಾತ್ರ ಪೂರ್ವಾಹ್ನದಲ್ಲಿ) | | **5. ವ್ಯತೀಪಾತ – 12** (ತರ್ಪಣ ಮಾತ್ರ ಪೂರ್ವಾಹ್ನದಲ್ಲಿ) | |
|---|---|---|---|
| 1) 31.03.25 | 8) 25.09.25 | 1) 16.04.25 | 8) 11.10.25 |
| 2) 25.04.25 | 9) 20.10.25 | 2) 11.05.25 | 9) 06.11.25 |
| 3) 21.05.25 | 10) 15.11.25 | 3) 06.06.25 | 10) 01.12.25 |
| 4) 16.06.25 | 11) 10.12.25 | 4) 01.07.25 | 11) 27.12.25 |
| 5) 11.07.25 | 12) 04.01.26 | 5) 26.07.25 | 12) 21.01.26 |
| 6) 05.08.25 | 13) 30.01.26 | 6) 21.08.25 | 13) 15.02.26 |
| 7) 31.08.25 | 14) 24.02.26 | 7) 15.09.25 | 14) 12.03.26 |

**6. ಮಹಾಲಯ – 15** (ಪಿಂಡಸಹಿತವಾಗಿ) 08.09.25ರಿಂದ 21.09.25 ರವರೆಗೆ

**7. ಪೂರ್ವೇದ್ಯು ಶ್ರಾದ್ಧ – 5** (ಪಿಂಡಸಹಿತವಾಗಿ) 1) 13.09.25, 2) 11.12.25, 3) 09.01.26, 4) 08.02.26, 5) 10.03.26.

**8. ಅಷ್ಟಕ ಶ್ರಾದ್ಧ – 5** (ಪಿಂಡಸಹಿತವಾಗಿ) 1) 14.09.25, 2) 12.12.25, 3) 10.01.25, 4) 09.01.26, 5) 11.03.26.

**9. ಅನ್ವಷ್ಟಕಾ ಶಾದ್ಧ – 5** (ಪಿಂಡಸಹಿತವಾಗಿ) 1) 15.09.25, 2) 13.12.25, 3) 11.01.26, 4) 10.02.26, 5) 12.03.26.

ಏಕಾದಶಿ, ಉಪವಾಸಾದಿಗಳಲ್ಲಿ ಷಣ್ಣವತೀ ಶ್ರಾದ್ಧ ಬಂದರೆ ಆ ದಿನ ತತ್ಪ್ರತಿನಿಧಿಯಾಗಿ ಪವಮಾನ ಸೂಕ್ತ ಪಠಿಸಬೇಕು.

**ಏಕಾದಶೀ, ದ್ವಾದಶೀ, ಪೌರ್ಣಿಮೀ, ಅಮಾವಾಸ್ಯೆಗಳ ವಿವರ**

| ಮಾಸ | ಪಕ್ಷ | ಏಕಾದಶೀ | ದ್ವಾದಶೀ | ಹುಣ್ಣಿಮೆ | ಅಮಾವಾಸ್ಯೆ |
|---|---|---|---|---|---|
| ಚೈತ್ರ | ಶು | 08.04.25 | 09.04.25 | 12.04.25 | |
| | ಕೃ | 24.04.25 | 25.05.25 | | 27.04.25 |
| ವೈಶಾಖ | ಶು | 08.05.25 | 09.05.25 | 12.05.25 | |
| | ಕೃ | 23.05.25 | 24.05.25 | | 27.05.25 |
| ಜ್ಯೇಷ್ಠ | ಶು | 07.06.25 | 08.06.25 | 11.06.25 | |
| | ಕೃ | 22.06.25 | 23.06.25 | | 25.06.25 |
| ಆಷಾಢ | ಶು | 06.07.25 | 07.07.25 | 10.07.25 | |
| | ಕೃ | 21.07.25 | 22.07.25 | | 24.07.25 |
| ಶ್ರಾವಣ | ಶು | 05.08.25 | 06.08.25 | 09.08.25 | |
| | ಕೃ | 19.08.25 | 20.08.25 | | 23.08.25 |
| ಭಾದ್ರಪದ | ಶು | 03.09.25 | 04.09.25 | 07.09.25 | |
| | ಕೃ | 17.09.25 | 18.09.25 | | 21.09.25 |
| ಆಶ್ವಯುಜ | ಶು | 03.10.25 | 04.10.25 | 07.10.25 | |
| | ಕೃ | 17.10.25 | 18.10.25 | | 21.10.25 |
| ಕಾರ್ತೀಕ | ಶು | 02.11.25 | 03.11.25 | 05.11.25 | |
| | ಕೃ | 16.11.25 | 17.11.25 | | 20.11.25 |
| ಮಾರ್ಗಶಿರ | ಶು | 01.12.25 | 02.12.25 | 04.12.25 | |
| | ಕೃ | 15.12.25 | 16.12.25 | | 19.12.25 |
| ಪುಷ್ಯ | ಶು | 30.12.25 | 31.12.25 | 03.01.26 | |
| | ಕೃ | 14.01.26 | 15.01.26 | | 18.01.26 |
| ಮಾಘ | ಶು | 29.01.26 | 30.01.26 | 01.02.26 | |
| | ಕೃ | 13.02.26 | 14.02.26 | | 17.02.26 |
| ಫಾಲ್ಗುಣ | ಶು | 27.02.26 | 28.02.26 | 03.03.26 | |
| | ಕೃ | 15.03.26 | 16.03.26 | | 19.03.26 |

*~*~*~*~*~*~*~*

## ಖಗ್ರಾಸ ರಾಹುಗ್ರಸ್ತ ಚಂದ್ರ ಗ್ರಹಣ

ಶ್ರೀ ವಿಶ್ವಾವಸುನಾಮ ಸಂವತ್ಸರ ಭಾದ್ರಪದ ಶುಕ್ಲ ಪೌರ್ಣಮಿ **ದಿನಾಂಕ 07.09.25ರಂದು ಭಾನುವಾರ ಶತಭಿಷ ನಕ್ಷತ್ರ ಕುಂಭರಾಶಿಯಲ್ಲಿ ಚಂದ್ರನಿಗೆ ರಾಹುಗ್ರಸ್ತ ಖಗ್ರಾಸ ಗ್ರಹಣವು** ಸಂಭವಿಸಲಿದೆ.

**ಗ್ರಹಣದ ಸ್ಪರ್ಶ – ಮೋಕ್ಷಾದಿ ವಿವರಗಳು**

**ಗ್ರಹಣಸ್ಪರ್ಶ ಕಾಲ** – ರಾತ್ರಿ 09–29 ನಿ.

**ಗ್ರಹಣ ಮಧ್ಯಕಾಲ** – ರಾತ್ರಿ 11.44 ನಿ.

**ಗ್ರಹಣಮೋಕ್ಷಕಾಲ** – ರಾತ್ರಿ 01.28 ಕ್ಕೆ

**ಗ್ರಹಣ ಆದ್ಯಂತ ಪುಣ್ಯಕಾಲ** – 3.29 ನಿಮಿಷ.

**ವೇಧವಿಚಾರ–** ಈ ಚಂದ್ರಗ್ರಹಣವು ರಾತ್ರಿ ಎರಡನೆ ಯಾಮದಲ್ಲಿ ಆಗುತ್ತಿರುವುದರಿಂದ ಗ್ರಹಣ ಸ್ಪರ್ಶಕ್ಕಿಂತ ಮೂರು ಯಾಮ ಅಂದರೆ ಮಧ್ಯಾಹ್ನ 12.55 ನಿಮಿಷದಿಂದಲೇ ವೇಧವು ಪ್ರಾರಂಭವಾಗುವುದು. ಆದ್ದರಿಂದ ಈ ದಿನ ಮಧ್ಯಾಹ್ನ 12.55 ಗಂಟೆಯೊಳಗೆ ಭೋಜನವನ್ನು ಮಾಡಬಹುದು. ಪೌರ್ಣಮಿ ಶ್ರಾದ್ಧ ಇರುವವರು 12–55ರೊಳಗೆ ಶ್ರಾದ್ಧವನ್ನು ಮುಗಿಸಿ ಬ್ರಾಹ್ಮಣ ಭೋಜನಾದಿಗಳನ್ನು ಮುಗಿಸಿಕೊಳ್ಳಬೇಕು. ಬಾಲಕರು, ವೃದ್ಧರು, ಗರ್ಭಿಣಿಸ್ತ್ರೀಯರು, ಅಶಕ್ತರು, ಅನಾರೋಗ್ಯ ಪೀಡಿತರು ಸೂರ್ಯಾಸ್ತದವರೆಗೆ ಅಲ್ಪಾಹಾರವನ್ನು ಮಾಡಬಹುದು.

**ಗ್ರಹಣ ವಿಚಾರ :–** ಶತಭಿಷ ನಕ್ಷತ್ರ ಕುಂಭರಾಶಿಯಲ್ಲಿ ಚಂದ್ರನಿಗೆ ರಾಹುಗ್ರಸ್ತ ಗ್ರಹಣವಾಗುತ್ತಿರುವುದರಿಂದ ಆ ನಕ್ಷತ್ರ, ರಾಶಿಯವರಿಗೆ ವಿಶೇಷ ದೋಷವು. ಅವರು ರಾಹು, ಚಂದ್ರನಮೂರ್ತಿಗಳನ್ನು ಬಂಗಾರದಿಂದ ಮಾಡಿಸಿ ಅವುಗಳನ್ನು ಪೂಜಿಸಿ, ಯೋಗ್ಯರಿಗೆ ದಾನ ಕೊಡಬೇಕು.

**ಶುಭ ಫಲ :** ಧನು, ಕನ್ಯಾ, ವೃಷಭ, ಮೇಷ
**ಮಿಶ್ರ ಫಲ :** ಮಕರ, ತುಲಾ, ಸಿಂಹ, ಮಿಥುನ
**ಅಶುಭ ಫಲ :** ಕುಂಭ, ಮೀನ, ಕರ್ಕ, ವೃಶ್ಚಿಕ

## ಪೂರ್ಣಗ್ರಾಸ ಕೇತುಗ್ರಸ್ತೋದಯ ಚಂದ್ರ ಗ್ರಹಣ

ಶ್ರೀವಿಶ್ವಾವಸು ನಾಮಸಂವತ್ಸರ ಫಾಲ್ಗುಣ ಶುಕ್ಲ ಪೌರ್ಣಮಿ **ದಿನಾಂಕ 03.03.26ರಂದು ಮಂಗಳವಾರ ಪುಬ್ಬಾನಕ್ಷತ್ರ ಸಿಂಹರಾಶಿಯಲ್ಲಿ ಚಂದ್ರನಿಗೆ ಪೂರ್ಣಗ್ರಾಸ ಕೇತುಗ್ರಸ್ತೋದಯ ಗ್ರಹಣವು** ಸಂಭವಿಸಲಿದೆ.

**ಗ್ರಹಣದ ಸ್ಪರ್ಶ – ಮೋಕ್ಷಾದಿ ವಿವರಗಳು**

**ಗ್ರಹಣಸ್ಪರ್ಶ ಕಾಲ** – ಮಧ್ಯಾಹ್ನ 03–19 ನಿ.
**ಗ್ರಹಣ ಮಧ್ಯಕಾಲ** – ಸಂಜೆ 05–04 ನಿ.
**ಗ್ರಹಣಮೋಕ್ಷಕಾಲ** – ಸಂಜೆ 06–47 ಕ್ಕೆ (ಸೂರ್ಯಾಸ್ತ ಸಂಜೆ 06.26ನಿ)
**ಗ್ರಹಣ ಪುಣ್ಯಕಾಲ** – 21 ನಿಮಿಷ.

**ವೇಧವಿಚಾರ–** ಈ ಚಂದ್ರಗ್ರಹಣವು ಹಗಲು ಮೂರನೆಯ ಯಾಮದಲ್ಲಿ ಆಗುತ್ತಿರುವುದರಿಂದ ಗ್ರಹಣ ಸ್ಪರ್ಶಕ್ಕಿಂತ ಮೂರು ಯಾಮ ಅಂದರೆ ಸೂರ್ಯೋದಯದಿಂದಲೇ ವೇಧವು ಪ್ರಾರಂಭವಾಗುವುದು. ಆದುದರಿಂದ ಈ ದಿನ ಪೂರ್ತಿ ಭೋಜನಕ್ಕೆ ಅವಕಾಶವಿಲ್ಲ. ಸಂಜೆ ಗ್ರಹಣ ಬಿಟ್ಟ ಮೇಲೆ ಸ್ನಾನವನ್ನು ಮಾಡಿ ದೇವಪೂಜೆ, ನೈವೇದ್ಯ ಮಾಡಿ, ಭೋಜನ ಮಾಡಬೇಕು. ಪೂರ್ಣಿಮಾ ಕಾಲ ಶ್ರಾದ್ಧ ಮಾಡುವವರು ಗ್ರಹಣ ಬಿಟ್ಟ ನಂತರ ಶ್ರಾದ್ಧ ಮಾಡಬೇಕು.

ಬಾಲಕರು, ವೃದ್ಧರು, ಗರ್ಭಿಣಿಸ್ತ್ರೀಯರು, ಅಶಕ್ತರು, ಅನಾರೋಗ್ಯ ಪೀಡಿತರು ಬೆಳಗ್ಗೆ 11–39ನಿಮಿಷದೊಳಗೆ ಅಲ್ಪಾಹಾರವನ್ನು ಮಾಡಬಹುದು.

**ಗ್ರಹಣ ವಿಚಾರ :–** ಪುಬ್ಬಾ ನಕ್ಷತ್ರ ಸಿಂಹರಾಶಿಯಲ್ಲಿ ಚಂದ್ರನಿಗೆ ಕೇತುಗ್ರಸ್ತ ಗ್ರಸ್ತೋದಯ ಗ್ರಹಣವಾಗುತ್ತಿರುವುದರಿಂದ ಆ ನಕ್ಷತ್ರ, ರಾಶಿಯವರಿಗೆ ವಿಶೇಷ ದೋಷವು. ಅವರು ಕೇತು, ಚಂದ್ರನಮೂರ್ತಿಗಳನ್ನು ಬಂಗಾರದಿಂದ ಮಾಡಿಸಿ ಅವುಗಳನ್ನು ಪೂಜಿಸಿ, ಯೋಗ್ಯರಿಗೆ ದಾನ ಕೊಡಬೇಕು.

**ಶುಭ ಫಲ :** ತುಲಾ, ವೃಶ್ಚಿಕ, ಮೀನು, ಮಿಥುನ.

**ಮಿಶ್ರ ಫಲ :** ಧನು, ಕುಂಭ, ಮೇಷ, ಕರ್ಕ.

**ಅಶುಭ ಫಲ :** ಸಿಂಹಾ, ಕನ್ಯಾ, ಮಕರ, ವೃಷಭ.

**ಗ್ರಹಣಕಾಲದಲ್ಲಿ ಮಾಡತಕ್ಕ ಕಾರ್ಯಗಳು :–** ಗ್ರಹಣಸ್ಪರ್ಶಕಾಲದಿಂದ ಹಿಡಿದು ಮೋಕ್ಷಕಾಲದವರೆಗೆ ಯಾವ ವಸ್ತುವಿನ ಸಂಪರ್ಕವನ್ನು ಮಾಡದೇ, ಉಟ್ಟಬಟ್ಟೆಯೊಂದಿಗೆ ಸ್ನಾನವನ್ನು ಮಾಡಿ ಗಾಯತ್ರೀಜಪ, ದೇವಪೂಜೆ, ಹೋಮ, ತರ್ಪಣ, ಶ್ರಾದ್ಧ, ವಿಷ್ಣುಸಹಸ್ರನಾಮ ಸ್ತೋತ್ರ ಮುಂತಾದ ಸ್ತೋತ್ರಗಳನ್ನು ಪಾರಾಯಣ ಮಾಡಬೇಕು. ಗ್ರಹಣದ ಕೊನೆಯ ಭಾಗದಲ್ಲಿ ದೇವಸ್ಥಾನಗಳಿಗೆ ಹೋಗಿ ನಮಸ್ಕಾರ, ಪ್ರದಕ್ಷಿಣೆ, ದಾನ–ಧರ್ಮಗಳನ್ನು ಮಾಡಬೇಕು. ಗ್ರಹಣಕಾಲದಲ್ಲಿ ಮೃತಾಶೌಚ, ವೃದ್ಧಿಗಳಿದ್ದರೂ ಸ್ನಾನವನ್ನು ಮಾಡಿಗಾಯತ್ರೀಜಪ, ಪಾರಾಯಣಾದಿಗಳನ್ನು ಅವಶ್ಯ ಮಾಡಲೇಬೇಕು.

**ಗ್ರಹಣ ಶಾಂತಿಮಂತ್ರ :–** ಚಂದ್ರಗ್ರಹಣದ ರಾಶಿಯವರು, ಇತರರು ಗ್ರಹಣ ಹಿಡಿದಾಗ ಕೆಳಕಂಡ ಮಂತ್ರವನ್ನು (ಎರಡು ಅಥವಾ ಐದು ಬಾರಿ) ಪಠಿಸಿ ಗ್ರಹಣ ಮೋಕ್ಷವಾದ ನಂತರ ಪಟ್ಟಿಯನ್ನು ವಿಸರ್ಜಿಸಬೇಕು.

**ಯೋಸೌ ವಜ್ರಧರೋ ದೇವಃ ಆದಿತ್ಯಾನಾಂ ಪ್ರಭುರ್ಮತಃ ।**
**ಸಹಸ್ರನಯನಃ ಶಕ್ರೋ ಗ್ರಹಪೀಡಾಂ ವ್ಯಪೋಹತು॥**

**ಮುಖಂ ಯಃ ಸರ್ವದೇವಾನಾಂ ಸಪ್ತಾರ್ಚಿರಮಿತದ್ಯುತಿಃ ।**
**ಚಂದ್ರೋಪರಾಗ ಸಂಭೂತಾಂ ಅಗ್ನಿಪೀಡಾಂ ವ್ಯಪೋಹತು॥**

**ಯಃ ಕರ್ಮಸಾಕ್ಷೀ ಲೋಕಾನಾಂ ಧರ್ಮೋ ಮಹಿಷವಾಹನಃ ।**
**ಯಮಃ ಚಂದ್ರೋಪರಾಗೋತ್ಥಾಂ ಗ್ರಹಪೀಡಾಂ ವ್ಯಪೋಹತು॥**

**ರಕ್ಷೋಗಣಾಧಿಪಸ್ಸಾಕ್ಷಾನ್ನೀಲಾಂಜನ ಸಮಪ್ರಭಃ ।**
**ಖಡ್ಗಹಸ್ತೋಽತಿಭೀಮಶ್ಚ ಗ್ರಹಪೀಡಾಂ ವ್ಯಪೋಹತು॥**

**ನಾಗಪಾಶಧರೋ ದೇವಃ ಸದಾ ಮಕರವಾಹನಃ ।**
**ಸಜಲಾಧಿಪತಿರ್ದೇವೋ ಗ್ರಹಪೀಡಾಂ ವ್ಯಪೋಹತು॥**

**ಪ್ರಾಣರೂಪೋ ಹಿ ಲೋಕಾನಾಂ ಸದಾ ಕೃಷ್ಣಮೃಗಪ್ರಿಯಃ ।**
**ವಾಯುಶ್ಚ ಚಂದ್ರೋಪರಾಗೋತ್ಥಾಂ ಗ್ರಹಪೀಡಾಂ ವ್ಯಪೋಹತು॥**

**ಯೋಸೌ ನಿಧಿಪತಿರ್ದೇವಃ ಖಡ್ಗ ಶೂಲ ಗದಾಧರಃ ।**
**ಚಂದ್ರೋಪರಾಗ ಕಲುಷಂ ಧನದೋಽತ್ರ ವ್ಯಪೋಹತು॥**

**ಯೋಽಸಾವಿಂದುಧರೋ ದೇವಃ ಪಿನಾಕೀವೃಷವಾಹನಃ ।**
**ಚಂದ್ರೋಪರಾಗ ಪಾಪಾನಿ ವಿನಾಶಯತು ಶಂಕರಃ ॥**

**ತ್ರೈಲೋಕ್ಯೇ ಯಾನಿ ಭೂತಾನಿ ಸ್ಥಾವರಾಣಿ ಚರಾಣಿ ಚ।**
**ಬ್ರಹ್ಮವಿಷ್ಣರ್ಕರುದ್ರಾಶ್ಚ ದಹಂತು ಮಮ ಪಾತಕಮ್ ॥**

– ಎಂದು ಪಾರಾಯಣ ಮಾಡಬೇಕು.

ಚಂದ್ರಗ್ರಹಣ ಶಾಂತಿಮಂತ್ರ (ತಾಮ್ರದ ತಗಡಿನಲ್ಲಿ ಈ ಮಂತ್ರ ಬರೆದು ಹಣೆಗೆ ಕಟ್ಟಿಕೊಂಡು)

**ಇಂದ್ರೋಽನಲೋ ದಂಡಧರಶ್ಚ ಕಾಲಃ**
**ಪಾಶಾಯುಧೋ ವಾಯುಧನೇಶರುದ್ರಾ ॥**
**ಮಜ್ಜನ್ಮಋಗ್ಬ್ಯೋ ಮಮ ರಾಶಿಸಂಸ್ಥಾಃ**
**ಕುರ್ವಂತು ಚಂದ್ರಗ್ರಹದೋಷಶಾಂತಿಂ॥**

ಎಂದು ಗರ್ಗಾಚಾರ್ಯಸ್ಮೃತಿ ವಾಕ್ಯದಂತೆ ಬೆಳ್ಳಿಯ ಚಂದ್ರಬಿಂಬ, ಸುವರ್ಣನಾಗಪ್ರತಿಮೆ, ತುಪ್ಪದಿಂದ ತುಂಬಲ್ಪಟ್ಟ ತಾಮ್ರ–ಕಂಚು ಪಾತ್ರೆಯಮೇಲಿಟ್ಟು, ಪೂಜಿಸಿ, ಪೂಜಾನಂತರದಲ್ಲಿ ಸತ್ಪಾತ್ರರಿಗೆ ದಾನ ಮಾಡಬೇಕು.

**ಸಂಕಲ್ಪ** – ಅದ್ಯ ಪೂರ್ವೋಚ್ಚರಿತ ಏವಂಗುಣ ವಿಶೇಷಣ ವಿಶಿಷ್ಟಾಯಾಂ ಶುಭತಿಥೌ ಚಂದ್ರ ಗ್ರಹಾಂತರ್ಯಾಮಿ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀಲಕ್ಷ್ಮೀನರಸಿಂಹ ಪ್ರೇರಣಯಾ ಶ್ರೀಲಕ್ಷ್ಮೀನರಸಿಂಹಪ್ರೀತ್ಯರ್ಥಂ ಚಂದ್ರೋಪರಾಗ ಪೀಡಾಪರಿಹಾರಾರ್ಥಂ ನಾಗಪ್ರತಿಮಾಯುಕ್ತ ಚಂದ್ರ–ಬಿಂಬದಾನಂ ಕರಿಷ್ಯೇ। ಆದೌ ಪೂಜಾಂ ಚ ಕರಿಷ್ಯೇ॥ – ಎಂದು ಪೂಜಿಸಿ

**ದಾನಮಂತ್ರ** –

**ತಮೋಮಯ ಮಹಾಭೀಮ ಸೋಮಸೂರ್ಯವಿಮರ್ದನ।**
**ಹೇಮ ತಾರಾ ಪ್ರದಾನೇನ ಮಮ ಶಾಂತಿಪ್ರದೋ ಭವ ।**
**ವಿಧುಂತುದ ನಮಸ್ತುಭ್ಯಂ ಸಿಂಹಿಕಾನಂದನಾಚ್ಯುತ॥**
**ದಾನೇನಾನೇನ ನಾಗಸ್ಯ ರಕ್ಷ ಮಾಂ ವೇಧಜಾದ್ಭಯಾತ್ ॥**

– ಎಂದು ದಕ್ಷಿಣೆಸಹಿತ ದಾನ ಮಾಡಿ ಕೃಷ್ಣಾರ್ಪಣ ಹೇಳಬೇಕು.

## ಶ್ರೀ ವಿಶ್ವಾವಸು ನಾಮಸಂವತ್ಸರದ ಹಬ್ಬ ಹರಿದಿನಗಳು

| | |
|---|---|
| 1. ಚಾಂದ್ರಮಾನ ಸಂವತ್ಸರಾರಂಭ | 30.03.25 |
| 2. ಚೈತ್ರ ಸೌಭಾಗ್ಯಗೌರೀವ್ರತ | 01.04.25 |
| 3. ಶ್ರೀ ರಾಮನವಮೀ | 06.04.25 |
| 4. ಚಿತ್ರಾಪೂರ್ಣಿಮಾ, ದವನಪೂರ್ಣಿಮೆ, ಹನುಮಜ್ಜಯಂತಿ | 12.04.25 |
| 5. ಪರಶುರಾಮ ಜಯಂತಿ | 30.04.25 |
| 6. ಅಕ್ಷಯ ತದಿಗೆ | 30.04.25 |
| 7. ನೃಸಿಂಹ ಜಯಂತಿ | 10.05.25 |
| 8. ವ್ಯಾಸಪೂರ್ಣಿಮೆ, ಆಗಿಹುಣ್ಣಿಮೆ | 12.05.25 |
| 9. ಕಾರಹುಣ್ಣಿಮೆ | 11.06.25 |
| 10. ಮಣ್ಣೆತ್ತಿನ ಅಮಾವಾಸ್ಯೆ | 25.06.25 |
| 11. ಪ್ರಥಮೈಕಾದಶೀ ಶಾಕಾವ್ರತಾರಂಭ | 06.07.25 |
| 12. ಗುರುಪೂರ್ಣಿಮಾ, ವ್ಯಾಸಪೂರ್ಣಿಮಾ | 10.07.25 |
| 13. ದಕ್ಷಿಣಾಯನ ಪುಣ್ಯಕಾಲ | 16.07.25 |
| 14. ಜ್ಯೋತಿರ್ಭೀಮೇಶ್ವರ ವ್ರತ | 24.07.25 |
| 15. ನಾಗಚತುರ್ಥಿ | 28.07.25 |
| 16. ನಾಗಪಂಚಮಿ | 29.07.25 |
| 17. ಮಂಗಳಗೌರೀವ್ರತ | 29.07.25 |
| 18. ಶ್ರೀವರಮಹಾಲಕ್ಷ್ಮೀವ್ರತ | 08.08.25 |
| 19. ದಧಿವ್ರತಾರಂಭ ಪವಿತ್ರಾರೋಹಣ | 05.08.25 |
| 20. ಋಗುಪಾಕರ್ಮ | 09.08.25 |
| 21. ಯಜುರುಪಾಕರ್ಮ | 09.08.25 |
| 22. ಶ್ರೀಕೃಷ್ಣಜನ್ಮಾಷ್ಟಮೀ | 16.08.25 |
| 23. ಸ್ವರ್ಣಗೌರೀ ವ್ರತ | 26.08.25 |
| 24. ವರಸಿದ್ಧಿವಿನಾಯಕನವ್ರತ | 27.08.25 |
| 25. ಋಷಿಪಂಚಮೀ | 28.08.25 |
| 26. ವಾಮನಜಯಂತೀ, ಕ್ಷೀರವ್ರತ ಆರಂಭ. | 03.09.25 |
| 27. ಅನಂತಪದ್ಮನಾಭವ್ರತ | 06.09.25 |
| 28. ಮಹಾಲಯಾರಂಭ | 08.09.25 |
| 29. ಮಹಾಲಯಾಮಾವಾಸ್ಯೆ | 21.09.25 |

| | |
|---|---|
| 30. ಶರನ್ನವರಾತ್ರಿ, ಮಾತಾಮಹಶ್ರಾದ್ಧ. | 22.09.25 |
| 31. ಸರಸ್ವತ್ಯಾವಾಹನಂ | 29.09.25 |
| 32. ದುರ್ಗಾಷ್ಟಮೀ | 30.09.25 |
| 33. ಮಹಾನವಮೀ | 01.10.25 |
| 34. ವಿಜಯದಶಮೀ | 02.10.25 |
| 35. ಸೀಗಿ ಹುಣ್ಣಿಮೇ ಗೌರೀ ವ್ರತ | 07.10.25 |
| 36. ನೀರುತುಂಬವ ಹಬ್ಬ | 19.10.25 |
| 37. ನರಕಚತುರ್ದಶೀ | 20.10.25 |
| 38. ದೀಪಾವಳಿ ಅಮಾವಾಸ್ಯೆ | 21.10.25 |
| 39. ಬಲಿಪಾಡ್ಯಮೀ | 22.10.25 |
| 40. ಉತ್ಥಾನದ್ವಾದಶೀ | 03.11.25 |
| 41. ದೊಡ್ಡಗೌರೀ ಹುಣ್ಣಿಮೆ | 05.11.25 |
| 42. ಸ್ಕಂದಷಷ್ಠೀ | 26.11.25 |
| 43. ಹನುಮದ್ ವ್ರತ | 02.12.25 |
| 44. ಧನುರ್ಮಾಸ | 17.12.25 |
| 45. ಬನದಹುಣ್ಣಿಮೆ | 03.01.26 |
| 46. ಭೋಗೀಹಬ್ಬ | 13.01.26 |
| 47. ಮಕರಸಂಕ್ರಮಣ | 14.01.26 |
| 48. ರಥಸಪ್ತಮೀ | 25.01.26 |
| 49. ಮಧ್ವನವಮೀ | 27.01.26 |
| 50. ಭಾರತಹುಣ್ಣಿಮೆ, ವ್ಯಾಸಪೂಜಾ | 01.02.26 |
| 51. ಮಹಾಶಿವರಾತ್ರಿ | 15.02.26 |
| 52. ಹೋಳಿಕಾ ಕಾಮದಹನ | 02.03.26 |

*~*~*~*~*~*~*

## ಯಜ್ಞೋಪವೀತ ಧಾರಣವಿಧಿ

| **30**<br>**ದಶಮೀ 23–39**<br>ಉ.ಭಾ 35–59<br>ಸಿದ್ಧಿ 46–37<br>ಗರಜ 23–39<br>**ಶ್ರಾದ್ಧ–ದಶಮೀ** | **1**<br>**ಏಕಾದಶೀ 19–12**<br>ರೇವತೀ 33–04<br>ವ್ಯತೀಪಾತ 39–44<br>ಭದ್ರ 19–12<br>**ಶ್ರಾದ್ಧಾಭಾವ** | **2**<br>**ದ್ವಾದಶೀ 14–06**<br>ಅಶ್ವಿನೀ 29–32<br>ವರಿ 32–23<br>ಬಾಲವ 14–06<br>**ಶ್ರಾದ್ಧ–ಏ/ದ್ವಾ/ತ್ರ** | **3**<br>**ತ್ರಯೋ 08–32**<br>ಭರಣೀ 25–35<br>ಪರಿಘಾ 24–42<br>ತೈತಿಲ 08–32<br>**ಶ್ರಾದ್ಧ–ಚತು** | **4** ○<br>**ಚತು ಪೌರ್ಣಮಿ**<br>**02–41 07–47**<br>ಕೃತ್ತಿಕಾ 21–25<br>ಶಿವ 16–49<br>ವಣಿಜ 02–41<br>**ಶ್ರಾದ್ಧ–ಪೌರ್ಣಮಿ** | **5**<br>**ಪಾಡ್ಯ 50–58**<br>ರೋಹಿಣೀ 17–15<br>ಸಿದ್ಧ 08–56<br>ಬಾಲವ 23–52<br>**ಶ್ರಾದ್ಧ–ಪಾಡ್ಯ** | **6**<br>**ಬಿದಿಗೆ 45–31**<br>ಮೃಗಶಿರಾ 13–18<br>ಸಾಧ್ಯ ಪ್ರೀತಿ<br>01–12 53–47<br>ತೈತಿಲ 18–14<br>**ಶ್ರಾದ್ಧ–ಬಿದಿಗೆ** |

| 7 | 8 | 9 | 10 | 11 | 12 | 13 |
|---|---|---|---|---|---|---|
| **ತದಿಗೆ 40–36**<br>ಆರ್ದ್ರಾ 09–45<br>ಶುಕ್ಲ 46–47<br>ವಣಿಜ 13–02<br>**ಶ್ರಾದ್ಧ–ತದಿಗೆ** | **ಚೌತಿ 36–45**<br>ಪುನರ್ವಸು 06–49<br>ಬ್ರಹ್ಮ 40–22<br>ಬವ 08–27<br>**ಶ್ರಾದ್ಧ–ಚೌತಿ** | **ಪಂಚಮೀ 33–04**<br>ಪುಷ್ಯಾ 04–40<br>ಐಂದ್ರ 34–40<br>ಕೌಲವ 04–38<br>**ಶ್ರಾದ್ಧ–ಪಂಚಮೀ** | **ಷಷ್ಠೀ 30–48**<br>ಆಶ್ಲೇಷಾ 03–27<br>ವೈಧೃತಿ 29–48<br>ಗರಜ 01–49<br>**ಶ್ರಾದ್ಧ–ಷಷ್ಠೀ** | **ಸಪ್ತಮೀ 29–42**<br>ಮಘಾ 03–20<br>ವಿಷ್ಕಂಭ 25–51<br>ಭದ್ರ 00–06<br>**ಶ್ರಾದ್ಧ–ಸಪ್ತಮೀ** | **ಅಷ್ಟಮೀ 29–53**<br>ಪೂ.ಫ 04–25<br>ಪ್ರೀತಿ 22–51<br>ಕೌಲವ 29–53<br>**ಶ್ರಾದ್ಧ–ಅಷ್ಟಮೀ** | **ನವಮೀ 31–21**<br>ಉ.ಫ 06–44<br>ಆಯು 20–52<br>ತೈತಿಲ 00–26<br>**ಶ್ರಾದ್ಧ–ನವಮೀ** |
| **14**<br>**ದಶಮೀ 34–05**<br>ಹಸ್ತಾ 10–18<br>ಸೌಭಾಗ್ಯ 19–51<br>ವಣಿಜ 02–35<br>**ಶ್ರಾದ್ಧ–ದಶಮೀ** | **15**<br>**ಏಕಾದಶೀ 37–56**<br>ಚಿತ್ತಾ 14–59<br>ಶೋಭ 19–42<br>ಬವ 05–54<br>**ಶ್ರಾದ್ಧಾಭಾವ** | **16**<br>**ದ್ವಾದಶೀ 42–40**<br>ಸ್ವಾತೀ 20–36<br>ಅತಿಗಂಡ 20–16<br>ಕೌಲವ 10–14<br>**ಶ್ರಾದ್ಧ–ಏಕಾ/ದ್ವಾದ** | **17**<br>**ತ್ರಯೋ 47–57**<br>ವಿಶಾಖಾ 26–52<br>ಸುಕರ್ಮ 21–20<br>ಗರಜ 15–17<br>**ಶ್ರಾದ್ಧ–ತ್ರಯೋ** | **18**<br>**ಚತುರ್ದಶಿ 53–24**<br>ಅನುರಾಧಾ 33–24<br>ಧೃತಿ 22–.39<br>ಭದ್ರ 20–41<br>**ಶ್ರಾದ್ಧ–ಚತು** | **19** ●<br>**ಅಮಾವಾಸ್ಯೆ58–32**<br>ಜ್ಯೇಷ್ಠಾ 39–46<br>ಶೂಲ 23–54<br>ಚತು 25–58<br>**ಶ್ರಾದ್ಧ–ಅಮಾವಾಸ್ಯೆ** | |

| | | | |
|---|---|---|---|
| ಶನಿ | | | ಗುರು ಚಂದ್ರ |
| ರಾಹು | | | |
| | | | ಕೇತು |
| ರವಿ ಕುಜ | ಬುಧ ಶುಕ್ರ | | |

21. ಚಂದ್ರದರ್ಶನ.

26. ಸ್ಕಂಧ–ಸುಬ್ರಹ್ಮಣ್ಯ ಚಂಪಾಷಷ್ಠೀ, ವಿಷ್ಣುಪಂಚಕೋಪವಾಸ.

27. ಸೂರ್ಯ ವ್ರತ.

28. ದುರ್ಗಾಷ್ಟಮೀ.

30. ಶ್ರೀ ವಿಬುಧೇಂದ್ರತೀರ್ಥರ ಆರಾಧನೆ.

**01. ಸರ್ವೇಷಾಮೇಕಾದಶೀ (ಮೋಕ್ಷದಾ),** ಗೀತಾಜಯಂತೀ, ಗೀತಾಪಾರಾಯಣ.

**02.** ಪಾರಣೆ, ಶ್ರೀಹನುಮದ್ವ್ರತ, ಅನಂಗತ್ರಯೋದಶೀ, ಭೌಮಪ್ರದೋಷ.

03. **ಶ್ರೀ ಲಕ್ಷ್ಮೀವಲ್ಲಭತೀರ್ಥರ ಆರಾಧನೆ (ಓಡಪ್ಪಳ್ಳಿ)**

04. ಪ್ರದೋಷ ಕಾಲದಲ್ಲಿ ಆಶ್ವಲಾಯನರಿಂದ ಪ್ರತ್ಯವರೋಹಣ, ದತ್ತಜಯಂತೀ, ಲವಣದಾನೇನ ಸುರೂಪತಾ, ವಿಷ್ಣುಪಂಚಕೋಪವಾಸವಿಲ್ಲ, ಹೊಸ್ತಿಲ ಹುಣ್ಣಿಮೆ, **ಶ್ರೀ ಲಕ್ಷ್ಮೀಧರತೀರ್ಥರ ಆರಾಧನೆ.**

05. ಪೂರ್ಣಿಮಾಸೀಷ್ಟಿ.

**09. ಶ್ರೀ ಅಕ್ಷೋಭ್ಯತೀರ್ಥರ ಆರಾಧನೆ** ಹಂಚುಕಲ್ಲುಗುಡ್ಡ **(ಮುಳಬಾಗಿಲು).**

10. ಶ್ರೀ ನರಸಿಂಹದಾಸರ ಪುಣ್ಯದಿನ (ಮಾನವಿ.)

11. ಪೂರ್ವೇದ್ಯುಶ್ರಾದ್ಧ.

12. ಅಷ್ಟಕಶ್ರಾದ್ಧ.

13. ಅನ್ವಷ್ಟಕಶ್ರಾದ್ಧ, ಶುಕ್ರಾಸ್ತ.

**15. ಸರ್ವೇಷಾಮೇಕಾದಶೀ (ಸಫಲಾ).**

16. ಪಾರಣೆ. ಧನುಸ್ಸಂಕ್ರಮಣ.

**17.** ಪ್ರದೋಷ, ಧನುರ್ಮಾಸಾರಂಭ, ಶ್ರೀ **ದಯಾನಿಧಿತೀರ್ಥರ ಆರಾಧನೆ (ಮುಳಬಾಗಿಲು).**

18. ಮಾಸಶಿವರಾತ್ರಿ.

19. ದರ್ಶ, ವಿಷ್ಣುಪಂಚಕೋಪವಾಸ, ಎಳ್ಳಮಾವಾಸ್ಯೆ, ಕೇತುಜಯಂತೀ, ಶ್ರೀಜಿತಾಮಿತ್ರರ ಆರಾಧನೆ.

**ಶಕೆ–1947**

# ಶ್ರೀ ಶ್ರೀಪಾದರಾಜ ಮಠ (ಮುಳಬಾಗಿಲು ಮಠ)

ಶ್ರೀ ವಿಶ್ವಾವಸುನಾಮ ಸಂವತ್ಸರ

**ದಕ್ಷಿಣ–ಉತ್ತರಾಯಣ–ಹೇಮಂತಋತು** ಓಂ ಶ್ರೀಲಕ್ಷ್ಮೀನಾರಾಯಣಾಯ ನಮಃ **ಪುಷ್ಯ** ದಿನಮಾನ 27–35/27–46 **ಡಿಸೆಂಬರ್ 2025/ಜನವರಿ 26**

| ಭಾನುವಾರ<br>ರಾಹುಕಾಲ<br>4.30 ರಿಂದ 6.00 | ಸೋಮವಾರ<br>ರಾಹುಕಾಲ<br>7.30 ರಿಂದ 9.00 | ಮಂಗಳವಾರ<br>ರಾಹುಕಾಲ<br>3.00 ರಿಂದ 4.30 | ಬುಧವಾರ<br>ರಾಹುಕಾಲ<br>12.00 ರಿಂದ 1.30 | ಗುರುವಾರ<br>ರಾಹುಕಾಲ<br>1.30 ರಿಂದ 3.00 | ಶುಕ್ರವಾರ<br>ರಾಹುಕಾಲ<br>10.30 ರಿಂದ 12.00 | ಶನಿವಾರ<br>ರಾಹುಕಾಲ<br>9.00 ರಿಂದ 10.30 |
|---|---|---|---|---|---|---|
| **18** ●<br>**ಅಮಾವಾಸ್ಯೆ 45–36**<br>ಪೂ.ಷಾ 08–54<br>ಹರ್ಷ 27–18<br>ಚತು 13–58<br>**ಶ್ರಾದ್ಧ–ಅಮಾವಾಸ್ಯೆ** | | ಶನಿ<br>ಗುರು ಚಂದ್ರ<br>ರಾಹು<br>ರವಿ,ಬುಧ, ಶುಕ್ರ, ಕುಜ<br>ಕೇತು | | | **ಶುಕ್ಲ ಪಕ್ಷ – ಪ್ರಾರಂಭ**<br>**20-12-25**<br>**ಕೃಷ್ಣ ಪಕ್ಷ – ಪ್ರಾರಂಭ**<br>**04-01-26** | **20**<br>**ಪಾಡ್ಯ 60–00**<br>ಮೂಲಾ 45–35<br>ಗಂಡ 24–46<br>ಕಿಂಸ್ತು 30–46<br>**ಶ್ರಾದ್ಧ–ಪಾಡ್ಯ** |
| **21**<br>**ಪಾಡ್ಯ 02–59**<br>ಪೂ.ಷಾ 50–31<br>ವೃದ್ಧಿ 25–01<br>ಬವ 02–59<br>**ಶ್ರಾದ್ಧ–ಬಿದಿಗೆ** | **22**<br>**ಬಿದಿಗೆ 06–26**<br>ಉ.ಷಾ 54–23<br>ಧ್ರುವ 24–29<br>ಕೌಲವ 06–26<br>**ಶ್ರಾದ್ಧ–ತದಿಗೆ** | **23**<br>**ತದಿಗೆ 08–43**<br>ಶ್ರವಣಾ 57–02<br>ವ್ಯಾಘಾತ 23–01<br>ಗರಜ 08–43<br>**ಶ್ರಾದ್ಧ–ಚೌತಿ** | **24**<br>**ಚೌತಿ 09–44**<br>ಧನಿಷ್ಠಾ 58–25<br>ಹರ್ಷಣ 20–33<br>ಭದ್ರ 09–44<br>**ಶ್ರಾದ್ಧ–ಪಂಚಮೀ** | **25**<br>**ಪಂಚಮೀ 09–26**<br>ಶತಭಿಷಾ 58–36<br>ವಜ್ರ 17–07<br>ಬಾಲವ 09–26<br>**ಶ್ರಾದ್ಧ–ಷಷ್ಠೀ** | **26**<br>**ಷಷ್ಠೀ 07–55**<br>ಪೂ.ಭಾ 57–40<br>ಸಿದ್ಧಿ 12–43<br>ತೈತಿಲ 07–55<br>**ಶ್ರಾದ್ಧ–ಸಪ್ತಮೀ** | **27**<br>**ಸಪ್ತಮೀ 05–15**<br>ಉ.ಭಾ 55–45<br>ವ್ಯತೀಪಾತ 07–27<br>ವಣಿಜ 05–15<br>**ಶ್ರಾದ್ಧ–ಅಷ್ಟಮೀ** |
| **28**<br>**ಅಷ್ಟಮೀ 01–36 ನವಮೀ 57–08**<br>ರೇವತಿ 52–59<br>ವರಿ 01–24 ಪರಿಘ 54–42<br>ಬವ 01–36<br>**ಶ್ರಾದ್ಧ–ಚತು** | **29**<br>**ದಶಮೀ 52–01**<br>ಅಶ್ವಿನೀ 49–35<br>ಶಿವ 47–29<br>ತೈತಿಲ 24–34<br>**ಶ್ರಾದ್ಧ–ದಶಮೀ** | **30**<br>**ಏಕಾದಶೀ 46–28**<br>ಭರಣೀ 45–44<br>ಸಿದ್ಧ 39–53<br>ವಣಿಜ 19–14<br>**ಶ್ರಾದ್ಧಾಭಾವ** | **31**<br>**ದ್ವಾದಶೀ 40–37**<br>ಕೃತ್ತಿಕಾ 41–37<br>ಸಾಧ್ಯ 32–03<br>ಬವ 13–32<br>**ಶ್ರಾದ್ಧ–ಏಕಾ/ದ್ವಾದ** | **1**<br>**ತ್ರಯೋ 34–43**<br>ರೋಹಿಣೀ 37–26<br>ಶುಭ 24–09<br>ಕೌಲವ 07–40<br>**ಶ್ರಾದ್ಧ–ತ್ರಯೋ** | **2**<br>**ಚತುರ್ದಶಿ 28–59**<br>ಮೃಗಶಿರಾ 33–26<br>ಶುಕ್ಲ 16–20<br>ಗರಜ 01–49<br>**ಶ್ರಾದ್ಧ–ಚತುರ್ದಶಿ** | **3** ○<br>**ಪೌರ್ಣಮೀ 23–37**<br>ಆರ್ದ್ರಾ 29–47<br>ಬ್ರಹ್ಮ 08–46<br>ಬವ 23–37<br>**ಶ್ರಾದ್ಧ–ಪೌರ್ಣಮೀ** |

| 4 | 5 | 6 | 7 | 8 | 9 | 10 |
|---|---|---|---|---|---|---|
| **ಪಾಡ್ಯ 18–47** | **ಬಿದಿಗೆ 14–40** | **ತದಿಗೆ 11–28** | **ಚೌತಿ 09–20** | **ಪಂಚಮೀ 08–22** | **ಷಷ್ಠೀ 08–42** | **ಸಪ್ತಮೀ 10–19** |
| ಪುನರ್ವಸು 26–43 | ಪುಷ್ಯಾ 24–22 | ಆಶ್ಲೇಷಾ 22–56 | ಮಘಾ 22–34 | ಪೂ.ಫ 23–22 | ಉ.ಫ. 25–26 | ಹಸ್ತಾ 28–43 |
| ಐಂದ್ರ 01–36 ವೈಧೃತಿ 54–59 | ವಿಷ್ಕಂಭ 49–01 | ಪ್ರೀತಿ 43–51 | ಆಯು 39–34 | ಸೌಭಾಗ್ಯ 36–15 | ಶೋಭ 33–55 | ಅತಿಗಂಡ 32–35 |
| ಕೌಲವ 18–47 | ಗರಜ 14–40 | ಭದ್ರ 11–28 | ಬಾಲವ 09–20 | ತೈತಿಲ 08–22 | ವಣಿಜ 08–42 | ಬವ 10–19 |
| **ಶ್ರಾದ್ಧ–ಪಾಡ್ಯ** | **ಶ್ರಾದ್ಧ–ಬಿದಿಗೆ/ತದಿಗೆ** | **ಶ್ರಾದ್ಧ–ಚೌತಿ** | **ಶ್ರಾದ್ದ–ಪಂಚಮೀ** | **ಶ್ರಾದ್ಧ–ಷಷ್ಠೀ** | **ಶ್ರಾದ್ಧ–ಸಪ್ತಮೀ** | **ಶ್ರಾದ್ಧ–ಅಷ್ಟಮೀ** |

| 11 | 12 | 13 | 14 | 15 | 16 | 17 |
|---|---|---|---|---|---|---|
| **ಅಷ್ಟಮೀ 13–11** | **ನವಮೀ 17–09** | **ದಶಮೀ 21–58** | **ಏಕಾದಶೀ 27–19** | **ದ್ವಾದಶೀ 32–46** | **ತ್ರಯೋ 37–51** | **ಚತುರ್ದಶಿ 42–14** |
| ಚಿತ್ತಾ 33–10 | ಸ್ವಾತೀ 38–37 | ವಿಶಾಖಾ 44–46 | ಅನುರಾಧಾ 51–17 | ಜ್ಯೇಷ್ಠಾ 57–45 | ಮೂಲಾ 60–00 | ಮೂಲಾ 03–44 |
| ಸುಕರ್ಮ 32–08 | ಧೃತಿ 32–39 | ಶೂಲ 33–25 | ಗಂಡ 34–42 | ವೃದ್ಧಿ 36–00 | ಧ್ರುವ 37–02 | ವ್ಯಾಘಾತ 37–33 |
| ಕೌಲವ 13–11 | ಗರಜ 17–09 | ಭದ್ರ 21–58 | ಬಾಲವ 27–19 | ಕೌಲವ 00–03 | ಗರಜ 05–21 | ಭದ್ರ 10–06 |
| **ಶ್ರಾದ್ಧ–ನವಮೀ** | **ಶ್ರಾದ್ಧಾಭಾವ** | **ಶ್ರಾದ್ಧ–ದಶಮೀ** | **ಶ್ರಾದ್ಧಾಭಾವ** | **ಶ್ರಾದ್ಧ–ಏಕಾ/ದ್ವಾದ** | **ಶ್ರಾದ್ಧ–ತ್ರಯೋ** | **ಶ್ರಾದ್ಧ–ಚತುರ್ದಶಿ** |

20. ದರ್ಶೇಷ್ಟಿ, ಕರಿದಿನ.

21. ಚಂದ್ರದರ್ಶನ.

23. ವಿಷ್ಣುಪಂಚಕೋಪವಾಸ.

27. ಧನುರ್ವ್ಯತೀಪಾತಯೋಗ.

28. ದುರ್ಗಾಷ್ಟಮೀ, ಬನಶಂಕರೀ ನವರಾತ್ರ್ಯಾರಂಭ.

**29. ಶ್ರೀ ಆದಿರಾಜತೀರ್ಥರ ಆರಾಧನೆ (ಶ್ರೀರಂಗ), ಶ್ರೀ ಗುಣಸಾರನಿಧಿತೀರ್ಥರ ಆರಾಧನೆ (ಮುಳಬಾಗಿಲು), ಶ್ರೀ ಯಶೋನಿಧಿತೀರ್ಥರ ಆರಾಧನೆ (ಪಳ್ಳಿಪಾಳ್ಯಂ).**

**30. ಸರ್ವೇಷಾಮೇಕಾದಶೀ (ಪುತ್ರದಾ),** ರೈವತಮನ್ವಾದಿ, **ವೈಕುಂಠ ಏಕಾದಶೀ.**

31. ಪಾರಣೆ, ಮುಕ್ಕೋಟಿದ್ವಾದಶೀ, ಶ್ರೀ ರಘೂತ್ತಮತೀರ್ಥರ ಆರಾಧನೆ.

02. ಶಾಕಾಂಬರಿಗೆ ಸರ್ವಶಾಕ ನಿವೇದನಾ.

**03.** ಬನದ ಹುಣ್ಣಿಮೆ, ಮಾಘಸ್ನಾನಾರಂಭ, ಅನ್ವಾಧಾನ, ವಿಷ್ಣುಪಂಚಕೋಪವಾಸ, **ಶ್ರೀ ಲಕ್ಷ್ಮೀಮನೋಹರತೀರ್ಥರ ಆರಾಧನೆ (ಪಳ್ಳಿಪಾಳ್ಯ).**

04. ಧನುರ್ವೈಧೃತಿಯೋಗ, ಪೂರ್ಣಿಮಾಸೀಷ್ಟಿ.

09. ಪೂರ್ವೇದ್ಯುಶ್ರಾದ್ಧ.

10. ಅಷ್ಟಕಶ್ರಾದ್ಧ, ಕಾಲಾಷ್ಟಮೀ, ಶ್ರೀ ನರಹರಿತೀರ್ಥ ಆರಾಧನೆ.

11. ಅನ್ವಷ್ಟಕಾಶ್ರಾದ್ಧ, ಶ್ರೀ ಗೋಪಾಲದಾಸರ ಪುಣ್ಯದಿನ–ಉತ್ತನೂರು.

13. ಧನುರ್ಮಾಸ ಸಮಾಪ್ತಿ, ಭೋಗಿ, **ಶ್ರೀ ಕೇಶವನಿಧಿತೀರ್ಥರ ಪೂರ್ವಾರಾಧನೆ.**

**14. ಸರ್ವೇಷಾಮೇಕಾದಶೀ (ಷಟ್ತಿಲಾ). ಮಕರ ಸಂಕ್ರಮಣ.**

**15. ಪಾರಣೆ,** ಉತ್ತರಾಯಣ ಪರ್ವಪುಣ್ಯಕಾಲ, ಸೂರ್ಯೋದಯದಿಂದ ಬೆಳಗ್ಗೆ 8–56ರ ವರೆಗೆ. ಉತ್ತರಾಯಣಾರಂಭ, ಷಟ್ತಿಲಕರ್ಮಾನುಷ್ಠಾನ. ಸಂಕ್ರಾಂತಿ ಹಬ್ಬ, **ಶ್ರೀ ಕೇಶವನಿಧಿತೀರ್ಥರ ಮಹಾಸಮಾರಾಧನೆ,**

**16.** ಪ್ರದೋಷ, **ಶ್ರೀ ಕೇಶವನಿಧಿತೀರ್ಥರ ಉತ್ತರಾರಾಧನೆ.**

18. ದರ್ಶ, ಪಿಂಡಪಿತೃಯಜ್ಞ, ಅಮೃತನ ಅಮಾವಾಸ್ಯೆ, ವಿಷ್ಣುಪಂಚಕೋಪವಾಸ, ಶ್ರೀಪುರಂದರದಾಸರ ಪುಣ್ಯದಿನ, (ಹಂಪಿ).

ಶಕೆ–1947 **ಶ್ರೀ ಶ್ರೀಪಾದರಾಜ ಮಠ (ಮುಳಬಾಗಿಲು ಮಠ)** ಶ್ರೀ ವಿಶ್ವಾವಸುನಾಮ ಸಂವತ್ಸರ

**ಉತ್ತರಾಯಣ–ಶಿಶಿರಋತು** ಓಂ ಶ್ರೀಕಮಲಾಮಾಧವಾಯ ನಮಃ **ಮಾಘ** ದಿನಮಾನ 27–52/28–14 **ಜನವರಿ ಫೆಬ್ರವರಿ–2026**

| **ಭಾನುವಾರ**<br>ರಾಹುಕಾಲ<br>4.30 ರಿಂದ 6.00 | **ಸೋಮವಾರ**<br>ರಾಹುಕಾಲ<br>7.30 ರಿಂದ 9.00 | **ಮಂಗಳವಾರ**<br>ರಾಹುಕಾಲ<br>3.00 ರಿಂದ 4.30 | **ಬುಧವಾರ**<br>ರಾಹುಕಾಲ<br>12.00 ರಿಂದ 1.30 | **ಗುರುವಾರ**<br>ರಾಹುಕಾಲ<br>1.30 ರಿಂದ 3.00 | **ಶುಕ್ರವಾರ**<br>ರಾಹುಕಾಲ<br>10.30 ರಿಂದ 12.00 | **ಶನಿವಾರ**<br>ರಾಹುಕಾಲ<br>9.00 ರಿಂದ 10.30 |
|---|---|---|---|---|---|---|
| **ಶುಕ್ಲ ಪಕ್ಷ – ಪ್ರಾರಂಭ**<br>**19–01–26**<br>**ಕೃಷ್ಣ ಪಕ್ಷ – ಪ್ರಾರಂಭ**<br>**02–02–26** | **19**<br>**ಪಾಡ್ಯ 47–46**<br>ಉ.ಷಾ 13–03<br>ವಜ್ರ 36–12<br>ಕಿಂಸ್ತು 13–44<br>**ಶ್ರಾದ್ಧ–ಪಾಡ್ಯ** | **20**<br>**ಬಿದಿಗೆ 48–39**<br>ಶ್ರವಣಾ 15–59<br>ಸಿದ್ಧಿ 34–06<br>ಬಾಲವ 18–15<br>**ಶ್ರಾದ್ಧ–ಬಿದಿಗೆ** | **21**<br>**ತದಿಗೆ 48–15**<br>ಧನಿಷ್ಠಾ 17–51<br>ವ್ಯತೀಪಾತ 31–01<br>ತೈತಿಲ 18–29<br>**ಶ್ರಾದ್ಧ–ತದಿಗೆ** | **22**<br>**ಚೌತಿ 46–26**<br>ಶತಭಿಷಾ 18–08<br>ವರಿ 26–58<br>ವಣಿಜ 17–27<br>**ಶ್ರಾದ್ಧ–ಚೌತಿ** | **23**<br>**ಪಂಚಮೀ 46–36**<br>ಪೂ.ಭಾ 17–29<br>ಪರಿಘ 22–00<br>ಬವ 15–16<br>**ಶ್ರಾದ್ಧ–ಪಂಚಮೀ** | **24**<br>**ಷಷ್ಠೀ 40–07**<br>ಉ.ಭಾ 15–46<br>ಶಿವ 16–14<br>ಕೌಲವ 12–01<br>**ಶ್ರಾದ್ಧ–ಷಷ್ಠೀ** |
| **25**<br>**ಸಪ್ತಮೀ 35–35**<br>ರೇವತೀ 13–12<br>ಸಿದ್ಧ 09–46<br>ಗರಜ 07–54<br>**ಶ್ರಾದ್ಧ–ಸಪ್ತಮೀ** | **26**<br>**ಅಷ್ಟಮೀ 30–24**<br>ಅಶ್ವಿನೀ 09–57<br>ಸಾಧ್ಯ ಶುಭ<br>02–44 55–16<br>ಭದ್ರ 03–03<br>**ಶ್ರಾದ್ಧ–ಅಷ್ಟಮೀ** | **27**<br>**ನವಮೀ 24–48**<br>ಭರಣೀ 06–12<br>ಶುಕ್ಲ 47–31<br>ಕೌಲವ 24–48<br>**ಶ್ರಾದ್ಧ–ನವಮೀ** | **28**<br>**ದಶಮೀ 18–56**<br>ಕೃತ್ತಿಕಾ ರೋಹಿಣೀ<br>02–07 57–56<br>ಬ್ರಹ್ಮ 39–39<br>ಗರಜೆ 18–56<br>**ಶ್ರಾದ್ಧ–ದಶಮೀ** | **29**<br>**ಏಕಾದಶೀ 13–02**<br>ಮೃಗಶಿರಾ 53–53<br>ಐಂದ್ರ 38–48<br>ಭದ್ರ 13–02<br>**ಶ್ರಾದ್ಧಾಭಾವ** | **30**<br>**ದ್ವಾದಶೀ 07–19**<br>ಆರ್ದ್ರಾ 50–09<br>ವೈಧೃತಿ 24–11<br>ಬಾಲವ 07–19<br>**ಶ್ರಾದ್ಧ–ಏ/ದ್ವಾ/ತ್ರ** | **31**<br>**ತ್ರಯೋ ಚತು**<br>**01–58 57–11**<br>ಪುನರ್ವಸು 46–56<br>ವಿಷ್ಕಂಭ 16–53<br>ತೈತಿಲ 01–58<br>**ಶ್ರಾದ್ಧ–ಚತುರ್ದಶಿ** |
| **1** ○<br>**ಪೌರ್ಣಮಿ 53–08**<br>ಪುಷ್ಯಾ 44–25<br>ಪ್ರೀತಿ 10–06<br>ಭದ್ರ 25–11<br>**ಶ್ರಾದ್ಧ–ಪೌರ್ಣಮಿ** | **2**<br>**ಪಾಡ್ಯ 50–00**<br>ಆಶ್ಲೇಷಾ 42–47<br>ಆಯು ಸೌಭಾಗ್ಯ<br>03–55 58–30<br>ಬಾಲವ 21–35<br>**ಶ್ರಾದ್ಧ–ಪಾಡ್ಯ** | **3**<br>**ಬಿದಿಗೆ 47–57**<br>ಮಘಾ 42–10<br>ಶೋಭ 53–56<br>ತೈತಿಲ 18–59<br>**ಶ್ರಾದ್ಧ–ಬಿದಿಗೆ** | **4**<br>**ತದಿಗೆ 47–05**<br>ಪೂ.ಫ 42–42<br>ಅತಿಗಂಡ 50–19<br>ವಣಿಜ 17–30<br>**ಶ್ರಾದ್ಧ–ತದಿಗೆ** | **5**<br>**ಚೌತಿ 47–29**<br>ಉ.ಫ 44–29<br>ಸುಕರ್ಮ 47–41<br>ಬವ 17–16<br>**ಶ್ರಾದ್ಧ–ಚೌತಿ** | **6**<br>**ಪಂಚಮೀ 49–12**<br>ಹಸ್ತಾ 47–30<br>ಧೃತಿ 46–03<br>ಕೌಲವ 18–19<br>**ಶ್ರಾದ್ಧ–ಪಂಚಮೀ** | **7**<br>**ಷಷ್ಠೀ 52–08**<br>ಚಿತ್ತಾ 51–42<br>ಶೂಲ 45–22<br>ಗರಜ 20–39<br>**ಶ್ರಾದ್ಧ–ಷಷ್ಠೀ** |

| | | | | | | |
|---|---|---|---|---|---|---|
| **8**<br>**ಸಪ್ತಮೀ 56–09**<br>ಸ್ವಾತೀ 56–56<br>ಗಂಡ 45–30<br>ಭದ್ರ 24–08<br>**ಶ್ರಾದ್ಧ–ಸಪ್ತಮೀ** | **9**<br>**ಅಷ್ಟಮೀ 60–00**<br>ವಿಶಾಖಾ 60–00<br>ವೃದ್ಧಿ 56–19<br>ಬಾಲವ 28–34<br>**ಶ್ರಾದ್ಧ–ಅಷ್ಟಮೀ** | **10**<br>**ಅಷ್ಟಮೀ 01–00**<br>ವಿಶಾಖಾ 02–59<br>ಧ್ರುವ 47–33<br>ಕೌಲವ 01–00<br>**ಶ್ರಾದ್ಧ–ನವಮೀ** | **11**<br>**ನವಮೀ 06–20**<br>ಅನುರಾಧಾ 09–28<br>ವ್ಯಾಘಾತ 48–56<br>ಗರಜ 06–20<br>**ಶ್ರಾದ್ಧ–ದಶಮೀ** | **12**<br>**ದಶಮೀ 11–44**<br>ಜ್ಯೇಷ್ಠಾ 16–00<br>ಹರ್ಷಣ 50–08<br>ಭದ್ರ 11–44<br>**ಶ್ರಾದ್ಧ–ಏಕಾದಶೀ** | **13**<br>**ಏಕಾದಶೀ 16–44**<br>ಮೂಲಾ 22–07<br>ವಜ್ರ 50–54<br>ಬಾಲವ 16–44<br>**ಶ್ರಾದ್ಧಾಭಾವ** | **14**<br>**ದ್ವಾದಶೀ 20–59**<br>ಪೂ.ಷಾ 27–31<br>ಸಿದ್ಧಿ 50–59<br>ತೈತಿಲ 20–59<br>**ಶ್ರಾದ್ಧ–ದ್ವಾದಶಿ** |
| **15**<br>**ತ್ರಯೋ 24–13**<br>ಉ.ಷಾ 31–55<br>ವ್ಯತೀಪಾತ 50–14<br>ವಣಿಜ 24–13<br>**ಶ್ರಾದ್ಧ–ತ್ರಯೋ** | **16**<br>**ಚತುರ್ದಶಿ 26–16**<br>ಶ್ರವಣಾ 35–09<br>ವರಿ 48–30<br>ಶಕುನಿ 26–16<br>**ಶ್ರಾದ್ಧ–ಚತುರ್ದಶಿ** | **17** ●<br>**ಅಮಾವಾಸ್ಯೆ 26–59**<br>ಧನಿಷ್ಠಾ 37–08<br>ಪರಿಘ 45–48<br>ನಾಗ 26–59<br>**ಶ್ರಾದ್ಧ–ಅಮಾವಾಸ್ಯೆ** | | | | (ಗ್ರಹ ಚಕ್ರ – see below) |

| | | | |
|---|---|---|---|
| ಶನಿ | | | ಗುರು ಚಂದ್ರ |
| ರ.ಬು ಶು.ರಾ | | | |
| ಕುಜ | | | ಕೇತು |
| | | | |

19. ಮಧ್ವನವರಾತ್ರಾರಂಭ, ಸರ್ವಮೂಲ ಪಾರಾಯಣ, ದರ್ಶೇಷ್ಟಿ.

20. ವಿಷ್ಣುಪಂಚಕೋಪವಾಸ, ಚಂದ್ರದರ್ಶನ, ಶ್ರೀ **ಸಂಕರ್ಷಣತೀರ್ಥರ ಆರಾಧನೆ (ಶ್ರೀನಗರ).**

**23.** ವಸಂತ ಪಂಚಮೀ, ಶ್ರೀ **ವಲ್ಲಭತೀರ್ಥರ ಆರಾಧನೆ (ಓಡಪಳ್ಳಿ).**

25. ರಥಸಪ್ತಮೀ, ಅರುಣೋದಯೇ ಸಪ್ತಾರ್ಕಪರ್ಣಸ್ನಾನ, ತರ್ಪಣ, ರಥಸ್ಥ ಸೂರ್ಯಪೂಜಾ, ವೈವಸ್ವತ ಮನ್ವಾದಿ, ಕೂಷ್ಮಾಂಡಧಾನದಿಂದ ಗರ್ಭಶುದ್ಧಿ.

26. ಭೀಷ್ಮಾಷ್ಟಮೀ, ಭೀಷ್ಮತರ್ಪಣ, ದುರ್ಗಾಷ್ಟಮಿ.

**27. ಶ್ರೀ ಮಧ್ವನವಮೀ, ಶ್ರೀ ಮಧ್ವಾಚಾರ್ಯರು ಬದರಿಕಾಶ್ರಮ ಪ್ರವೇಶಿಸಿದ ದಿನ.**

**29. ಸರ್ವೇಷಾಮೇಕಾದಶೀ (ಜಯಾ).**

30. ಪಾರಣೆ, ಭೀಮದ್ವಾದಶೀ, ತಿಲೋತ್ಪತ್ತಿ, ಪ್ರದೋಷ, ಅಂತ್ಯಪುಷ್ಕರಣೀ.

31. ಸ್ತ್ರೀಯರು ಮರದಬಾಗಿಣ ಕೊಡಬೇಕು. ಅಂತ್ಯಪುಷ್ಕರಣೀ.

**01.** ಭಾರತ ಹುಣ್ಣಿಮೆ, ವ್ಯಾಸಪೂರ್ಣಿಮಾ, ವ್ಯಾಸಪೂಜಾ, ಮಾಘಸ್ನಾನಸಮಾಪ್ತಿ, ವಿಷ್ಣುಪಂಚಕೋಪವಾಸ, ಪುಷ್ಯಾರ್ಕಯೋಗ, ಶ್ರೀ **ಜ್ಞಾನನಿಧಿತೀರ್ಥರ ಆರಾಧನೆ (ಶ್ರೀರಂಗಪಟ್ಟಣ).** 02. ಪೂರ್ಣಿಮಾಸೀಷ್ಠಿ.

**08.** ಪೂರ್ವೇದ್ಯುಶ್ರಾದ್ಧ, ಶ್ರೀ **ಗುಣನಿಧಿತೀರ್ಥರ ಪುಣ್ಯದಿನ (ತಾಯೂರು).**

09. ಕಾಲಾಷ್ಟಮಿ, ಅಷ್ಟಕಶ್ರಾದ್ಧ.

10 ಅನ್ವಷ್ಟಕಶ್ರಾದ್ಧ.

**13. ಸರ್ವೇಷಾಮೇಕಾದಶೀ (ವಿಜಯಾ),** ಕುಂಭಸಂಕ್ರಮಣ.

14. ಪಾರಣೆ, ಶನಿಪ್ರದೋಷ.

15. **ಮಹಾಶಿವರಾತ್ರಿ, ರುದ್ರಾಂತರ್ಯಾಮಿ ಸಂಕರ್ಷಣ ಮೂರ್ತಿ ದರುಶನ.** ಶ್ರೀವಿಷ್ಣುತೀರ್ಥರ ಪುಣ್ಯದಿನ

16. ವಿಷ್ಣುಮಂಚಕೋಪವಾಸ.

17. ವಿಷ್ಣುಪಂಚಕೋಪವಾಸ, ದರ್ಶ, ಪದ್ಮಕಯೋಗ. ದ್ವಾಪರಯುಗಾದಿ. **ಶ್ರೀ ಶ್ರೀಕಾಂತತೀರ್ಥರ ಆರಾಧನೆ (ನಂಗಲಿ),** ಶ್ರೀ ಗುರುಪ್ರಾಣೇಶದಾಸರ ಪುಣ್ಯದಿನ (ಲಿಂಗಸೂಗುರು).

**ಶಕೆ–1947** | **ಶ್ರೀ ಶ್ರೀಪಾದರಾಜ ಮಠ (ಮುಳಬಾಗಿಲು ಮಠ)** | **ಶ್ರೀ ವಿಶ್ವಾವಸುನಾಮ ಸಂವತ್ಸರ**

**ಉತ್ತರಾಯಣ–ಶಿಶಿರಋತು** ಓಂ ಶ್ರೀಪದ್ಮಾಗೋವಿಂದಾಯ ನಮಃ **ಫಾಲ್ಗುಣ** ದಿನಮಾನ 28–46/29–17 **ಫೆಬ್ರವರಿ/ಮಾರ್ಚ್ – 2026**

| **ಭಾನುವಾರ**<br>ರಾಹುಕಾಲ<br>4.30 ರಿಂದ 6.00 | **ಸೋಮವಾರ**<br>ರಾಹುಕಾಲ<br>7.30 ರಿಂದ 9.00 | **ಮಂಗಳವಾರ**<br>ರಾಹುಕಾಲ<br>3.00 ರಿಂದ 4.30 | **ಬುಧವಾರ**<br>ರಾಹುಕಾಲ<br>12.00 ರಿಂದ 1.30 | **ಗುರುವಾರ**<br>ರಾಹುಕಾಲ<br>1.30 ರಿಂದ 3.00 | **ಶುಕ್ರವಾರ**<br>ರಾಹುಕಾಲ<br>10.30 ರಿಂದ 12.00 | **ಶನಿವಾರ**<br>ರಾಹುಕಾಲ<br>9.00 ರಿಂದ 10.30 |
|---|---|---|---|---|---|---|
| | | **ಶುಕ್ಲ ಪಕ್ಷ – ಪ್ರಾರಂಭ**<br>**18.03.26**<br>**ಕೃಷ್ಣ ಪಕ್ಷ – ಪ್ರಾರಂಭ**<br>**04.03.26** | **18**<br>**ಪಾಡ್ಯ 26–27**<br>ಶತಭಿಷಾ 37–53<br>ಶಿವ 42–07<br>ಬವ 26–27<br>**ಶ್ರಾದ್ಧ–ಪಾಡ್ಯ** | **19**<br>**ಬಿದಿಗೆ 24–40**<br>ಪೂ.ಭಾ 37–28<br>ಸಿದ್ಧ 37–29<br>ಕೌಲವ 24–40<br>**ಶ್ರಾದ್ಧ–ಬಿದಿಗೆ** | **20**<br>**ತದಿಗೆ 21–48**<br>ಉ.ಭಾ 36–00<br>ಸಾಧ್ಯ 32–01<br>ಗರಜ 21–48<br>**ಶ್ರಾದ್ಧ–ತದಿಗೆ** | **21**<br>**ಚೌತಿ 17–57**<br>ರೇವತೀ 33–37<br>ಶುಭ 25–48<br>ಭದ್ರ 17–57<br>**ಶ್ರಾದ್ಧ–ಚೌತಿ/ಪಂಚ** |
| **22**<br>**ಪಂಚಮೀ 13–19**<br>ಅಶ್ವಿನಿ 30–37<br>ಶುಕ್ಲ 19–00<br>ಬಾಲವ 13–19<br>**ಶ್ರಾದ್ಧ–ಷಷ್ಠೀ** | **23**<br>**ಷಷ್ಠೀ 08–04**<br>ಭರಣೀ 26–52<br>ಬ್ರಹ್ಮ 11–42<br>ತೈತಿಲ 08–04<br>**ಶ್ರಾದ್ಧ–ಸಪ್ತಮೀ** | **24**<br>**ಸಪ್ತಮೀ 02–24 ಅಷ್ಟಮೀ 56–29**<br>ಕೃತ್ತಿಕಾ 22–52<br>ಐಂದ್ರ 04–05 ವೈಧೃತಿ 56–16<br>ವಣಿಜ 02–24<br>**ಶ್ರಾದ್ಧ–ಅಷ್ಟಮೀ** | **25**<br>**ನವಮೀ 50–32**<br>ರೋಹಿಣೀ 18–42<br>ವಿಷ್ಕಂಭ 48–26<br>ವಾಲವ 23–31<br>**ಶ್ರಾದ್ಧ–ನವಮೀ** | **26**<br>**ದಶಮೀ 44–48**<br>ಮೃಗಶಿರಾ 14–36<br>ಪ್ರೀತಿ 40–46<br>ತೈತಿಲ 17–41<br>**ಶ್ರಾದ್ಧ–ದಶಮೀ** | **27**<br>**ಏಕಾದಶೀ 39–26**<br>ಆರ್ದ್ರಾ 10–47<br>ಆಯು 33–24<br>ವಣಿಜ 12–07<br>**ಶ್ರಾದ್ಧಾಭಾವ** | **28**<br>**ದ್ವಾದಶೀ 34–40**<br>ಪುನರ್ವಸು 07–26<br>ಸೌಭಾಗ್ಯ 26–29<br>ಬವ 07–01<br>**ಶ್ರಾದ್ಧ–ಏಕಾ/ದ್ವಾದ** |
| **1**<br>**ತ್ರಯೋ 30–37**<br>ಪುಷ್ಯಾ 04–45<br>ಶೋಭ 20–08<br>ಕೌಲವ 02–34<br>**ಶ್ರಾದ್ಧ–ತ್ರಯೋ** | **2**<br>**ಚತುರ್ದಶಿ 27–30**<br>ಆಶ್ಲೇಷಾ 02–54<br>ಅತಿಗಂಡ 14–31<br>ವಣಿಜ 27–30<br>**ಶ್ರಾದ್ಧ–ಚತುರ್ದಶಿ** | **3** ○<br>**ಪೌರ್ಣಮೀ 25–29**<br>ಮಘಾ 02–03<br>ಸುಕರ್ಮ 09–44<br>ಬವ 25–29<br>**ಶ್ರಾದ್ಧ–ಪೌರ್ಣಮಿ** | **4**<br>**ಪಾಡ್ಯ 24–38**<br>ಪೂ.ಫ 02–19<br>ಧೃತಿ 05–52<br>ಕೌಲವ 24–38<br>**ಶ್ರಾದ್ಧ–ಪಾಡ್ಯ** | **5**<br>**ಬಿದಿಗೆ 25–04**<br>ಉ.ಫ 03–48<br>ಶೂಲ 02–58<br>ಗರಜ 25–04<br>**ಶ್ರಾದ್ಧ–ಬಿದಿಗೆ** | **6**<br>**ತದಿಗೆ 26–47**<br>ಹಸ್ತಾ 06–33<br>ಗಂಡ 01–05<br>ಭದ್ರ 26–47<br>**ಶ್ರಾದ್ಧ–ತದಿಗೆ** | **7**<br>**ಚೌತಿ 29–44**<br>ಚಿತ್ತಾ 10–30<br>ವೃದ್ಧಿ 00–10<br>ಬಾಲವ 29–44<br>**ಶ್ರಾದ್ಧ–ಚೌತಿ** |

| | | | | | | |
|---|---|---|---|---|---|---|
| **8**<br>**ಪಂಚಮೀ 33–43**<br>ಸ್ವಾತೀ 15–31<br>ಧ್ರುವ 00–08<br>ಕೌಲವ 01–38<br>**ಶ್ರಾದ್ಧ–ಪಂಚಮೀ** | **9**<br>**ಷಷ್ಠೀ 38–31**<br>ವಿಶಾಖಾ 21–24<br>ವ್ಯಾಘಾತ 00–50<br>ಗರಜ 06–05<br>**ಶ್ರಾದ್ಧ–ಷಷ್ಠೀ** | **10**<br>**ಸಪ್ತಮೀ 43–48**<br>ಅನುರಾಧಾ 27–49<br>ಹರ್ಷಣ 02–01<br>ಭದ್ರ 11–09<br>**ಶ್ರಾದ್ಧ–ಸಪ್ತಮೀ** | **11**<br>**ಅಷ್ಟಮೀ 49–07**<br>ಜ್ಯೇಷ್ಠಾ 34–23<br>ವಜ್ರ 03–28<br>ಬಾಲವ 16–28<br>**ಶ್ರಾದ್ಧ–ಅಷ್ಟಮೀ** | **12**<br>**ನವಮೀ 53–59**<br>ಮೂಲಾ 40–38<br>ಸಿದ್ಧಿ 04–50<br>ತೈತಿಲ 21–35<br>**ಶ್ರಾದ್ಧ–ನವಮೀ** | **13**<br>**ದಶಮೀ 58–07**<br>ಪೂ.ಷಾ 46–14<br>ವ್ಯತೀಪಾತ 05–50<br>ವಣಿಜ 26–05<br>**ಶ್ರಾದ್ಧ–ದಶಮೀ** | **14**<br>**ಏಕಾದಶೀ 60–00**<br>ಉ.ಷಾ 50–53<br>ವರಿ 06–13<br>ಬವ 29–42<br>**ಶ್ರಾದ್ಧ–ಏಕಾದಶೀ** |
| **15**<br>**ಏಕಾದಶೀ 01–14**<br>ಶ್ರವಣಾ 54–24<br>ಪರಿಘ 05–48<br>ಬಾಲವ 01–04<br>**ಶ್ರಾದ್ಧಾಭಾವ** | **16**<br>**ದ್ವಾದಶೀ 03–08**<br>ಧನಿಷ್ಠಾ 56–41<br>ಶಿವ 04–27<br>ತೈತಿಲ 03–08<br>**ಶ್ರಾದ್ಧ–ದ್ವಾದ/ತ್ರಯೋ** | **17**<br>**ತ್ರಯೋ 03–43**<br>ಶತಭಿಷಾ 57–43<br>ಸಿದ್ಧ 02–07 ಸಾಧ್ಯ 58–47<br>ವಣಿಜ 03–43<br>**ಶ್ರಾದ್ಧ–ಚತುರ್ದಶಿ** | **18**<br>**ಚತುರ್ದಶಿ 03–02**<br>ಪೂ.ಭಾ 57–33<br>ಶುಭ 54–29<br>ಶಕುನಿ 03–02<br>**ಶ್ರಾದ್ಧ–ಅಮಾವಾಸ್ಯೆ** | ● **19**<br>**ಅಮಾ 01–08 ಪಾಡ್ಯ 58–08**<br>ಉ.ಭಾ 56–20<br>ಶುಕ್ಲ 49–19<br>ನಾಗ 01–08<br>**ಶ್ರಾದ್ಧ–ಪಾಡ್ಯ** | | |

| | | | |
|---|---|---|---|
| ರವಿ ಶುಕ್ರ ಶನಿ | | | ಗುರು ಚಂದ್ರ |
| ಬುಧ ಕುಜ ರಾಹು | | | |
| | | | ಕೇತು |
| | | | |

18. ಪಯೋವ್ರತಾರಂಭ, ಚಂದ್ರದರ್ಶನ. ದರ್ಶೇಷ್ಟಿ.

**19. ಶ್ರೀ ಗುರುಸಾರ್ವಭೌಮರ ಪಟ್ಟಾಭಿಷೇಕವಾದ ದಿನ.**

**24. ಶ್ರೀ ಗುರುಸಾರ್ವಭೌಮರ ವರ್ಧಂತೀ (ಜನ್ಮದಿನೋತ್ಸವ).**

**27. ಸರ್ವೇಷಾಮೇಕಾದಶೀ (ಆಮಲಕೀ).**

28 ಪಾರಣೆ.

01. ಪಯೋವ್ರತಸಮಾಪ್ತಿ. ಭಾನುಪ್ರದೋಷ.

**02.** ಹೋಳಿಕಾ ಕಾಮದಹನ.

03. ಹೋಳಿಹುಣ್ಣಿಮೆ, ಕರಿದಿನ, ಧೂಲೀವಂದನ, ವಿಷ್ಣುಪಂಚಕೋಪವಾಸ, ಬ್ರಹ್ಮಸಾವರ್ಣೀಮನ್ವಾದಿ, ಕೇತುಗ್ರಸ್ತ ಗ್ರಸ್ತೋದಯ ಖಗ್ರಾಸ ಚಂದ್ರಗ್ರಹಣ, **ಶ್ರೀ ಪರಶುರಾಮತೀರ್ಥರ ಆರಾಧನೆ (ಶ್ರೀರಂಗ), ಶ್ರೀ ಸುಜ್ಞಾನನಿಧಿತೀರ್ಥರ ಆರಾಧನೆ (ಮುಳಬಾಗಿಲು).**

04. ವಸಂತ ಪ್ರತಿಪತ್, ಚೂತಕುಸುಮಭಕ್ಷಣ, ಪೂರ್ಣಿಮಾಸೀಷ್ಟಿ.

**05. ಶ್ರೀ ವಿಜಯನಿಧಿತೀರ್ಥರ ಆರಾಧನೆ (ಮುಳಬಾಗಿಲು)**

**06. ಶ್ರೀ ವಾದಿರಾಜತೀರ್ಥರ ಆರಾಧನೆ.**

**07. ಶ್ರೀ ವ್ಯಾಸರಾಜರ ಆರಾಧನೆ.**

**10.** ಪೂರ್ವೇದ್ಯುಃ ಶ್ರಾದ್ಧ, **ಶ್ರೀ ಉದ್ದಂಡ ರಾಮಚಂದ್ರತೀರ್ಥರ ಆರಾಧನೆ (ಪೆನುಕೊಂಡ)**

**11.** ಅಷ್ಟಕಾಶ್ರಾದ್ಧ, ಕಾಲಾಷ್ಟಮೀ, **ಶ್ರೀ ಸುಧಿನಿಧಿತೀರ್ಥರ ಆರಾಧನೆ (ಪಳ್ಳಿಪಾಳ್ಯ).**

12. ಅನ್ವಷ್ಟಕಶ್ರಾದ್ಧ.

**15. ಸರ್ವೇಷಾಮೇಕಾದಶೀ (ಪಾಪವಿಮೋಚನೀ)** ಮೀನಸಂಕ್ರಮಣ.

16. ಪಾರಣೆ. ಸೋಮ ಪ್ರದೋಷ, ಮಾಸಶಿವರಾತ್ರಿ.

18. ದರ್ಶ, ಪಿಂಡಸಹಿತ ಪಿತೃ ಶ್ರಾದ್ಧ.

**19. ಚಾಂದ್ರಮಾನ ಯುಗಾದಿ, ಪರಾಭವ ಸಂವತ್ಸರ** ಪ್ರಾರಂಭ, ಮನ್ವಾದಿ, ವಿಷ್ಣುಪಂಚಕೋಪವಾಸವಿಲ್ಲ.

## ಶ್ರೀ ವಿಶ್ವಾವಸುನಾಮ ಸಂವತ್ಸರದ ರಾಶಿಭವಿಷ್ಯ

**ಮೇಷರಾಶಿ :–** ಈ ವರ್ಷ ಶನಿಯು, 2–3 ಮನೆಯಲ್ಲಿ ಸಂಚರಿಸುವ ಗುರು 5ನೇ ಮನೆಯಲ್ಲಿ ಸಂಚರಿಸುವನು. ಕೇತು ಅನಿಷ್ಟ ಫಲ ನೀಡುವನು. ಎಪ್ರಿಲ್‌ನಲ್ಲಿ ಆರ್ಥಿಕ ನಷ್ಟ, ಕೆಲಸ ಕಾರ್ಯಗಳಲ್ಲಿ ವಿಘ್ನ, ಮೇನಲ್ಲಿ ಬಂಧು–ಬಾಂಧವರಲ್ಲಿ ವಿರಸ, ಸಾಂಸಾರಿಕ ತಾಪತ್ರಯ, ಶತ್ರುಕಾಟ, ಧನಹಾನಿ, ಮನಃಕ್ಲೇಶಗಳು, ವಾಹನಗಳಿಂದ ಅಪಘಾತ ಭಯವಿರುವುದು. ಜೂನ್‌ನಲ್ಲಿ ಕೆಲಸ ಕಾರ್ಯಗಳಿಗೆ ಅಡಚಣೆ, ಕುಟುಂಬದಲ್ಲಿ ವಿರಸ, ಮಿತ್ರರಿಂದ ಹಾನಿ, ಗೃಹ ತಾಪತ್ರಯ, ಜುಲೈ ತಿಂಗಳ ಆರಂಭದಲ್ಲಿ ಕೆಲಸ ಕಾರ್ಯಗಳು ಸಿದ್ಧಿಸುವುದು. ಬಂಧು ಸಹಾಯ, ಧನಲಾಭ, ಮಿತ್ರ ಸಹಾಯ ಮುಂತಾದ ಶುಭ ಫಲ. ವಾಹನಗಳಿಂದ ಜಾಗ್ರತೆ. ಆಗಸ್ಟ್‌ನಲ್ಲಿ ಆರೋಗ್ಯ ಹಾನಿ. 12ನೇ ಮನೆಯಲ್ಲಿ ಶನಿ ಇರುವುದರಿಂದ ದೃಷ್ಟಿದೋಷ ಹಾಗೂ 5ರಲ್ಲಿ ಕೇತು–ಕುಜರಿಂದ ಜಠರಕ್ಕೆ ಸಂಬಂಧಿಸಿದ ರೋಗಬಾಧೆ. ಸಪ್ಟೆಂಬರ್‌ನಲ್ಲಿ ಧನಾಭಿವೃದ್ಧಿ ಇದ್ದರೂ ಆರೋಗ್ಯದ ಕಡೆ ಗಮನ ಅಗತ್ಯ, ಉದ್ಯೋಗ ಕ್ಷೇತ್ರದಲ್ಲಿ ಅಡಚಣೆ. ಕೆಲಸಗಾರರಿಂದತೊಂದರೆ, ಆಯ–ವ್ಯಯಗಳಲ್ಲಿ ವ್ಯತ್ಯಾಸ. ಅಕ್ಟೋಬರ್‌ನ ಆರಂಭದಲ್ಲಿ ಅನಾರೋಗ್ಯವಿದ್ದರೂ ಕೆಲಸ ಕಾರ್ಯಗಳು ಸಿದ್ಧಿಸುವುದು, ಧನಾಭಿವೃದ್ಧಿಯಾಗುವುದು. ನವಂಬರ್‌ನಲ್ಲಿ ಅನಾರೋಗ್ಯ, ಸಾಂಸಾರಿಕ ತಾಪತ್ರಯಗಳು, ಧನಹಾನಿ, ಬಂಧುವಿರಸ, ಅಪಘಾತ ಭಯ ಮುಂತಾದ ಅನಿಷ್ಟ ಫಲಗಳಿರುವುದು. ಡಿಸೆಂಬರ್‌ನಲ್ಲಿ ಕೆಲಸ ಕಾರ್ಯಗಳು ನಿಧಾನವಾಗಿ ಸಿದ್ಧಿಸಿದರೂ ಖರ್ಚು ವೆಚ್ಚಗಳು ಅಧಿಕ. ಆದರೂ ಭಾಗ್ಯಾಭಿವೃದ್ಧಿಯಾಗುವುದು. ಜನವರಿಯಲ್ಲಿ ಉದ್ಯೋಗ ಸ್ಥಿರತೆ, ಧನಾಭಿವೃದ್ಧಿ, ಆರೋಗ್ಯ ವೃದ್ಧಿ ಮುಂತಾದ ಶುಭಫಲ. ಫೆಬ್ರವರಿಯಲ್ಲಿ ಕೆಲಸ ಕಾರ್ಯಗಳಲ್ಲಿ ಸಿದ್ಧಿ. ಧನಲಾಭ, ಮಿತ್ರಲಾಭ.

**ವೃಷಭರಾಶಿ :–** ಈ ವರ್ಷ ದೈವಾನುಕೂಲ ಉತ್ತಮವಿದ್ದು, 11ನೇ ಮನೆಯಲ್ಲಿ ಶನಿ, ದ್ವಿತೀಯ ಸಂಚಾರದ ಗುರು, ಲಾಭಸ್ಥಾನದಲ್ಲಿ ರಾಹು, ಪಂಚಮ ಚತುರ್ಥದಲ್ಲಿ ಕೇತು ಇರುವುದರಿಂದ ಮಿಶ್ರಫಲದಾಯಕವು. ಎಪ್ರಿಲ್‌ನಲ್ಲಿ ಜನ್ಮದ ಗುರುವಿನಿಂದ ಆರೋಗ್ಯದ ಕಡೆಗೆ ಗಮನ ಕೊಡಿ. ಧನಾಭಿವೃದ್ಧಿ, ಕಾರ್ಯಸಿದ್ಧಿ, ಶತ್ರುನಾಶ ಮುಂತಾದ ಶುಭಫಲವಿದೆ. ಮೇನಲ್ಲಿ ಕೆಲಸಕಾರ್ಯಗಳು ಸಿದ್ಧಿಸುವುದು. ವ್ಯಾಪಾರ ವ್ಯವಹಾರಗಳಲ್ಲಿ ಅಭಿವೃದ್ಧಿ, ಧನಾರ್ಜನೆಯು ಉತ್ತಮವಿರುವುದು. ಆರೋಗ್ಯ ಸಿದ್ಧಿಯಿರುವುದು, ಬಂಧುಮಿತ್ರರ ಸಹಾಯ ಲಭಿಸುವುದು. ಜೂನ್‌ನಲ್ಲಿ ಕಾರ್ಯ ಸಿದ್ಧಿ. ಧನವೃದ್ಧಿ ಇರುವುದಾದರೂ ಸಾಂಸಾರಿಕ ತಾಪತ್ರಯಗಳು, ಬಂಧುಮಿತ್ರರೊಂದಿಗೆ ವಿರಸ, ಸ್ಥಾನಪಲ್ಲಟ, ಅನಾರೋಗ್ಯ, ಅಗ್ನಿಭಯ ಮುಂತಾದ ಫಲಗಳಿವೆ. ಜುಲೈನಲ್ಲಿ ಆರೋಗ್ಯ ಸುಧಾರಿಸಿ, ಧನಾರ್ಜನೆ ಉತ್ತಮವಿರುವುದು. ಅರ್ಥಲಾಭ, ಗೃಹಸೌಖ್ಯ, ಕಾರ್ಯಸಫಲತೆಯಿರುವುದು. ಆಗಸ್ಟ್‌ನಲ್ಲಿ ಭೂ–ಖನಿಜ ವ್ಯವಹಾರಗಳು ಸಿದ್ಧಿಸಿ ಧನವೃದ್ಧಿಯಿರುವುದು. ಅನಾರೋಗ್ಯ, ವಾಹನ ಅಪಘಾತ ಭಯ ಉಂಟಾಗಬಹುದು. ಸೆಪ್ಟೆಂಬರ್ ಆರಂಭದಲ್ಲಿ ಮಿಶ್ರಫಲ, ತಾಪತ್ರಯಗಳು ವೃದ್ಧಿಸಿ, ಸುಖಹಾನಿ, ಮನೋದುಃಖ, ಸಾಂಸಾರಿಕ ವಿರಸಗಳು ತಲೆದೋರಬಹುದು. ಅಕ್ಟೋಬರನಲ್ಲಿ ಆರೋಗ್ಯ ಸುಧಾರಣೆ, ಶತ್ರುನಾಶ, ಧೈರ್ಯವೃದ್ಧಿ, ಸುಖವೃದ್ಧಿ, ಬಂಧು ಸಹಾಯವಿರುವುದು. ನವೆಂಬರನಲ್ಲಿ ಸಾಂಸಾರಿಕ ಸುಖ, ಕಾರ್ಯಸಿದ್ಧಿ, ಧನವೃದ್ಧಿ ಮುಂತಾದ ಶುಭಫಲವಿದೆ. ಡಿಸೆಂಬರಲ್ಲಿ ಅನಾರೋಗ್ಯ, ಪ್ರಯಾಣದಲ್ಲಿ ಆಯಾಸ, ಸಂಸಾರದಲ್ಲಿ ವಿರಸ, ಕಾರ್ಯವಿಘ್ನ, ಧನಹಾನಿ ಮುಂತಾದ ಫಲವಿರುವುದು. ಜನವರಿಯಲ್ಲಿ ಆರೋಗ್ಯ ವೃದ್ಧಿ. ಉದ್ಯೋಗಕ್ಷೇತ್ರದಲ್ಲಿ ಅಭಿವೃದ್ಧಿ, ಧನವೃದ್ಧಿ ಮುಂತಾದ ಶುಭಫಲವಿರುವುದು. ಫೆಬ್ರುವರಿಯಲ್ಲಿ ಕಾರ್ಯಸಿದ್ಧಿ, ಪದೋನ್ನತಿ, ಧನವೃದ್ಧಿಯಿರುವುದಾದರೂ ಆರೋಗ್ಯದ ಕಡೆಗೆ ಗಮನ ಅಗತ್ಯ. ಮಾರ್ಚ್‌ನಲ್ಲಿ ಸಕಲ ಕೆಲಸಕಾರ್ಯಗಳು

ಸಿದ್ಧಿಸುವುದು. ಧನಾರ್ಜನೆ ಉತ್ತಮವಿರುವುದು. ಈ ವರ್ಷ ವಿಷ್ಣು ಗಣಪತಿ ದೇವರ ಅನುಗ್ರಹದಿಂದ ಉತ್ತಮ ಫಲ ಪಡೆಯಬಹುದು.

**ಮಿಥುನರಾಶಿ :–** ಈ ವರ್ಷ ಶನಿಯು 10ನೇ ಮನೆಯಲ್ಲಿ ಸಂಚರಿಸುತ್ತಿರುವುದರಿಂದ ಮಿಶ್ರಫಲದಾಯಕನು, ಗುರು ಜನ್ಮರಾಶಿಯಲ್ಲಿ ಸಂಚರಿಸುತ್ತಿರುವುದರಿಂದ ಮಧ್ಯಮ ಫಲದಾಯಕವಾಗುವನು. ರಾಹುವು ಪ್ರತಿಕೂಲ ಫಲದಾಯಕನು, ಎಪ್ರಿಲ್ ತಿಂಗಳಿನಲ್ಲಿ ಕಾರ್ಯಸಿದ್ಧಿ, ಧನಾಭಿವೃದ್ಧಿ, ಸ್ಥಾನಪ್ರಾಪ್ತಿ ಇರುವುದಾದರೂ ಆರೋಗ್ಯದ ಕಡೆಗೆ ಗಮನ ಅಗತ್ಯ. ಮೇ ತಿಂಗಳಿನಲ್ಲಿ ಸ್ಥಾನಮಾನ ಗೌರವಾದಿಗಳಿಗೆ ಚ್ಯುತಿಬಂದು ದುಃಖ, ಕಾರ್ಯಹಾನಿ, ಬಂಧುವಿರಸ ಮುಂತಾದ ಫಲಗಳಿರುವುದು. ಜೂನ್‌ನಲ್ಲಿ ವ್ಯಾಪಾರ ವ್ಯವಹಾರಗಳು ಸಿದ್ಧಿಸಿ ಧನವೃದ್ಧಿ, ಮಿತ್ರಸಹಾಯ, ಆರೋಗ್ಯದಲ್ಲಿ ಸುಧಾರಣೆ ಮುಂತಾದ ಶುಭಫಲವಿರುವುದು, ಜುಲೈನಲ್ಲಿ ವಾಹನ, ಭೂಮಿ, ಗೃಹ ವ್ಯವಹಾರದಲ್ಲಿ ಧನಹಾನಿ, ಶತ್ರುಕಾಟ, ಆರೋಗ್ಯ ಹಾನಿ. ಆಗಸ್ಟ್‌ನಲ್ಲಿ ಪರಿಸ್ಥಿತಿ ಸುಧಾರಿಸುವುದು. ಆರೋಗ್ಯವೃದ್ಧಿ, ಕಾರ್ಯಸಿದ್ಧಿ, ಧನವೃದ್ಧಿ ಬಂಧುಜನ ಸಹಕಾರವಿರುವುದು. ಸೆಪ್ಟೆಂಬರನಲ್ಲಿ ಬಂಧುವಿರಸ ಗೃಹತಾಪತ್ರಯಗಳು, ಅಧೀನ ಕೆಲಸಗಾರರಲ್ಲಿ ಅಸಮಧಾನ, ಶತ್ರುಕಾಟ ಅಪವಾದಾದಿಗಳು ಸಂಭವ. ಅಕ್ಟೋಬರ್‌ನಲ್ಲಿ ಮನಃಕ್ಲೇಶ, ಕಾರ್ಯಹಾನಿ, ಧನಹಾನಿ, ಅನಾರೋಗ್ಯ, ಮಕ್ಕಳ ಚಿಂತೆ ಇರುವುದು. ನವೆಂಬರಲ್ಲಿ ಪರಿಸ್ಥಿತಿ ಸುಧಾರಿಸುವುದು. ಕಾರ್ಯಸಿದ್ಧಿ ಧನವೃದ್ಧಿ ಶತ್ರುನಾಶವಿರುವುದು. ಡಿಸೆಂಬರಲ್ಲಿ ಕ್ಲೇಶಪರಿಹಾರ, ಶುಭಮಂಗಲ ಕಾರ್ಯಗಳು ಸಂಭವನೀಯವು. ದಾಂಪತ್ಯಸುಖ ಧನವೃದ್ಧಿ ಮುಂತಾದ ಫಲಗಳಿರುವುದು. ಜನವರಿಯಲ್ಲಿ ಅನಾರೋಗ್ಯ, ಸಾಂಸಾರಿಕ ಸಮಸ್ಯೆಗಳು, ಧನಹಾನಿ, ಮಾನಸಿಕ ದೈಹಿಕ ಆಪತ್ತುಗಳು ಸಂಭವ. ಫೆಬ್ರುವರಿಯ ಆರಂಭದಲ್ಲಿ ವಿಪದಾಪತ್ತುಗಳು ಧನಹಾನಿ, ಕೌಟುಂಬಿಕ ಕಲಹ, ವಿರಸಗಳಿದ್ದು, ಮುಂದೆ ಸಮಸ್ಯೆಗಳಿಗೆ ಪರಿಹಾರ ಸಿಗಬಹುದಾಗಿದೆ. ಮಾರ್ಚ್‌ನಲ್ಲಿ ಪರಿಸ್ಥಿತಿ ಸ್ವಲ್ಪಮಟ್ಟಿಗೆ ಸುಧಾರಿಸಿ ಕೆಲಸ ಕಾರ್ಯಗಳು ಸಿದ್ಧಿಸಿ ಧನಾರ್ಜನೆ ವೃದ್ಧಿಸುವುದು.

**ಕರ್ಕರಾಶಿ :–** ಈ ವರ್ಷ ನಿಮಗೆ ದೈವಾನುಗ್ರಹವಿಲ್ಲ. ನವಮಸ್ಥಾನದಲ್ಲಿ ಸಂಚರಿಸುವ ಸಪ್ತಮ ಅಷ್ಟಮಾಧಿಪತಿಯಾದ ಶನಿ, ಅಷ್ಟಮ ದ್ವಿತೀಯ ಸ್ಥಾನದಲ್ಲಿ ಸಂಚರಿಸುವ ರಾಹು ಕೇತುಗಳು, ದ್ವಾದಶ ಜನ್ಮರಾಶಿಯಲ್ಲಿ ಸಂಚರಿಸುವ ಗುರು ಅಶುಭಫಲದಾಯಕರು. ಎಪ್ರಿಲ್‌ನ ಆರಂಭದಲ್ಲಿ ಕಾರ್ಯನಾಶ, ಧನಹಾನಿ, ಉದ್ಯೋಗ ಕ್ಷೇತ್ರದಲ್ಲಿ ಸ್ವಜನವಿರೋಧ, ತಿಂಗಳ ಕೊನೆಯಲ್ಲಿ ಕಾರ್ಯಸಿದ್ಧಿ ಧನವೃದ್ಧಿ ಆರೋಗ್ಯವೃದ್ಧಿ ಇರುವುದು. ಮೇನಲ್ಲಿ ವ್ಯವಹಾರದಲ್ಲಿ ಬರುವ ಸಮಸ್ಯೆಗಳ ಪರಿಹಾರ, ಕಾರ್ಯಸಿದ್ಧಿ, ಧನವೃದ್ಧಿ, ಶತ್ರುನಾಶ ಮುಂತಾದ ಶುಭಫಲವಿರುವುದು. ಜೂನ್‌ನಲ್ಲಿ ಕೆಲಸಕಾರ್ಯಗಳು ಸಿದ್ಧಿಸುವುವು. ಹೊಸ ಯೋಜನೆಗಳ ಅನುಷ್ಠಾನ, ಬಂಧುಜನ ಸಹಾಯ, ಪದೋನ್ನತಿ ಮುಂತಾದ ಶುಭಫಲವಿರುವುದು. ಜುಲೈನಲ್ಲಿ ಮಿಶ್ರಫಲ ಅನುಭವಕ್ಕೆ ಬರುವುದು. ಆರಂಭದಲ್ಲಿ ಧನಹಾನಿ, ಸ್ಥಾನಪಲ್ಲಟ, ಕುಟುಂಬ ವರ್ಗದವರಿಂದ ವಿರೋಧ. ಆಗಸ್ಟ್‌ನಲ್ಲಿ ಪರಿಸ್ಥಿತಿ ಸುಧಾರಿಸಿ, ಸ್ಥಾನಮಾನ ಗೌರವ ಪ್ರಾಪ್ತಿ, ಕಾರ್ಯಸಿದ್ಧಿ, ಧನವೃದ್ಧಿ ಇರುವುದು. ಸಪ್ಟೆಂಬರ್‌ನಲ್ಲಿ ದೈಹಿಕ ಆಪತ್ತುಗಳು, ಅನಾರೋಗ್ಯ, ಕಾರ್ಯಕ್ಷೇತ್ರದಲ್ಲಿ ವಿಘ್ನ, ಸಾಂಸಾರಿಕ ತಾಪತ್ರಯಗಳಿಗೆ ಅವಕಾಶವಿರುವುದು. ಅಕ್ಟೋಬರ್‌ನಲ್ಲಿ ಸಾಂಸಾರಿಕ ತಾಪತ್ರಯಗಳು ಕಡಿಮೆಯಾಗುವುದು. ಆರೋಗ್ಯ ಸುಧಾರಣೆ, ಕಾರ್ಯಸಿದ್ಧಿ, ಧನವೃದ್ಧಿ ಇರುವುದು. ನವೆಂಬರ್‌ನಲ್ಲಿ ಮಿಶ್ರಫಲದ ಅನುಭವ. ಉದರ ಮತ್ತು ರಕ್ತಸಂಬಂಧಿ ಅನಾರೋಗ್ಯ, ದುರ್ಜನ ಸಹವಾಸದಿಂದ ಹಾನಿ, ಸಾಂಸಾರಿಕ ತಾಪತ್ರಯಗಳು, ಸುಖಹಾನಿ, ವಿಘ್ನಗಳು ತಲೆದೋರುವುವು. ಡಿಸೆಂಬರ್‌ನಲ್ಲಿ ಮೇಲಿನ ಫಲಗಳು ಮುಂದುವರಿಯುವುವಾದರೂ ಕೆಲವೊಂದು ಶುಭಫಲಗಳು ಅನುಭವಕ್ಕೆ ಬರುವುದು. ಜನವರಿಯಲ್ಲಿ

ಆರೋಗ್ಯವೃದ್ಧಿ. ಕೆಲಸಕಾರ್ಯಗಳ ಸಿದ್ಧಿ, ವ್ಯಾಪಾರ–ವ್ಯವಹಾರಗಳಲ್ಲಿ ಅಭಿವೃದ್ಧಿ, ಪದೋನ್ನತಿ ಮುಂತಾದ ಶುಭಫಲವಿರುವುದು. ಫೆಬ್ರವರಿಯಲ್ಲಿ ದೈಹಿಕ–ಮಾನಸಿಕ ದುರ್ಬಲತೆಗಳಿಗೆ ಸಾಧ್ಯತೆಯಿರುವುದು. ಕಾರ್ಯಹಾನಿ, ಧನಹಾನಿ, ಶತ್ರುಕಾಟ ವಿರುವುದು. ಮಾರ್ಚ್‌ನಲ್ಲಿ ಮೇಲಿನ ಅಶುಭಫಲಗಳೇ ಮುಂದುವರಿಯುವುದು.

**ಸಿಂಹರಾಶಿ :–** ಈ ವರ್ಷ ದೈವಾನುಗ್ರಹವಿರುವುದು. ಗುರುವಿನ ದಶಮ ಏಕಾದಶ ಸಂಚಾರವು ಶುಭದಾಯಕ. ಅಷ್ಟಮ ಶನಿ, ಸಪ್ತಮ ರಾಹು, ಜನ್ಮಸ್ಥ ಕೇತು ಅಶುಭರು. ಎಪ್ರಿಲ್‌ನಲ್ಲಿ ಕೆಲಸ ಕಾರ್ಯಗಳು ಸಿದ್ಧಿಸುವುದು. ಧನವೃದ್ಧಿ ಆರೋಗ್ಯವೃದ್ಧಿ ಭಾಗ್ಯವೃದ್ಧಿಯಿರುವುದಾದರೂ ಕೆಲವೊಂದು ಸಮಸ್ಯೆಗಳು ಅಡಚಣೆಗಳು ಸಹಾ ಎದುರಾಗುವುದು. ಮೇನಲ್ಲಿ ಕಾರ್ಯಸಿದ್ಧಿ, ಪದೋನ್ನತಿ, ಧನಲಾಭ ಮುಂತಾದ ಶುಭಫಲವಿರುವುದು, ಶತ್ರುಕಾಟ, ಸಮಸ್ಯೆಗಳು ಬರುವವು. ಜೂನ್‌ನಲ್ಲಿ ಶುಭಫಲಗಳು ಅನುಭವಕ್ಕೆ ಬರುವುದಾದರೂ ಆರೋಗ್ಯದ ಕಡೆಗೆ ಗಮನ ಅಗತ್ಯ. ಮಿತ್ರಸಹಾಯ, ಧನಲಾಭ, ಕಾರ್ಯಸಿದ್ಧಿ ಇರುವುದು. ಜುಲೈನಲ್ಲಿ ಅನಾರೋಗ್ಯ, ಪ್ರಯಾಣದಲ್ಲಿ ಆಯಾಸ, ಅಪಘಾತ, ಅಗ್ನಿಭಯ, ಮನೋವ್ಯಸನ, ಧನಹಾನಿ, ಸರಕಾರಿ ಕೆಲಸಕಾರ್ಯಗಳಲ್ಲಿ ಅಡಚಣೆ. ಆಗಸ್ಟ್‌ನಲ್ಲಿ ಉಷ್ಣಸಂಬಂಧಿ ಅನಾರೋಗ್ಯ, ಉದ್ಯೋಗ ಕ್ಷೇತ್ರದಲ್ಲಿ ಕಿರುಕುಳ, ಸಾಂಸಾರಿಕ ತಾಪತ್ರಯಗಳುಂಟಾಗಬಹುದು. ಸೆಪ್ಟೆಂಬರ್‌ನಲ್ಲಿ ಕೆಲವೊಂದು ಸಮಸ್ಯೆಗಳು ಪರಿಹಾರವಾಗಿ ಉದ್ಯೋಗಕ್ಷೇತ್ರದಲ್ಲಿ ಪ್ರಗತಿ, ಧನವೃದ್ಧಿ, ಶತ್ರುನಾಶ ಮುಂತಾದ ಫಲಗಳಿರುವುದು. ಅಕ್ಟೋಬರ– ನವೆಂಬರ್‌ನಲ್ಲಿ ಮೇಲಿನ ಶುಭಫಲಗಳು ಅನುಭವಕ್ಕೆ ಬರುವುದು. ಡಿಸೆಂಬರ್‌ನಲ್ಲಿ ಆರೋಗ್ಯಹಾನಿ, ಧನಹಾನಿ, ಕಾರ್ಯಹಾನಿ, ಖರ್ಚುವೆಚ್ಚಗಳು ಹೆಚ್ಚುವುದು. ಉದ್ಯೋಗಕ್ಷೇತ್ರದಲ್ಲಿ ಅಡಚಣೆ, ಸಾಂಸಾರಿಕ ತಾಪತ್ರಯಗಳು ಎದುರಾಗುವುದು. ಜನವರಿಯಲ್ಲಿ ಶತ್ರುಭಯ, ಅನಾರೋಗ್ಯ, ವೃತ್ತಿ ಕ್ಷೇತ್ರದಲ್ಲಿ ಹಿನ್ನಡೆ, ಧನಹಾನಿ, ಅಪಘಾತ ಭಯ ಮುಂತಾದ ಫಲವಿರುವುದು. ಫೆಬ್ರವರಿಯಲ್ಲಿ ಆರೋಗ್ಯವೃದ್ಧಿ, ಕಾರ್ಯಸಿದ್ಧಿ, ಧನವೃದ್ಧಿ, ಸಾಂಸಾರಿಕ ಸಮಸ್ಯೆಗಳ ಉಪಶಮನ, ಶತ್ರುನಾಶ ಬಂಧುಸಹಕಾರ ಮುಂತಾದ ಫಲಗಳಿರುವುದು. ಮಾರ್ಚ್ ತಿಂಗಳಾರಂಭದಲ್ಲಿ ಶುಭಫಲಗಳು ಅನುಭವಕ್ಕೆ ಬರುವುದಾದರೂ ಅನಂತರ ಸಾಂಸಾರಿಕ ತಾಪತ್ರಯಗಳು ಎದುರಾಗಬಹುದಾಗಿದೆ. ಅನಾರೋಗ್ಯ ಅಪಘಾತ ಭಯ ಶತ್ರುಕಾಟ ಧನಹಾನಿ ಕಾರ್ಯಹಾನಿಗಳುಂಟಾಗಬಹುದು.

**ಕನ್ಯಾರಾಶಿ :–** ಈ ವರ್ಷ ಗುರುವು ಶುಭನು. ಶನಿಯು ಮಿಶ್ರಫಲದಾಯಕನು. 12 ಮನೆಯಲ್ಲಿ ಕೇತು 6 ಮನೆಯಲ್ಲಿ ರಾಹು ಸಾಮಾನ್ಯ ಫಲದಾಯಕರು. ಎಪ್ರಿಲ್‌ನಲ್ಲಿ ಉಷ್ಣಸಂಬಂಧಿ ಅನಾರೋಗ್ಯಗಳು ಬಾಧಿಸಬಹುದು. ಕಾರ್ಯಹಾನಿ, ಧನಹಾನಿ ಮುಂತಾದ ಅಶುಭ ಫಲಗಳಿವೆ. ಮೇನಲ್ಲಿ ಕೆಲಸಕಾರ್ಯಗಳಿಗೆ ವಿಘ್ನಗಳು, ಶತ್ರುಕಾಟ, ಮನೋ ವ್ಯಸನಗಳುಂಟಾಗಬಹುದು. ಜೂನ್‌ನಲ್ಲಿ ಕೆಲವೊಂದು ಸಮಸ್ಯೆಗಳು ಪರಿಹಾರವಾಗುವುದು. ಆರೋಗ್ಯದ ಸುಧಾರಣೆ, ಕಾರ್ಯಸಿದ್ಧಿ, ಧನವೃದ್ಧಿಯಿರುವುದು. ಜುಲೈನಲ್ಲಿ ಕೆಲಸ ಕಾರ್ಯಗಳು ಸಿದ್ಧಿಸಿ ಧನಾಭಿವೃದ್ಧಿಯಿರುವುದು. ಶತ್ರುಕಾಟ ಅನಾರೋಗ್ಯ ಬಾಧಿಸಬಹುದು. ಖರ್ಚುವೆಚ್ಚಗಳು ವೃದ್ಧಿಸುವುದು. ಆಗಸ್ಟ್‌ನಲ್ಲಿ ಕೆಲಸಕಾರ್ಯಗಳು ಸಿದ್ಧಿಸುವುದಾದರೂ ಅಡಚಣೆ, ಸಮಸ್ಯೆ, ಕಲಹಗಳು ಉಂಟಾಗಬಹುದು. ಸೆಪ್ಟೆಂಬರ್‌ನಲ್ಲಿ ದೈಹಿಕ, ಮಾನಸಿಕ ದುರ್ಬಲತೆಗಳು ಕಾಡಬಹುದು. ಧನಹಾನಿ, ಕಾರ್ಯಹಾನಿ, ಕಟಿಪ್ರದೇಶದಲ್ಲಿ ಅನಾರೋಗ್ಯ ಸಂಭವನೀಯ. ಅಕ್ಟೋಬರ್‌ನಲ್ಲಿ ಪರಿಸ್ಥಿತಿ ಸುಧಾರಿಸುವುದಾದರೂ ಆರ್ಥಿಕ ಅಡಚಣೆ, ಬಂಧುವಿರೋಧ, ಸಾಂಸಾರಿಕ ತಾಪತ್ರಯಗಳು ಕಾಣಿಸಬಹುದು.

ನವೆಂಬರ್‌ನಲ್ಲಿ ಅಗ್ನಿಭಯ, ಕಾರ್ಯಕ್ಷೇತ್ರದಲ್ಲಿ ವಿಘ್ನಗಳು, ಸಾಂಸಾರಿಕ ತಾಪತ್ರಯ, ಸ್ಥಾನಪಲ್ಲಟ, ಪ್ರಯಾಣದಲ್ಲಿ ಸುಖಹಾನಿ, ಕಲಹಗಳು ಸಂಭವಿಸುವುದು. ಡಿಸೆಂಬರ್ ತಿಂಗಳ ಆರಂಭದಲ್ಲಿ ಶುಭಫಲಗಳಿರುವುದು. ಕಾರ್ಯಸಿದ್ಧಿ, ಧನವೃದ್ಧಿಯಿರುವುದು. ಜನವರಿಯಲ್ಲಿ ಉದ್ಯೋಗಕ್ಷೇತ್ರ ಹಾನಿ ಧನನಾಶ, ಆರ್ಥಿಕ ಬಿಕ್ಕಟ್ಟುಗಳಿಂದ ನೆಮ್ಮದಿ ನಾಶ. ಫೆಬ್ರವರಿಯಲ್ಲಿ ರೋಗ್ಯದ ಕಡೆಗೆ ಗಮನ ಅಗತ್ಯ. ಕೆಲಸ ಕಾರ್ಯಗಳಲ್ಲಿ ಅಡಚಣೆ, ಶತ್ರುಕಾಟ, ಸಾಂಸಾರಿಕ ತಾಪತ್ರಯ. ಮಾರ್ಚ್‌ನಲ್ಲಿ ಆರೋಗ್ಯ ಸುಧಾರಣೆ, ಸಮಸ್ಯೆಗಳಿಗೆ ಪರಿಹಾರ ಸಿಗಬಹುದಾಗಿದೆ. ಬಂಧು ಸಹಕಾರ, ಧನಲಾಭ ಮುಂತಾದ ಶುಭಫಲವಿರುವುದು.

**ತುಲಾರಾಶಿ :–** ಈ ವರ್ಷ ಗುರುವು ಮಿಶ್ರಫಲದಾಯಕನು. ಶನಿ ರಾಹು–ಕೇತು ಇವರು ಮಿಶ್ರ ಫಲದಾಯಕರು. ಎಪ್ರಿಲ್‌ನಲ್ಲಿ ಅನಾರೋಗ್ಯ, ಕೆಲಸಕಾರ್ಯಗಳಿಗೆ ವಿಘ್ನ, ಆರ್ಥಿಕ ಅಡಚಣೆ, ವ್ಯವಹಾರಗಳಲ್ಲಿ ಹಿನ್ನಡೆ ಮುಂತಾದ ಫಲವಿರುವುದು. ಮೇನಲ್ಲಿ ಉಷ್ಣ ಸಂಬಂಧಿ ಅನಾರೋಗ್ಯ, ಸಾಂಸಾರಿಕ ತಾಪತ್ರಯಗಳು ವೃದ್ಧಿಸಬಹುದು. ಅಧಿಕ ಧನವ್ಯಯ, ಸಾಂಸಾರಿಕ ಕಲಹ ವಿರಸಗಳು ಉಂಟಾಗುವುದು. ಜೂನ್‌ನಲ್ಲಿ ಕೆಲಸಕಾರ್ಯಗಳಿಗೆ ವಿಘ್ನಗಳು, ಬಂಧುವಿಯೋಗ ಅಪಘಾತ ಭಯ ಮುಂತಾದ ಫಲಗಳಿರುವುದಾದರೂ ಕೆಲವೊಂದು ಶುಭಫಲಗಳು ಅನುಭವಕ್ಕೂ ಬರುವುದು. ಜುಲೈನಲ್ಲಿ ಕೆಲಸಕಾರ್ಯಗಳು ಸಿದ್ಧಿಸುವುದು. ಭಾಗ್ಯಾಭಿವೃದ್ಧಿಯಿರುವುದು. ಆಗಸ್ಟ್‌ನಲ್ಲಿ ಕಾರ್ಯಸಿದ್ಧಿ, ಪದೋನ್ನತಿ, ಕಚೇರಿ ಸರಕಾರದಿಂದ ಪ್ರಯೋಜನವಾಗಲಿದೆ. ಧನಾಭಿವೃದ್ಧಿ ಇರುವುದು. ಸೆಪ್ಟೆಂಬರ್‌ನಲ್ಲಿ ಆರೋಗ್ಯದ ಕಡೆಗೆ ಗಮನ ಅಗತ್ಯ. ಲೋಹ, ಶಸ್ತ್ರಾಸ್ತ್ರ, ವಾಹನಗಳಿಂದ ಹಾನಿ ಸಂಭವಿಸಬಹುದಾಗಿದೆ. ಅಗ್ನಿಭಯ, ಕಣ್ಣಿನ ತೊಂದರೆ ಸಂಭವ. ಅಕ್ಟೋಬರ್‌ನಲ್ಲಿ ಉದ್ಯೋಗ ಕ್ಷೇತ್ರಗಳಲ್ಲಿ ಸಾಂಸಾರಿಕವಾಗಿಯೂ ಹಲವು ಸಮಸ್ಯೆಗಳು ಎದುರಾಗಬಹುದಾಗಿದೆ. ಶಾರೀರಿಕ ಅಸ್ವಸ್ಥತೆ ಸಂಭವಿಸಬಹುದು. ನವೆಂಬರ್ ನಲ್ಲಿ ಕಾರ್ಯಹಾನಿ, ಧನಹಾನಿ, ಬಂಧುವಿರೋಧ, ಸ್ಥಾನಪಲ್ಲಟ, ಉದ್ಯೋಗ ಬದಲಾವಣೆ ಮುಂತಾದ ಫಲಗಳಿರುವುದು. ಡಿಸೆಂಬರ್‌ನಲ್ಲಿ ವ್ಯವಹಾರಗಳು ಸಿದ್ಧಿಸುವುದರ ಜೊತೆಗೆ ಧನಾಭಿವೃದ್ಧಿಯಿರುವುದು. ಮಿತ್ರಸಹಾಯ ಆರೋಗ್ಯವೃದ್ಧಿ ಸಹಾ ಇರುವುದು. ಜನವರಿಯಲ್ಲಿ ಭೂ ಖನಿಜ ವ್ಯವಹಾರಗಳಿಂದ ಲಾಭ. ಗೃಹ ವಾಹನ ಸೌಕರ್ಯಾದಿಗಳನ್ನು ಹೊಂದುವ ಯೋಗವಿರುವುದು. ಬಂಧುಸಹಕಾರವಿರುವುದು. ಫೆಬ್ರುವರಿಯಲ್ಲಿ ಕಾರ್ಯಸಿದ್ಧಿ, ಧನವೃದ್ಧಿ. ಮಿತ್ರಜನರ ಸಹಕಾರಗಳು ಲಭಿಸುವುದು. ಮಾರ್ಚ್ ನಲ್ಲಿ ಆರೋಗ್ಯದ ಕಡೆಗೆ ಗಮನ ಅಗತ್ಯ. ಸಾಂಸಾರಿಕ ತಾಪತ್ರಯಗಳು ಕಾರ್ಯಹಾನಿ ಧನಹಾನಿ, ಅಧೀನ ಜನರಿಂದ ಹಾನಿಯಿರುವುದು.

**ವೃಶ್ಚಿಕರಾಶಿ :–** ಈ ವರ್ಷ ಗುರುವು ಶುಭಫಲದಾಯಕನು. ಆದರೆ 8ಮನೆಯಲ್ಲಿ ಗುರುವಿನ ಸಂಚಾರ ಕಾಲದಲ್ಲಿ ದೈವಬಲವಿರುವುದಿಲ್ಲ. 4 ರಲ್ಲಿ ರಾಹು, 5 ರಲ್ಲಿ ಶನಿಯು ಆಶುಭ ಫಲದಾಯಕರು. ಎಪ್ರಿಲ್‌ನಲ್ಲಿ ಧೈರ್ಯವೃದ್ಧಿ, ಆರೋಗ್ಯದ ಸುಧಾರಣೆ, ಗೃಹಲಾಭ ಭೂಲಾಭ, ಬಂಧುಗಳಿಂದ ಸಹಕಾರ, ಧೈರ್ಯವೃದ್ಧಿ ಮುಂತಾದ ಶುಭಫಲವಿರುವುದು. ಮೇ ತಿಂಗಳ ಆರಂಭದಲ್ಲಿ ಮೇಲಿನ ಶುಭಫಲಗಳು ಅನುಭವಕ್ಕೆ ಬರುವುದಾದರೂ ಗುರುವಿನ ಮಿಥುನ ಸಂಚಾರ ಕಾಲದಲ್ಲಿ ಸಾಂಸಾರಿಕ ತಾಪತ್ರಯ, ಅನಾರೋಗ್ಯ, ವ್ಯವಹಾರಗಳಲ್ಲಿ ಅಡಚಣೆಯಿರುವುದು. ಜೂನ್‌ನಲ್ಲಿ ಉಷ್ಣಸಂಬಂಧಿ ಅನಾರೋಗ್ಯ, ಕಾರ್ಯಕ್ಷೇತ್ರದಲ್ಲಿ ಹಿನ್ನಡೆ, ಧನಹಾನಿ ಮುಂತಾದ ಫಲವಿರುವುದು. ಜುಲೈನಲ್ಲಿ ಕಾರ್ಯಸಿದ್ಧಿ, ಸಾಂಸಾರಿಕ ಸುಖ, ಆರೋಗ್ಯವೃದ್ಧಿ, ಪದೋನ್ನತಿ ಇರುವುದು. ಆಗಸ್ಟ್‌ನಲ್ಲಿ ಗೃಹಸೌಖ್ಯ, ಕಾರ್ಯಸಿದ್ಧಿ, ಧನವೃದ್ಧಿ, ಸ್ಥಾನಮಾನ ಗೌರವಾದಿಗಳನ್ನು

ಹೊಂದಬಹುದಾಗಿದೆ. ಸೆಪ್ಟೆಂಬರ್‌ನಲ್ಲಿ ವ್ಯಾಪಾರ ವ್ಯವಹಾರಗಳ ಅಭಿವೃದ್ಧಿ, ಧನಲಾಭ, ಕಾರ್ಯಸಿದ್ಧಿ ಇರುವುದು. ಅಕ್ಟೋಬರ್‌ನಲ್ಲಿ ಕಾರ್ಯಹಾನಿ, ಧನಹಾನಿ, ಅನಾರೋಗ್ಯ, ಸ್ಥಾನಚ್ಯುತಿ ಮುಂತಾದ ಪ್ರತಿಕೂಲಫಲಗಳಿವೆ. ನವೆಂಬರನಲ್ಲಿ ಉಷ್ಣಸಂಬಂಧಿ ಅನಾರೋಗ್ಯ, ಅಗ್ನಿಭಯ ಕಾರ್ಯಕ್ಷೇತ್ರಗಳಲ್ಲಿ ಅಡಚಣೆಗಳು ಉಂಟಾಗಬಹುದಾದರೂ ದೈವಾನುಗ್ರಹದಿಂದ ಪರಿಸ್ಥಿತಿ ಸುಧಾರಿಸುವುದು. ಡಿಸೆಂಬರ್‌ನಲ್ಲಿ ಉದ್ಯೋಗ ಕ್ಷೇತ್ರದಲ್ಲಿ ಹಾನಿ, ಧನಹಾನಿ, ಕುಟುಂಬ ವರ್ಗದಲ್ಲಿ ವಿರಸ, ಸುಖಹಾನಿ ಮುಂತಾದ ಅಶುಭ ಫಲಗಳಿರುವುದು. ಜನವರಿಯಲ್ಲಿ ಮೇಲಿನ ಅಶುಭ ಫಲಗಳು ಸುಧಾರಿಸುವುದು. ಕಾರ್ಯಸಿದ್ದಿ, ಧನವೃದ್ಧಿ, ಬಂಧುಮಿತ್ರ ಜನರ ಸಹಕಾರ ಪ್ರಾಪ್ತಿಯಾಗುವುದು. ಫೆಬ್ರವರಿಯಲ್ಲಿ ಗೃಹಸೌಖ್ಯ, ಧನಲಾಭ, ಪದೋನ್ನತಿ, ಶತ್ರುನಾಶ ಮುಂತಾದ ಫಲಗಳಿರುವುದಾದರೂ ಆರೋಗ್ಯದ ಕಡೆಗೆ ಗಮನ ಅಗತ್ಯ. ಮಾರ್ಚ್‌ನಲ್ಲಿ ಕೆಲಸ ಕಾರ್ಯಗಳಿಗೆ ವಿಘ್ನ, ದುರ್ಜನರ ಸಹವಾಸ, ಉಷ್ಣಸಂಬಂಧಿ ಅನಾರೋಗ್ಯ ಸಾಂಸಾರಿಕ ತಾಪತ್ರಯಗಳುಂಟಾಗಬಹುದು.

**ಧನಸ್ಸುರಾಶಿ** :- ಈ ವರ್ಷ ಗುರುವು ಅಶುಭಕರನಾಗಿದ್ದರೆ, 3 ರಲ್ಲಿ ರಾಹು ಮಿಶ್ರಫಲದಾಯಕನು. 4ರಲ್ಲಿ ಶನಿ ಹಾಗೂ 9ರಲ್ಲಿ ಕೇತು ಅಶುಭರು. ಎಪ್ರಿಲ್‌ನಲ್ಲಿ ಸಾಂಸಾರಿಕ ತಾಪತ್ರಯಗಳು, ಅನಾರೋಗ್ಯ, ಕಾರ್ಯವಿಘ್ನ, ಶತ್ರುಪೀಡೆ ಮುಂತಾದ ಅಶುಭ ಫಲವಿರುವುದಾದರೂ ಧನಾರ್ಜನೆ ಉತ್ತಮವಿರುವುದು. ಮೇ ನಲ್ಲಿ ಮೇಲಿನ ಅಶುಭ ಫಲಗಳು ತೊಲಗುವುದು. ಶುಭಶೋಭನಾದಿ ಕಾರ್ಯಕ್ರಮಗಳು ವೃದ್ಧಿಸುವುದು. ಬಂಧು ಸಹಕಾರ, ಧೈರ್ಯವೃದ್ಧಿ, ಶತ್ರುನಾಶ, ಕಾರ್ಯಸಿದ್ಧಿ ಇರುವುದು. ಜೂನ್ ಆರಂಭದಲ್ಲಿ ಶುಭಫಲಗಳು ಅನುಭವಕ್ಕೆ ಬರುವುದು. ಪಿತ್ತೋಷ್ಣ ಸಂಬಂಧಿ ಅನಾರೋಗ್ಯ ದೈಹಿಕ ಆಪತ್ತುಗಳುಂಟಾಗಬಹುದಾಗಿದೆ. ಜುಲೈ ತಿಂಗಳ ಆರಂಭದಲ್ಲಿ ಅಶುಭ ಫಲಗಳಿರುವುದಾದರೂ ಆರೋಗ್ಯ ಸುಧಾರಣೆ, ಕೆಲಸ ಕಾರ್ಯಗಳ ಸಾಫಲ್ಯತೆ, ಸಾಂಸಾರಿಕ ಸುಖವೃದ್ಧಿ ಮುಂತಾದ ಫಲಗಳಿವೆ. ಆಗಸ್ಟ್‌ನಲ್ಲಿ ಕೆಲಸಕಾರ್ಯಗಳು ಸಿದ್ದಿಸುವುದು, ಇತರರಿಂದ ಸಹಕಾರ, ಗೌರವ ಮನ್ನಣೆಗಳು ಪ್ರಾಪ್ತಿಯಾಗುವುದು, ಭೂಸಂಬಂಧಿ ವ್ಯವಹಾರವು ವೃದ್ಧಿಸುವುದು. ಧನವೃದ್ಧಿ ಇರುವುದು. ಸೆಪ್ಟಂಬರ್‌ನಲ್ಲಿ ಕಾರ್ಯಸಿದ್ಧಿ, ಧನವೃದ್ಧಿ, ಸ್ಥಾನಪ್ರಾಪ್ತಿ, ಪದೋನ್ನತಿ ಇರುವುದು. ಅಕ್ಟೋಬರ್‌ನಲ್ಲಿ ಕೆಲಸಕಾರ್ಯಗಳಲ್ಲಿ ಯಶಸ್ಸು, ಆರೋಗ್ಯವೃದ್ಧಿ, ಶತ್ರುನಾಶ, ಧನವೃದ್ಧಿ, ಬಂಧುಗಳ ಸಹಕಾರ ಮುಂತಾದ ಶುಭಫಲವಿರುವುದು. ನವೆಂಬರ್ ತಿಂಗಳ ಆರಂಭದಲ್ಲಿ ಮೇಲಿನ ಶುಭ ಫಲಗಳೆಲ್ಲ ಅನುಭವಕ್ಕೆ ಬರುವುದು. ಅನಂತರ ಅನಾರೋಗ್ಯ, ಕೆಲಸ ಕಾರ್ಯಗಳಿಗೆ ಅಡಚಣೆ, ಧನಹಾನಿ ಮುಂತಾದ ಫಲಗಳಿರುವುದು. ಡಿಸೆಂಬರ್‌ನ ಆರಂಭದಲ್ಲಿ ಧನಹಾನಿ, ಕಾರ್ಯಹಾನಿ, ಅನಾರೋಗ್ಯ ಮುಂತಾದ ಫಲಗಳಿವೆ. ಅನಂತರ ಕೆಲಸಕಾರ್ಯಗಳು ವಿಳಂಬವಾಗಿಯಾದರೂ ಸಿದ್ಧಿಸುವುದು. ಧನವೃದ್ಧಿ, ಆರೋಗ್ಯವೃದ್ಧಿ, ವ್ಯಾವಹಾರಿಕ ಜಯ ಮುಂತಾದ ಶುಭಫಲಗಳಿವೆ. ಜನವರಿ ಯಲ್ಲಿ ಆರೋಗ್ಯದಲ್ಲಿ ಸುಧಾರಣೆ, ಕಾರ್ಯಸಿದ್ಧಿ, ಧನವೃದ್ಧಿ, ಸ್ಥಾನಮಾನ ಗೌರವಾದಿಗಳ ಪ್ರಾಪ್ತಿ, ಪದೋನ್ನತಿ, ಶತ್ರುನಾಶ ಮುಂತಾದ ಫಲಗಳಿರುವುದು. ಫೆಬ್ರವರಿಯಲ್ಲಿ ಅನಾರೋಗ್ಯ ಶತ್ರುಕಾಟ, ಕಾರ್ಯಹಾನಿ, ಧನಹಾನಿ, ಮನೋಚಂಚಲತೆ, ಪ್ರಯಾಣದಲ್ಲಿ ದುಃಖ ಮುಂತಾದ ಫಲಗಳಿವೆ. ಮಾರ್ಚ್‌ನಲ್ಲಿ ಪರಿಸ್ಥಿತಿ ಸುಧಾರಿಸುವುದು. ಆರೋಗ್ಯವೃದ್ಧಿ ಧನವೃದ್ಧಿ ಶತ್ರುನಾಶ, ಸ್ಥಾನಪ್ರಾಪ್ತಿ ಮುಂತಾದ ಶುಭಫಲಗಳಿರುವುದು.

**ಮಕರರಾಶಿ** :- ಈ ವರ್ಷ ಶನಿಯು ಹಾಗೂ ಗುರುವು ಶುಭ ಫಲದಾಯಕನು. ರಾಹು-ಕೇತುಗಳು ಅನಿರೀಕ್ಷಿತ ಅಶುಭ ಫಲಗಳಿಗೆ ಕಾರಣರಾಗುವರು. ಎಪ್ರಿಲ್‌ನ ಆರಂಭದಲ್ಲಿ ಭ್ರಾತೃವರ್ಗದೊಂದಿಗೆ ವಿರಸ, ಕಾರ್ಯಸಿದ್ಧಿ, ಆರ್ಥಿಕಾಭಿವೃದ್ಧಿ ಇರುವುದು. ಮೇ ತಿಂಗಳ ಆರಂಭದಲ್ಲಿ

ಮೇಲಿನ ಶುಭಫಲಗಳಿರುವುದು. ಗೃಹ ಭೂ ವಾಹನಾದಿಗಳ ಲಾಭ, ಅನಂತರ ಕೆಲಸಕಾರ್ಯಗಳಿಗೆ ವಿಘ್ನ, ಸುಖಹಾನಿ, ಧನಹಾನಿ ಮುಂತಾದ ಫಲಗಳಿರುವುದು. ಜೂನ್‌ನಲ್ಲಿ ಮನೋವ್ಯಸನ, ಕೆಲಸ ಕಾರ್ಯಗಳಿಗೆ ವಿಘ್ನ, ಆರೋಗ್ಯ ಹಾನಿ, ಸುಖಹಾನಿ, ಧನನಷ್ಟ, ಖರ್ಚುವೆಚ್ಚಗಳು ಹೆಚ್ಚಾಗುವುದು. ಜುಲೈನಲ್ಲಿ ಸಾಂಸಾರಿಕ ತಾಪತ್ರಯಗಳು ಹೆಚ್ಚಾಗುವುದು. ಆರೋಗ್ಯದ ಕಡೆಗೆ ಗಮನ ಅಗತ್ಯ. ಕೆಲವೊಂದು ಶುಭಫಲಗಳು ಕೂಡ ಅನುಭವಕ್ಕೆ ಬರುವುದು. ಆಗಸ್ಟ್ ನಲ್ಲಿ ಆರೋಗ್ಯದ ಕಡೆ ಗಮನ ಅಗತ್ಯ. ಉದರ ಸಂಬಂಧಿ ಅನಾರೋಗ್ಯ ಸಾಧ್ಯತೆ ಇರುವುದು. ಹಾಗೆಯೇ ಪಿತ್ತೋಷ್ಣಪೀಡನೆ ಉಂಟಾಗಬಹುದಾಗಿದೆ. ಸೆಪ್ಟೆಂಬರನಲ್ಲಿ ಕೆಲವೊಂದು ಸಮಸ್ಯೆಗಳು ಪರಿಹಾರವಾಗಿ ಆರೋಗ್ಯವೃದ್ಧಿ, ಕೆಲಸಕಾರ್ಯಗಳು ಸಿದ್ಧಿಸಿ ಧನಾಭಿವೃದ್ಧಿ ಇರುವುದು. ಅಕ್ಟೋಬರ್‌ನಲ್ಲಿ ಆರೋಗ್ಯಹಾನಿ, ಬಂಧು ವಿಯೋಗ, ಕೆಲಸ ಕಾರ್ಯಗಳಿಗೆ ವಿಘ್ನ, ಮನೋವ್ಯಸನ, ಆರ್ಥಿಕ ಅಡಚಣೆಗಳು ಇರುವುದಾದರೂ ಆರ್ಥಿಕಾಭಿವೃದ್ಧಿ ಇರುವುದು. ನವೆಂಬರ್‌ನಲ್ಲಿ ಆರೋಗ್ಯದಲ್ಲಿ ಸುಧಾರಣೆ, ಕಾರ್ಯಸಿದ್ಧಿ, ಧನಲಾಭ, ಸಾಂಸಾರಿಕ ಸುಖ, ಗೃಹ–ಭೂಸಂಬಂಧಿ ವ್ಯವಹಾರಗಳಲ್ಲಿ ಪ್ರಗತಿಯಿರುವುದು. ಡಿಸೆಂಬರ್‌ನಲ್ಲಿ ಮೇಲಿನ ಶುಭಫಲಗಳಿರುವುದಾದರೂ ಖರ್ಚು–ವೆಚ್ಚಗಳು ಹೆಚ್ಚಾಗುವುದು. ಸ್ಥಾನಾಂತರಯೋಗವಿರುವುದು. ಜನವರಿಯಲ್ಲಿ ಆರೋಗ್ಯದ ಕಡೆಗೆ ಗಮನ ಅಗತ್ಯ. ಕೆಲಸ ಕಾರ್ಯಗಳು ನಿರೀಕ್ಷಿತ ರೀತಿ ಸಿದ್ಧಿಸುವುದಿಲ್ಲ. ಸರಕಾರಿ ಕೆಲಸ ಕಾರ್ಯಗಳಿಗೆ ವಿಘ್ನ ಮುಂತಾದ ಫಲಗಳಿವೆ. ಫೆಬ್ರವರಿನಲ್ಲಿ ಆರೋಗ್ಯಹಾನಿ, ಧನಹಾನಿ, ಕೆಲವೊಂದು ಸಮಸ್ಯೆಗಳು, ತಕರಾರುಗಳು, ಆರ್ಥಿಕ ಅಡಚಣೆಗಳು ಉಂಟಾಗುವುದು. ಮಾರ್ಚ್‌ನಲ್ಲಿ ದುಃಖದುಮ್ಮಾನಗಳು ಹೆಚ್ಚಾಗುವುದು. ಆರ್ಥಿಕಅಸ್ಥಿರತೆ, ಬುದ್ಧಿ ಚಂಚಲತೆ, ಸಾಂಸಾರಿಕ ತಾಪತ್ರಯ ಹೆಚ್ಚಾಗುವುದು. ಸ್ಥಾನಾಂತರ ಯೋಗವಿರುವುದು.

**ಕುಂಭರಾಶಿ :–** ಈ ವರ್ಷ ಗುರು ಅಶುಭನಿದ್ದು, ಸಾಡೇಸಾತಿಯ ಶನಿ, ರಾಹು–ಕೇತುಗಳು ಅಶುಭಫಲರು. ಎಪ್ರಿಲ್‌ನಲ್ಲಿ ಆರೋಗ್ಯವೃದ್ಧಿ, ಗೃಹಸುಖ, ಜನಸಹಾಯ ಇರುವುದು. ಮೇನಲ್ಲಿ ಕಾರ್ಯಸಿದ್ಧಿ, ಉದ್ಯೋಗ ಕ್ಷೇತ್ರದಲ್ಲಿ ಪ್ರಗತಿ ಸಾಂಸಾರಿಕವಾಗಿ ಉತ್ತಮ ಕಾರ್ಯಗಳು ಸಿದ್ಧಿಸುವುದು, ಶತ್ರುನಾಶ, ಕೆಲವೊಂದು ಸಮಸ್ಯೆಗಳಿಗೆ ಪರಿಹಾರ ಲಭಿಸುವುದು. ಜೂನ್‌ನ ಆರಂಭದಲ್ಲಿ ಮೇಲಿನ ಶುಭಫಲಗಳಿರುವುದಾದರೂ ಅನಂತರ ಖರ್ಚುವೆಚ್ಚಗಳು ಹೆಚ್ಚಾಗಿ ಕಷ್ಟನಷ್ಟಗಳು ಅಧಿಕವಾಗುವುದು. ಸಾಂಸಾರಿಕ ತಾಪತ್ರಯ, ಭಿನ್ನಾಭಿಪ್ರಾಯ, ದೈಹಿಕ ಅಪಾಯಗಳು, ಕಾರ್ಯಕ್ಷೇತ್ರದಲ್ಲಿ ತಾಪತ್ರಯಗಳು ಹೆಚ್ಚಾಗುವುದು. ಆಗಸ್ಟ್‌ನಲ್ಲಿ ಆರೋಗ್ಯವೃದ್ಧಿ, ಶತ್ರುಹಾನಿ, ಗೃಹಸುಖ, ಧೈರ್ಯವೃದ್ಧಿ ಇತ್ಯಾದಿ ಫಲಗಳಿವೆ. ಸೆಪ್ಟೆಂಬರ್‌ನ ಆರಂಭದಲ್ಲಿ ಮೇಲಿನ ಶುಭಫಲಗಳಿರುವುದಾದರೂ ಅನಂತರ ಮಾರ್ಗಾಯಾಸ, ಜಠರ, ಶ್ವಾಸೋಚ್ಛ್ವಾಸದ ಸಮಸ್ಯೆಗಳು ಉಂಟಾಗುವುದು. ಅಕ್ಟೋಬರ್‌ನಲ್ಲಿ ಧನಹಾನಿ, ನೆಮ್ಮದಿನಾಶ, ವಾಹನದಿಂದ ಹಾನಿ, ಕಾರ್ಯನಾಶ, ಉದ್ಯೋಗಕ್ಷೇತ್ರದಲ್ಲಿ ಹಾನಿ ಮುಂತಾದ ಫಲಗಳಿರುವುದು. ನವೆಂಬರ್‌ನಲ್ಲಿ ಕಾರ್ಯಸಿದ್ದಿ. ಬಂಧುಜನರ ಸಹಕಾರ, ಆರೋಗ್ಯವೃದ್ಧಿ ಧನವೃದ್ಧಿ ಮುಂತಾದ ಶುಭಫಲಗಳಿವೆ. ಡಿಸೆಂಬರ್‌ನಲ್ಲಿ ಪದೋನ್ನತಿ, ಆರ್ಥಿಕಾಭಿವೃದ್ಧಿ, ಜನಸಹಾಯ, ಆರೋಗ್ಯವೃದ್ಧಿ ಇರುವುದು. ಜನವರಿಯಲ್ಲಿ ಖರ್ಚುವೆಚ್ಚಗಳು ಹೆಚ್ಚಾಗುವುದು. ಆರೋಗ್ಯಹಾನಿ, ಧನನಾಶ, ಸಾಂಸಾರಿಕ ತಾಪತ್ರಯಗಳು ವೃದ್ಧಿಸುವುದು. ಫೆಬ್ರವರಿಯಲ್ಲಿ ಆರೋಗ್ಯದ ಕಡೆಗೆ ಗಮನ ಅಗತ್ಯ. ಸಾಂಸಾರಿಕ ತಾಪತ್ರಯಗಳು ಕಡಿಮೆಯಾಗಿ ಸುಖವೃದ್ಧಿ ಇರುವುದು. ಮಾರ್ಚ್‌ನಲ್ಲಿ ಕಾರ್ಯಹಾನಿ, ಧನಹಾನಿ, ಆರೋಗ್ಯಹಾನಿ, ಸಾಂಸಾರಿಕ ತಾಪತ್ರಯಗಳು ವೃದ್ಧಿಸುವುದು.

**ಮೀನರಾಶಿ :–** ಈ ವರ್ಷ ಗುರುವಿನ ಬಲವಿಲ್ಲ. ಜನ್ಮರಾಶಿಯ, ಸಾಡೇಸಾತ್ ಶನಿ. ರಾಹು, ಕೇತು ಅಶುಭ ಫಲದಾಯಕರು. ಎಪ್ರಿಲ್‌ನಲ್ಲಿ

ಲೋಹಾಗ್ನಿಯಿಂದ ದೈಹಿಕಾಪತ್ತು. ಸ್ಥಾನ ಪಲ್ಲಟದ ಯೋಗ, ಆರ್ಥಿಕ ವ್ಯವಹಾರಗಳಲ್ಲಿ ಅಡಚಣೆಗಳಿವೆ. ಮೇ ಯಲ್ಲಿ ಸಂಚಾರದಲ್ಲಿ ಹಾನಿ, ಆಹಾರ ವ್ಯತ್ಯಾಸದಿಂದ ಆರೋಗ್ಯಹಾನಿ. ಕಲಹಗಳುಂಟಾಗುವುದು. ಜೂನ್‌ನಲ್ಲಿ ಮೇಲಿನ ಅಶುಭಫಲಗಳಿರುವುದಾದರೂ ಆರೋಗ್ಯದಲ್ಲಿ ಸುಧಾರಣೆ ಇರುವುದು. ದೈಹಿಕ ಶಕ್ತಿ ವೃದ್ಧಿಸುವುದು. ಕಾರ್ಯಸಿದ್ಧಿ, ಸಾಂಸಾರಿಕ ಸುಖವೃದ್ಧಿ. ಜುಲೈನಲ್ಲಿ ಸಾಂಸಾರಿಕ ತಾಪತ್ರಯಗಳ ವೃದ್ಧಿ, ಶತ್ರುಕಾಟ, ಧನಹಾನಿ, ಕಾರ್ಯಹಾನಿ ಮುಂತಾದ ಅಶುಭ ಫಲಗಳಿವೆ. ಆಗಸ್ಟ್‌ನಲ್ಲಿ ಶತ್ರುಕಾಟ ದೈಹಿಕಾಪತ್ತು, ಕಾರ್ಯಹಾನಿ, ಆರೋಗ್ಯ ಹಾನಿ ಮುಂತಾದ ಅಶುಭ ಫಲಗಳಿರುವುದಾದರೂ ಕೆಲವೊಂದು ಶುಭಫಲಗಳು ಅನುಭವಕ್ಕೆ ಬರುವುದು. ಸೆಪ್ಟೆಂಬರ್‌ನ ಆರಂಭದಲ್ಲಿ ಆರೋಗ್ಯದ ಕಡೆಗೆ ಗಮನ ಅಗತ್ಯ. ಕೆಲಸ ಕಾರ್ಯಗಳಿಗೆ ಹಾನಿ, ಮಾರ್ಗಾಯಾಸ, ಸಾಂಸಾರಿಕ ತಾಪತ್ರಯಗಳುಂಟಾಗುವುದು. ಅಕ್ಟೋಬರ ತಿಂಗಳ ಆರಂಭದಲ್ಲಿ ಶುಭಫಲಗಳಿದ್ದು, ಅನಂತರ ಕೆಲಸ ಕಾರ್ಯಗಳಿಗೆ ಹಾನಿ. ಧನಹಾನಿ, ಬಂಧುಗಳೊಂದಿಗೆ ವಿರಸ ಮುಂತಾದ ಅಶುಭ ಫಲಗಳಿವೆ. ನವೆಂಬರ್ ತಿಂಗಳ ಆದಿಯಲ್ಲಿ ಅನಿಷ್ಠ ಫಲಗಳಿರುವುದಾದರೂ ಆನಂತರ ಕಾರ್ಯಸಿದ್ಧಿ, ಆರೋಗ್ಯವೃದ್ಧಿ, ಧನವೃದ್ಧಿ ಮುಂತಾದ ಫಲಗಳಿರುವುದು. ಡಿಸೆಂಬರ್‌ನ ಆರಂಭದಲ್ಲಿ ಗೃಹಲಾಭ, ಭೂಲಾಭ, ಶತ್ರುನಾಶ, ಕಾರ್ಯಸಿದ್ಧಿ, ಆರೋಗ್ಯವೃದ್ಧಿ ಇರುವುದು. ಅನಂತರ ಸಾಮಾನ್ಯ ಫಲಗಳು ಅನುಭವಕ್ಕೆ ಬರುವುದು. ಜನವರಿ ಯಲ್ಲಿ ಕೆಲಸ ಕಾರ್ಯಗಳು ಸಿದ್ಧಿಸುವುದು. ಸ್ಥಾನಮಾನ ಗೌರವ ಪ್ರಾಪ್ತಿ, ಪದೋನ್ನತಿ ಮುಂತಾದ ಶುಭಫಲವಿರುವುದು. ಫೆಬ್ರವರಿಯ ಆರಂಭದಲ್ಲಿ ಮೇಲಿನ ಶುಭಫಲಗಳಿರುವುದು. ಆನಂತರ ದೈಹಿಕಾಪತ್ತು ಕಾರ್ಯವಿಘ್ನ, ಧನಹಾನಿ, ಸಾಂಸಾರಿಕ ತಾಪತ್ರಯಗಳು ಹೆಚ್ಚಾಗುವುದು. ಮಾರ್ಚ್ ನಲ್ಲಿ ಧೈರ್ಯಹಾನಿ, ಅನಾರೋಗ್ಯ ಅಧಿಕಾರ ವರ್ಗದವರಿಂದ, ಅಪ್ತರಿಂದ ಅಸಹಕಾರ ಮುಂತಾದ ಫಲಗಳಿರುವುದು.

## ಹರಿದಾಸರುಗಳ ಆರಾಧನೆಗಳು

| | | | | |
|---|---|---|---|---|
| 1. ಶ್ರೀತಂದೆಮುದ್ದುಮೋಹನವಿಠಲದಾಸರು | ಚೈತ್ರ | ಶುಕ್ಲ | ನವಮಿ | 06.04.25 |
| 2. ಶ್ರೀವೇಣುಗೋಪಾಲವಿಠಲದಾಸರು | ವೈಶಾಖ | ಶುಕ್ಲ | ಬಿದಿಗೆ | 29.04.25 |
| 3. ಶ್ರೀವಿಜಯರಾಮಚಂದ್ರವಿಠಲದಾಸರು | ವೈಶಾಖ | ಶುಕ್ಲ | ತದಿಗೆ | 30.04.25 |
| 4. ಶ್ರೀಗುರುವಿಜಯವಿಠಲದಾಸರು | ವೈಶಾಖ | ಶುಕ್ಲ | ಅಷ್ಟಮಿ | 05.05.25 |
| 5. ಶ್ರೀಶ್ಯಾಮಸುಂದರವಿಠಲದಾಸರು | ವೈಶಾಖ | ಶುಕ್ಲ | ನವಮಿ | 06.05.25 |
| 6. ಶ್ರೀಜಯೇಶವಿಠಲದಾಸರು | ವೈಶಾಖ | ಕೃಷ್ಣ | ಬಿದಿಗೆ | 14.05.25 |
| 7. ಶ್ರೀಮೋಹನವಿಠಲದಾಸರು | ಜ್ಯೇಷ್ಠ | ಶುಕ್ಲ | ಷಷ್ಠಿ | 01.06.25 |
| 8. ಶ್ರೀ ಶ್ರೀದವಿಠಲದಾಸರು | ಆಷಾಢ | ಶುಕ್ಲ | ಏಕಾದಶಿ | 06.07.25 |
| 9. ಶ್ರೀತಂದೆವೆಂಕಟೇಶವಿಠಲದಾಸರು | ಆಷಾಢ | ಕೃಷ್ಣ | ಅಷ್ಟಮಿ | 18.07.25 |
| 10. ಶ್ರೀಹೆಳವನಕಟ್ಟೆ ಗಿರಿಯಮ್ಮ | ಶ್ರಾವಣ | ಶುಕ್ಲ | ಪಂಚಮಿ | 29.07.25 |
| 12. ಶ್ರೀವಾಸುದೇವ ವಿಠಲದಾಸರು | ಶ್ರಾವಣ | ಕೃಷ್ಣ | ನವಮಿ | 17.08.25 |
| 13. ಶ್ರೀಶಿರಿಗೋವಿಂದವಿಠಲದಾಸರು | ಭಾದ್ರಪದ | ಶುಕ್ಲ | ಪಂಚಮಿ | 28.08.25 |
| 14. ಶ್ರೀ ಶ್ರೀಶಪಾಣೇಶವಿಠಲದಾಸರು | ಭಾದ್ರಪದ | ಶುಕ್ಲ | ಅಷ್ಟಮಿ | 31.08.25 |
| 15. ಶ್ರೀಜಗನ್ನಾಥದಾಸರು | ಭಾದ್ರಪದ | ಶುಕ್ಲ | ನವಮಿ | 01.09.25 |
| 16. ಶ್ರೀಪ್ರಸನ್ನವೆಂಕಟದಾಸರು | ಭಾದ್ರಪದ | ಶುಕ್ಲ | ದ್ವಾದಶಿ | 04.09.25 |
| 17. ಶ್ರೀಕಮಲೇಶವಿಠಲದಾಸರು | ಭಾದ್ರಪದ | ಶುಕ್ಲ | ದ್ವಾದಶಿ | 04.09.25 |
| 18. ಶ್ರೀವರದೇಶವಿಠಲದಾಸರು | ಆಶ್ವೀಜ | ಶುಕ್ಲ | ತದಿಗೆ | 24.09.25 |
| 19. ಶ್ರೀಪ್ರಾಣೇಶವಿಠಲದಾಸರು | ಆಶ್ವೀಜ | ಶುಕ್ಲ | ಸಪ್ತಮಿ | 29.09.25 |
| 20. ಶ್ರೀಗುರುಜಗನ್ನಾಥದಾಸರು | ಆಶ್ವೀಜ | ಕೃಷ್ಣ | ಪಾಡ್ಯ | 08.10.25 |
| 21. ಶ್ರೀವಿಜಯದಾಸರು | ಕಾರ್ತೀಕ | ಶುಕ್ಲ | ದಶಮಿ | 31.10.25 |
| 22. ಶ್ರೀಇಂದಿರೇಶದಾಸರು | ಕಾರ್ತೀಕ | ಕೃಷ್ಣ | ಪಂಚಮಿ | 10.11.25 |
| 23. ಶ್ರೀಉರಗಾದ್ರಿವಾಸವಿಠಲದಾಸರು | ಕಾರ್ತೀಕ | ಕೃಷ್ಣ | ದ್ವಾದಶಿ | 17.11.25 |
| 24. ಶ್ರೀಮುದ್ದುಮೋಹನದಾಸರು | ಕಾರ್ತೀಕ | ಕೃಷ್ಣ | ಚತು | 18.11.25 |

| | | | | | |
|---|---|---|---|---|---|
| 25. | ಶ್ರೀಮಹಿಪತಿದಾಸರು | ಕಾರ್ತೀಕ | ಕೃಷ್ಣ | ಅಮಾ | 20.11.25 |
| 26. | ಶ್ರೀನರಸಿಂಹದಾಸರು | ಮಾರ್ಗ | ಕೃಷ್ಣ | ಷಷ್ಠೀ | 10.12.25 |
| 27. | ಶ್ರೀಗುರುಶ್ರೀಶವಿಠಲದಾಸರು | ಮಾರ್ಗ | ಕೃಷ್ಣ | ಅಮಾ | 19.12.25 |
| 28. | ಶ್ರೀಭೀಮೇಶಕೃಷ್ಣವಿಠಲದಾಸರು | ಪುಷ್ಯ | ಶುಕ್ಲ | ಚತು | 02.01.26 |
| 29. | ಶ್ರೀಅಭಿನವಪ್ರಾಣೇಶವಿಠಲದಾಸರು | ಪುಷ್ಯ | ಕೃಷ್ಣ | ಸಪ್ತಮಿ | 10.01.26 |
| 30. | ಶ್ರೀಗೋಪಾಲದಾಸರು | ಪುಷ್ಯ | ಕೃಷ್ಣ | ಅಷ್ಟಮಿ | 11.01.26 |
| 31. | ಶ್ರೀಪುರಂದರದಾಸರು | ಪುಷ್ಯ | ಕೃಷ್ಣ | ಅಮಾ | 18.01.26 |
| 32. | ಶ್ರೀಗುರುಪ್ರಾಣೇಶವಿಠಲದಾಸರು | ಮಾಘ | ಕೃಷ್ಣ | ಅಮಾ | 17.02.26 |
| 33. | ಶ್ರೀವ್ಯಾಸವಿಠಲರು | ಫಾಲ್ಗುಣ | ಕೃಷ್ಣ | ಚೌತಿ | 07.03.26 |

| ಚಂದ್ರದರ್ಶನ | | | ದರ್ಶೇಷ್ಟಿ | | |
|---|---|---|---|---|---|
| 30.03.25 | ಪಾಡ್ಯ | ಭಾನುವಾರ | 30.03.25 | ಪಾಡ್ಯ | ಭಾನುವಾರ |
| 29.04.25 | ಬಿದಿಗೆ | ಮಂಗಳವಾರ | 28.04.25 | ಪಾಡ್ಯ | ಸೋಮವಾರ |
| 26.06.25 | ಪಾಡ್ಯ | ಗುರುವಾರ | 27.05.25 | ಅಮಾ | ಮಂಗಳವಾರ |
| 26.07.25 | ಬಿದಿಗೆ | ಶನಿವಾರ | 26.06.25 | ಪಾಡ್ಯ | ಗುರುವಾರ |
| 24.08.25 | ಪಾಡ್ಯ | ಭಾನುವಾರ | 25.07.25 | ಪಾಡ್ಯ | ಶುಕ್ರವಾರ |
| 23.09.25 | ಬಿದಿಗೆ | ಮಂಗಳವಾರ | 23.08.25 | ಅಮಾ | ಶನಿವಾರ |
| 22.10.25 | ಪಾಡ್ಯ | ಬುಧವಾರ | 22.09.25 | ಪಾಡ್ಯ | ಸೋಮವಾರ |
| 21.11.25 | ಪಾಡ್ಯ | ಶುಕ್ರವಾರ | 22.10.25 | ಪಾಡ್ಯ | ಬುಧವಾರ |
| 21.12.25 | ಬಿದಿಗೆ | ಭಾನುವಾರ | 20.11.25 | ಅಮಾ | ಗುರುವಾರ |
| 20.01.26 | ಬಿದಿಗೆ | ಮಂಗಳವಾರ | 20.12.25 | ಪಾಡ್ಯ | ಶನಿವಾರ |
| 18.02.26 | ಪಾಡ್ಯ | ಬುಧವಾರ | 19.01.26 | ಪಾಡ್ಯ | ಸೋಮವಾರ |
| 20.03.26 | ಪಾಡ್ಯ | ಶುಕ್ರವಾರ | 18.02.26 | ಪಾಡ್ಯ | ಬುಧವಾರ |

**ದವನವನ್ನು ಚೈತ್ರಮಾಸ ಹುಣ್ಣಿಮೆಯವರೆಗೆ ಒಂದೊಂದು ದಿವಸ ಒಂದೊಂದು ದೇವತೆಗಳಿಗೆ ಅರ್ಪಿಸಿ ಪೂಜಿಸಿದಲ್ಲಿ ಆಯಾಯ ದೇವತೆಗಳು ಸಂತುಷ್ಟರಾಗಿ ಅನುಗ್ರಹವನ್ನು ಮಾಡುತ್ತಾರೆ**

| | | | |
|---|---|---|---|
| 31.03.25 | ಸೋಮವಾರ | ಬಿದಿಗೆ | ಗೌರೀಶಿವರಿಗೆ ದವನಾರ್ಪಣೆ |
| 02.04.25 | ಬುಧವಾರ | ಚೌತಿ | ಗಣೇಶಾಯ ದವನಾರ್ಪಣೆ |
| 02.04.25 | ಬುಧವಾರ | ಪಂಚಮಿ | ನಾಗಾಯ ದವನಾರ್ಪಣೆ |
| 03.04.25 | ಗುರುವಾರ | ಷಷ್ಠೀ | ಸ್ಕಂದಾಯ ದವನಾರ್ಪಣೆ |
| 04.04.25 | ಶುಕ್ರವಾರ | ಸಪ್ತಮಿ | ಸೂರ್ಯಾಯ ದವನಾರ್ಪಣೆ |
| 06.04.25 | ಭಾನುವಾರ | ನವಮೀ | ದುರ್ಗಾದೇವಿಗೆ ದವನಾರ್ಪಣೆ |
| 07.04.25 | ಸೋಮವಾರ | ದಶಮಿ | ಧರ್ಮರಾಜಾಯ ದವನಾರ್ಪಣೆ |
| 09.04.25 | ಬುಧವಾರ | ದ್ವಾದಶಿ | ವಿಷ್ಣುವಿಗೆ ದವನಾರ್ಪಣೆ |
| 10.04.25 | ಗುರುವಾರ | ತ್ರಯೋ | ಮನ್ಮಥನಿಗೆ ದವನಾರ್ಪಣೆ |
| 11.04.25 | ಶುಕ್ರವಾರ | ಚತು | ಶಿವಾಯ ದವನಾರ್ಪಣೆ |
| 12.04.25 | ಶನಿವಾರ | ಪೌರ್ಣಿಮಿ | ಸರ್ವದೇವತೆಗಳಿಗೆ ದವನಾರ್ಪಣೆ |

## ಚೈತ್ರಮಾಸಾದಿ ವಿಶೇಷ ವಿಷಯಗಳು

### (ಆಚರಿಸಬೇಕಾದ ಧರ್ಮಶಾಸ್ತ್ರ ವಿಷಯಗಳು)

ಅಮಾವಾಸ್ಯೆಯ ದಿನದಂದು ದೇವರ ಮುಂದೆ ಶುಚಿಮಾಡಿ ರಂಗೋಲೆಯಿಂದ ಅಲಂಕರಿಸಿ ಒಂದು ತಟ್ಟೆಯಲ್ಲಿ ನೂತನ ವಸ್ತ್ರಾಭರಣಗಳನ್ನು ಇಟ್ಟು, ಮರು ದಿನ ಅಂದರೆ 30–03–25 ಯುಗಾದಿಯ ಬೆಳಿಗ್ಗೆ ಎದ್ದ ತಕ್ಷಣ ದೇವರ ದರ್ಶನಾನಂತರ ಈ ಮಂಗಳ ದ್ರವ್ಯಗಳ ದರ್ಶನವು ಶುಭದಾಯಕವು. ಪ್ರಪಾದಾನ, ಅಭ್ಯಂಜನ, ವತ್ಸರಾಧಿಪಪೂಜ, ನವವಸ್ತ್ರಧಾರಣ ಪಂಚಾಂಗಶ್ರವಣ, ನಿಂಬಕದಳಸ್ವೀಕಾರ.

ಶ್ರೀಚಾಂದ್ರಮಾನ ಯುಗಾದಿ, ಪ್ರಾತಃ ಶ್ರೀಗೋಪೀನಾಥದೇವರಿಗೆ ಮತ್ತು ಎಲ್ಲಾ ವೃಂದಾವನಗಳಿಗೂ ಆರತಿ ಅಕ್ಷತೆ, ಶಕುನನಿರೀಕ್ಷಣ, ದಧಿಕ್ಷೀರಘೃತವರ್ಜನಂ ದಂಪತಿ ಪೂಜನಾತ್ಮಕಂ ಗೌರೀವ್ರತಂ ಮಾಸಪರ್ಯಂತಂ, ಧರ್ಮಘಟದಾನ, ಶ್ವೇತವರಾಹಕಲ್ಪಾದಿ, ಅಭ್ಯಂಜನ, ಶ್ರೀರಾಮನವರಾತ್ರಾರಂಭ, ನೂತನ ವಸ್ತ್ರಧಾರಣಂ. ಶ್ರೀಮಠದಲ್ಲಿ ಸಂಸ್ಥಾನ ಪ್ರತಿಮೆಗಳಿಗೆ ಮಹಾಭಿಷೇಕ, ಮಹಾಪೂಜೆ, ದರ್ಶೇಷ್ಠಿ, ನಿಂಬಕದಳ (ಬೇವುಬೆಲ್ಲ) ಭಕ್ಷಣ.ಚಂದ್ರ ದರ್ಶನ, ಬಾಲೇಂದುಪೂಜಾ, ಪ್ರಪಾದಾನ.

ಬೇವುಬೆಲ್ಲ ಮೆಲ್ಲುವಾಗ ಹೇಳಬೇಕಾದ ಮಂತ್ರ :

**ಶ್ಲೋಕ : ಶತಾಯುರ್ವಜ್ರದೇಹಾಯ ಸರ್ವಸಂಪತ್ಕರಾಯ ಚ ।**
**ಸರ್ವಾರಿಷ್ಟ ವಿನಾಶಾಯ ನಿಂಬಕಂದಳ ಭಕ್ಷಣಂ ॥**

**ಪಂಚಾಂಗ ಶ್ರವಣ**

**ಶ್ರೀಕಲ್ಯಾಣಗುಣಾವಹಂ ರಿಪುಹರಂ ದುಃಸ್ವಪ್ನದೋಷಾಪಹಮ್ ।**
**ಗಂಗಾಸ್ನಾನ ವಿಶೇಷ ಪುಣ್ಯಫಲದಂ ಗೋದಾನ ತುಲ್ಯಂ ನೃಣಾಮ್ ॥**
**ಆಯುರ್ವೃದ್ಧಿದಮುತ್ತಮಂ ಶುಭಕರಂ ಸಂತಾನ ಸಂಪತ್ಪ್ರದಮ್ ।**
**ನಾನಾಕರ್ಮಸುಸಾಧನಂ ಸಮುಚಿತಂ ಪಂಚಾಂಗಮಾಕರ್ಣ್ಯತಾಮ್ ॥**
**ಯಃಶೃಣೋತಿ ಮಧುಶುಕ್ಲಪಕ್ಷಕೇ ವರ್ಷನಾಥ ಸಚಿವಾದಿಕಂ ಫಲಮ್**
**ಪ್ರಾಪ್ನುಯಾದ್ದುರಿತ ಮುಕ್ತವಿಗ್ರಹಶ್ಚ ಆಯುರರ್ಥಮತುಲಂ ಯಶ ಸ್ಸುಖಮ್॥**
**ಆಯುರ್ವೃದ್ಧಿಂ ಪುತ್ರಪೌತ್ರಾಭಿವೃದ್ಧಿಂ ನಿತ್ಯಾರೋಗ್ಯಂ ಸಂಪದಂ ಚಾನಪಾಯಾಮ್।**
**ಅಚ್ಛಿನಾನಾಮುತ್ಸವಾನಾಮವಾಪ್ತಿಂ ಯಚ್ಛಂತ್ಯೇತೇ ವತ್ಸರಾಧೀಶಮುಖ್ಯಾಃ॥**
**ಓಂ ತಿಥೇಶ್ಚಶ್ರಿಯಮಾಪ್ನೋತಿ ವಾರಾದಾಯುಷ್ಯ ವರ್ಧನಮ್**
**ನಕ್ಷತ್ರಾದ್ಧರತೇ ಪಾಪಂ ಯೋಗಾದ್ರೋಗ ನಿವಾರಣಮ್ ।**
**ಕರಣಾತ್ಕಾರ್ಯಸಿದ್ಧಿಶ್ಚ ಪಂಚಾಂಗ ಫಲಮುತ್ತಮಮ್ ॥**

ಪ್ರಪಾದಾನ=ಈ ಮಾಸದ ಶುಕ್ಲಪಕ್ಷ ಪ್ರಾರಂಭದಿಂದ ಆರಂಭಿಸಿ ನಾಲ್ಕುತಿಂಗಳು ಬಿಸಿಲು ಹೆಚ್ಚಿರುವುದರಿಂದ ಜನರ ಬಾಯಾರಿಕೆ ಹೋಗಲಾಡಿಸಲು ಅರವಟ್ಟಿಗೆ(ಪ್ರಪಾ)ಯನ್ನು ಈ ಶ್ಲೋಕವನ್ನು ಹೇಳುತ್ತಾ– **ಪ್ರಪೇಯಂ ಸರ್ವಸಾಮಾನ್ಯಾ ಭೂತೇಭ್ಯಃ ಪ್ರತಿಪಾದಿತಾ। ಅಸ್ಯಾಃ ಪ್ರದಾನಾತ್ ಪಿತರಃ ತೃಪ್ಯಂತು ಚ ಪಿತಾಮಹಾಃ ॥** ಪ್ರಾರಂಭಿಸಬೇಕು. ಇದರಿಂದ ಶ್ರೀಹರಿಗೆ ಪ್ರೀತಿಯಾಗುತ್ತದೆ. ಅರವಟ್ಟಿಗೆ ಪ್ರಾರಂಭಿಸಿದ ಮನುಷ್ಯನಿಗೆ ಯಾವಾಗಲೂ ನೀರಿನ ಕೊರತೆಯಾಗುವುದಿಲ್ಲ.

31.03.25 ಮತ್ಸ್ಯಜಯಂತಿ, ಗೌರೀಶಿವರಿಗೆ ದಮನಾರ್ಪಣೆ.

01.04.25 ಆಂದೋಲಿಕಾಗೌರೀ ಮಾಸಪರ್ಯಂತ, ಉತ್ತಮಮನ್ವಾದಿ, ಶ್ರೀರಾಮಡೋಲೋತ್ಸವ, ಮಾಸಪರ್ಯಂತ ಚೈತ್ರಗೌರೀವ್ರತ.

02.04.25 ವಿನಾಯಕ ಚತುರ್ಥಿ, ಹಯವ್ರತ, ಗಣಾಶನಿಗೆ ದಮನಾರ್ಪಣೆ.

03.04.25 ಸ್ಕಂಧನಿಗೆ ದಮನಾರ್ಪಣೆ.

04.04.25 ಸೂರ್ಯನಿಗೆ ದಮನಾರ್ಪಣೆ.

05.04.25 ದುರ್ಗಾಷ್ಟಮೀ, ಭವಾನ್ಯುತ್ಪತ್ತಿ, ಅಶೋಕಕಲಿಕಾಪ್ರಾಶನ, ಬ್ರಹ್ಮಪುತ್ರನದೀಸ್ನಾನದಿಂದ ವಿಶೇಷಫಲ.

06.04.25 ಶ್ರೀರಾಮನವಮಿ, ಇಂದಿನಿಂದ ವೈಶಾಖ ಶುಕ್ಲ ಪೂರ್ಣಿಮಾವರೆಗೆ ವಸಂತಪೂಜಾ, ದುರ್ಗಾದೇವಿಗೆ ಧಮನಾರ್ಪಣೆ,

**ಓಂ ಕೌಸಲ್ಯಾಗರ್ಭಸಂಭೂತ ಸದಾ ಸೌಮಿತ್ರಿವತ್ಸಲ । ಜಾನಕೀಸಹಿತೋ ರಾಮ ಗೃಹಾಣಾರ್ಘ್ಯಂ ನಮೋಸ್ತುತೇ॥ ರಾಮದೇವರಿಗೆ ಅರ್ಘ್ಯ, ಶ್ರೀರಾಮನವಮಿ ಪೂಜೆ, ಕೌಸಲ್ಯ ಅರ್ಘ್ಯ :– ರಾಮಸ್ಯ ಜನನೀ ಚಾಪಿ ರಾಮಾತ್ಮಕಮಿದಂ ಜಗತ್ ಅತಸ್ತ್ವಾಂ ಪೂಜಯಿಷ್ಯಾಮಿ ಲೋಕಮಾತರ್ನಮೋಸ್ತುತೇ.**

**ದಾಶರಥಿ ಪೂಜೆ : ಓಂ ನಮೋ ದಾಶರಥಯೇ ನಮಃ । ಕೌಸಲ್ಯಾ ನಂದನೋ ವೀರ ರಾವಣಾಸುರಮರ್ದನ। ಸೀತಾಪತೇ ನಮಸ್ತುಭ್ಯಂ ಗೃಹಾಣಾರ್ಘ್ಯಂ ನಮೋಸ್ತು ತೇ** ಅರ್ಘ್ಯಕೊಡಬೇಕು.

07.08 ಮತ್ತು 09–04–25 ದಿನತ್ರಯ ದಶಮೀ–ಏಕಾದಶೀ–ದ್ವಾದಶೀ ಸಂಕಲ್ಪ ಸಮರ್ಪಣ **ಪ್ರಾಪ್ತೇವ್ರತಸ್ಥೋಽಹಂ ಜನಾರ್ದನ ತ್ರಿದಿನಂ ದೇವದೇವೇಶ ನಿರ್ವಿಘ್ನಂಕುರು ಕೇಶವ।** ಏಕಾದಶ್ಯಾಂ ನಿರಾಹಾರಃ **ಸ್ಥಿತ್ವಾಹಮಪರೇಽಹನಿ। ಭೋಕ್ಷ್ಯಾಮಿ ಪುಂಡರೀಕಾಕ್ಷ ಶರಣಂ ಮೇ ಭವಾಚ್ಯುತ ಏಕಾದಶ್ಯುಪವಾಸೇನ ದ್ವಾದಶ್ಯಾಂ ಪಾರಣೇನ ಚ। ಯದಾರ್ಜಿತಂ ಮಯಾಪುಣ್ಯಂ ತೇನ ಪ್ರೀಣಾತು ಕೇಶವಃ॥** ಶ್ರೀಕೋದಂಡರಾಮಸ್ವಾಮಿ ರಥೋತ್ಸವ, ಬೈರಕೂರು, ಮುಳಬಾಗಿಲು ತಾಲ್ಲೂಕು.

10.04.25 ಅನಂಗತ್ರಯೋದಶಿ, ಅನಂಗಪೂಜ.

11.04.25 ಶ್ರೀನೃಸಿಂಹಡೋಲೋತ್ಸವ.

12.04.25 ಚಿತ್ರಾಪೌರ್ಣಮಿ, ಹನುಮಜ್ಜಯಂತಿ, ಹಂಪಿಪೂರ್ಣಿಮಾ, ಚಿತ್ರವಸ್ತ್ರ, ಚಿತ್ರಾನ್ನ, ದಧ್ಯನ್ನದಾನ, ಸರ್ವದೇವತಾನಾಂ ದವನಾರ್ಪಣ, ರೌಚ್ಯಕಸಾವರ್ಣಿಮನ್ವಾದಿ, ದವನಪೌರ್ಣಿಮಾ, ಶ್ರೀವಿಠ್ಠಲನಾರಾಯಣಸ್ವಾಮಿ ರಥೋತ್ಸವ–ಮುಳಬಾಗಲು. ಚೈತ್ರ ಶುದ್ಧ ಹುಣ್ಣಿಮೆಯ ದಿನ ವಿಷ್ಣುವಿಗೆ ದವನಾರ್ಪಣೆ, ದವನದಿಂದ ಪೂಜಿಸಿದರೆ ಒಂದು ವರ್ಷ ದೇವತಾರ್ಚನೆಯ ಫಲವು ಲಭಿಸುವುದು. ಇದೇ ರೀತಿ ಇಲ್ಲಿ ಹೇಳಿದಂತೆ ಒಂದೊಂದು ದೇವತೆಗೆ ಒಂದೊಂದು ದಿವಸ ದವನದ ಪೂಜೆಯು ವಿಶೇಷ ಫಲದಾಯಕ. ವೈಶಾಖ ಸ್ನಾನ ಪ್ರಾರಂಭ, ವಸಂತಪೂಜೆ–ಚೈತ್ರ ಶುದ್ಧ ಪೌರ್ಣಮಿ.

**ಸ್ನಾನ ಮಂತ್ರಃ :–**

**ಓಂ ವೈಶಾಖೇ ಸಕಲಂ ಮಾಸಂ ಮೇಷ ಸಂಕ್ರಮಣೇರವೇ**
**ಪ್ರಾತಃ ಸನಿಯಮಃ ಸ್ನಾಸ್ಯೇ ಪ್ರೀಯತಾಂ ಮಧುಸೂದನ ।**
**ಮಧುಹಂತುಃ ಪ್ರಸಾದೇನ ಬ್ರಾಹ್ಮಣಾನಾಮನುಗ್ರಹಾತ್**
**ನಿರ್ವಿಘ್ನಮಸ್ತು ಮೇ ಪುಣ್ಯಂ ವೈಶಾಖಮಸ್ನಹಮ್॥**
**ಮಾಧವೇ ಮೇಷಗೇಭಾನೌ ಮುರಾರೇ ಮಧುಸೂದನ**
**ಪ್ರಾತಃ ಸ್ನಾನೇನ ಮೇ ನಾಥ ಫಲದೋ ಭವ ಪಾಪಹನ್।**
**ವೈಶಾಖೇ ಮೇಷಗೇಭಾನೌ ಪ್ರಾತಃ ಸ್ನಾನಂ ಕರೋಮ್ಯಹಮ್।**
**ತೀರ್ಥೇ ಜಲಮಯೇ ಪುಣ್ಯೇ ಪುನೀಹಿ ಮಧುಸೂದನ॥**
**ಪ್ರಪಾದಾನ (ಅರವಟ್ಟಿಗೆ) ಪ್ರಪೇಯಂ ಸರ್ವಸಾಮಾನ್ಯಾ ಭೋಕ್ತೃಭ್ಯಃ**
**ಪ್ರತಿಪಾದಿತಾ। ಅಸ್ಯಾಃ ಪ್ರದಾನಾತ್ ಪಿತರಸ್ತೃಪ್ಯಂತು ಹಿ ಪಿತಾಮಹಾಃ॥**
ಜಲಕುಂಭದಾನ (ವಸ್ತ್ರದಿಂದ ಮುಚ್ಚಿ) **ಓಂ ಧರ್ಮಘಟೋ ದತ್ತೋ**
**ಬ್ರಹ್ಮ ವಿಷ್ಣು ಶಿವಾತ್ಮಕಃ। ಅಸ್ಯ ಪ್ರದಾನಾತ್ ಸಕಲಾ ಮಮಸಂತು**
**ಮನೋರಥಾಃ॥** – ಈ ಮಂತ್ರದಿಂದ ದಾನ ಮಾಡಬೇಕು.

18.04.25 ಚಂದ್ರಲಾದೇವಿ ಉತ್ಸವ (ಸನ್ನತಿ).

20.04.25 ಕಾಲಾಷ್ಟಮೀ.

22.04.25 ವಿಷ್ಣುಪಂಚಕ ಉಪವಾಸ.

26.04.25 ವಾರುಣಿಯೋಗ.

27.04.25 ವಿಷ್ಣುಪಂಚಕೋಪವಾಸ. ಅಕ್ಷಯತದಿಗೆ ಅಮಾವಾಸ್ಯೆ, ದರ್ಶ, ಅನ್ವಾಧಾನ, ವೈಶ್ವದೇವ, ಬಲಿಹರಣ, ಪಿಂಡಪಿತೃಯಜ್ಞ,

## ವೈಶಾಖ ಮಾಸ

28.04.25 ದರ್ಶೇಷ್ಟಿ.

29.04.25 ಚಂದ್ರದರ್ಶನ.

30.04.25 ಗಂಗಾಸ್ನಾನ, ನೀಲಲೋಹಿತಕಲ್ಪಾದಿ, ತ್ರೇತಾಯುಗಾದಿ, ಪರಶುರಾಮಜಯಂತಿ, ಅಕ್ಷಯತೃತೀಯ, ಗಂಧಲೇಪನ, ವೆಂಕಟೇಶಕಲ್ಯಾಣ

ಪುರಾಣ ಪ್ರಾರಂಭ, ಧರ್ಮಘಟದಾನ, ಸಮುದ್ರಸ್ನಾನೇನ ಮಹಾಫಲ, ಯವದಿಂದ ಹೋಮ – ದಾನ – ಪೂಜಾ – ಪ್ರಾಶನ ಅಕ್ಷಯ ತೃತೀಯ, ಉದಕುಂಭದಾನ ಮಂತ್ರ –

**ಗಂಧೋದಕಂ ತಿಲೈರ್ಮಿಶ್ರಂ ಸ್ನಾನಂ ಕುಂಭಂ ಫಲಾನ್ವಿತಮ್।**
**ಪಿತೃಭ್ಯಃ ಸಂಪ್ರದಾಸ್ಯಾಮಿ ಅಕ್ಷಯ್ಯಮುಪತಿಷ್ಠತು ॥**

**ಪರಶುರಾಮ ಜಯಂತಿ ಅರ್ಘ್ಯಮಂತ್ರ :–**

**ಓಂ ಜಮದಗ್ನಿಸುತೋ ವೀರ ಕ್ಷತ್ರಿಯಾಂತಕರ ಪ್ರಭೋ ।**
**ಗೃಹಾಣಾರ್ಘ್ಯಂ ಮಯಾ ದತ್ತಂ ಕೃಪಯಾ ಸ್ವೀಕುರು ಪ್ರಭೋ॥**
**ಗಂಗಾಗಂಗೇತಿ ಯೋ ಬ್ರೂಯಾತ್ ಯೋಜನಾನಾಂ ಶತೈರಪಿ।**
**ಮುಚ್ಯತೇ ಸರ್ವ ಪಾಪೇಭ್ಯೋ ವಿಷ್ಣುಲೋಕಂ ಸ ಗಚ್ಛತಿ॥**
**ತ್ರೈಲೋಕ್ಯವಂದಿತೇ ಗಂಗೇ ಶ್ರೀಪಾದಾಭೀಷ್ಟದೇ ಶುಭೇ।**
**ನೃಸಿಂಹತೀರ್ಥಂ ಸಂಪ್ರಾಪ್ತೇ ಗೃಹಾಣಾರ್ಘ್ಯಂ ನಮೋಽಸ್ತು ತೇ॥**
**ಕಲ್ಯಾಣಾದ್ಭುತಗಾತ್ರಾಯ ಕಾಮಿತಾರ್ಥ ಪ್ರದಾಯಿನೇ।**
**ಶ್ರೀಮದ್ವೇಂಕಟನಾಥಾಯ ಶ್ರೀನಿವಾಸಾಯ ಮಂಗಳಮ್॥**

04.05.25 ಪುಷ್ಯಾರ್ಕಯೋಗ, ಗಂಗೋತ್ಪತ್ತಿ, ಜಹ್ನುಋಷಿಯ ಬಲಕಿವಿಯಿಂದ ಗಂಗೆ ಅವತರಿಸಿದ ದಿನ, ಭಾನುಸಪ್ತಮೀ.

10.05.25 ಅಂತ್ಯಪುಷ್ಕರಣೀ, (ಈ ದಿನದಿಂದ ಮೂರು ದಿನ ದವರೆಗೆ) ವೇದವ್ಯಾಸ ಜಯಂತಿ, **ಶ್ರೀನರಸಿಂಹ ಜಯಂತಿ,** ಪ್ರದೋಷ ಕಾಲದಲ್ಲಿ ಶ್ರೀನರಸಿಂಹದೇವರನ್ನು ಪೂಜಿಸಿ –

**ಶ್ಲೋಕ:– ಪರಿತ್ರಾಣಾಯ ಸಾಧೂನಾಂ ಧ್ಯಾತೋ ವಿಷ್ಣುರ್ನೃಕೇಸರೀ।**
**ಗೃಹಾಣಾರ್ಘ್ಯಂ ಮಯಾ ದತ್ತಂ ಸಲಕ್ಷ್ಮೀನೃಹರೇ ಸ್ವಯಮ್॥** – ಎಂದು ಅರ್ಘ್ಯವನ್ನು ಕೊಡಬೇಕು–ನೃಸಿಂಹಾರ್ಘ್ಯ ಮಂತ್ರ.

12.05.25 ವ್ಯಾಸಪೂಜೆ, ಶ್ರೀಮದ್ಭಾಗವತದಲ್ಲಿನ ಯಾವುದಾದರೊಂದು ಭಾಗವನ್ನು ಅನುವಾದ ಮಾಡಿಸಿ ಶ್ರೀವೇದವ್ಯಾಸರ ಪೂಜೆಯನ್ನು ಮಾಡಿ ಬ್ರಾಹ್ಮಣಸುವಾಸನೀ ಸಮಾರಾಧನೆಯನ್ನು ಪ್ರತಿಯೊಂದು ತಿಂಗಳಲ್ಲಿ ಬರುವ ವ್ಯಾಸಪೂರ್ಣಿಮೆಯಂದು ಆಚರಿಸಬೇಕು. ಪೌರ್ಣಮಿಯ ದಿನ ಕೃಷ್ಣಾಜಿನ ದಾನದಿಂದ ಭೂದಾನ ಫಲ. ಅಶಕ್ತರು ಗೋಪೀಚಂದನ ದಾನದಿಂದ ಭೂದಾನ ಫಲವನ್ನು ಹೊಂದಬಹುದು.

ಇಂದಿನಿಂದ ಜ್ಯೇಷ್ಠ ಶುಕ್ಲಪೂರ್ಣಿಮಾವರೆಗೆ ಜಲಸ್ಥವಿಷ್ಣು ಪೂಜೋತ್ಸವ, ವ್ಯಜನ, ಛತ್ರಂ, ಗುಡೋದಕಾದಿ ದಾನ, ಅನ್ವಾಧಾನ, ಶೃತಾನ್ನ, ದಧ್ಯನ್ನ, ಉದಕುಂಭದಾನ, ತಿಲದಿಂದಸ್ನಾನ, ತರ್ಪಣ, ದೀಪ, ನೈವೇದ್ಯ, ಹೋಮ, ದಾನ, ಪೂಜೆ, ವೈಶಾಖ ಸ್ನಾನ ಸಮಾಪ್ತಿ, ವಸಂತ ಪೂಜ ಸಮಾಪ್ತಿ, ವ್ಯಾಸಪೂರ್ಣಿಮ, ಆಗಿ ಹುಣ್ಣಿಮೆ, ವಿಷ್ಣುಪಂಚಕೋಪವಾಸ.

**ಓಂ ಜಯತ್ಯಜೋಽಖಂಡಗುಣೋರುಮಂಡಲಃ।**
**ಸದೋದಿತೋ ಜ್ಞಾನಮರೀಚಿಮಾಲೀ॥**
**ಸ್ವಭಕ್ತ ಹಾರ್ದೋಚ್ಚತಮೋ ನಿಹಂತಾ।**
**ವ್ಯಾಸಾವತಾರೋ ಹರಿರಾತ್ಮಭಾಸ್ಕರಃ॥**

ವೈಶಾಖ–ಜ್ಯೇಷ್ಠ ಮಾಸಗಳ ದಶಮೀ–ದ್ವಾದಶೀ–ಪೌರ್ಣಮೀ ದಿನ (ಸಂಜೆ)ಗಳಲ್ಲಿ ಫಲಹಾರಪೂಜೆ ಮಾಡಿಸುವ ಸಂಪ್ರದಾಯವಿದೆ.

13.05.25 ಪೂರ್ಣಿಮಾಸೀಷ್ಟಿ.

14.05.25 ವೃಷಭ ಸಂಕ್ರಮಣ.

19.05.25 ವಿಷ್ಣುಪಂಚಕೋಪವಾಸ, ಧನಿಷ್ಠಾಪಕಾರಂಭ.

27.05.25 ಶನೈಶ್ಚರಜಯಂತಿ, ಭಾವುಕದಿನ, ದರ್ಶ, ಅನ್ವಾಧಾನ, ವೈಶ್ವದೇವ, ಬಲಿಹರಣ, ಪಿಂಡಪಿತೃಯಜ್ಞ, ವಿಷ್ಣುಪಂಚಕೋಪವಾಸ, ಭಾವುಕಾಮಾವಾಸ್ಯೆ, ಧನಿಷ್ಠಾನವಕಸಮಾಪ್ತಿ.

## ಜ್ಯೇಷ್ಠ ಮಾಸ

28.05.25 ದಶಹರವ್ರತಾರಂಭ, ಕಾಶಿಯ ದಶಾಶ್ವಮೇಧಾ ಘಾಟಿಯಲ್ಲಿ ಗಂಗಾವಾಸಿಗಳು ದಶಹರವ್ರತ ಆಚರಿಸುವರು. ಅದರಂತೆ ಇತರ ನದಿಗಳಲ್ಲಿಯೂ ಆಚರಿಸಬೇಕು. ಕರವೀರವ್ರತ.

29.05.25 ರಂಭಾ ವ್ರತ.

30.05.25 ಉಮಾವತಾರ ಸ್ತ್ರೀಯರಿಂದ ಉಮಾಪೂಜೆ.

03.06.25 ದುರ್ಗಾಷ್ಟಮಿ, ಶುಕ್ಲಾದೇವಿಪೂಜಾ.

05.06.25 ಆರ್ಯಮಾನ ದಶಮೀ 59ಘ.8ಫ, ದಶಹರವ್ರತ ಸಮಾಪ್ತಿ, ಭಗೀರಥಯತ್ನದಿಂದ ಗಂಗೆ ಭೂಮಿಗೆ ಬಂದ ದಿನ ಗಂಗಾಪೂಜೆ.

**ಶ್ಲೋಕ: ಜ್ಯೇಷ್ಠಮಾಸೇ ಸಿತೇ ಪಕ್ಷೇ ದಶಮ್ಯಾಂ ಬುಧಹಸ್ತಯೋಃ।**
**ವ್ಯತೀಪಾತೇ ಗರಾನಂದೇ ಕನ್ಯಾಚಂದ್ರೇ ವೃಷೇ ರವೌ॥**

ಗಂಗಾವತರಣವಾದ ದಿನ 10 ಯೋಗಗಳಿದ್ದವು, ಈ ವರ್ಷ 6 ಯೋಗಗಳು ಇದೆ.

08.06.25 ಸಾಧನಾ ದ್ವಾದಶೀ, ಪಾರಣೆ ಬೆಳಿಗ್ಗೆ 6–44ನಿ.ದೊಳಗೆ, ಶ್ರೀತ್ರಿವಿಕ್ರಮಪೂಜಾ, ಶರ್ಕರೋದಕುಂಭ ದಾನ, ಭಾನುಪ್ರದೋಷ,

**ಶ್ಲೋಕ: ತ್ರಯೋದಶಿ ದೇವದೇವ ಹೃಷಿಕೇಶ ಸಂಸಾರಾರ್ಣವತಾರಕಮ್ ।**
**ಉದಕುಂಭ ಪ್ರದಾನೇನ ಯಾಸ್ಯಾಮಿ ಪರಮಾಂ ಗತಿಮ್ ॥**

(ಈ ಮಂತ್ರದಿಂದ ಸಕ್ಕರೆ – ಸುವರ್ಣಯುತವಾದ ಉದಕುಂಭದಾನ ಮಾಡಬೇಕು) ಫಲಹಾರ ಪೂಜೆ ಸಂಕಲ್ಪ :– ಶುಭೇ ಶೋಭನೇ ಮುಹೂರ್ತೇ ಶ್ರೀವಸಂತ ಮಾಧವ – ವೈಶಾಖ ಮಧುಸೂದನ – ಜ್ಯೇಷ್ಠ ಶ್ರೀತ್ರಿವಿಕ್ರಮ ಪ್ರೇರಣಯಾ ಪ್ರೀತ್ಯರ್ಥಂ ದೇವ – ಋಷಿ – ಪಿತೃ–ಯಮಧರ್ಮರಾಜಾಂತರ್ಗತ ಶ್ರೀವಿಷ್ಣು ಪ್ರೀತ್ಯರ್ಥಂ ಬ್ರಾಹ್ಮಣ ಸುವಾಸೀನಾಂ ಗುಡೋದಕ ದಾನಾನಿ ಕರಿಷ್ಯೆ. (ಇತಿ ಸಂಕಲ್ಪಃ) ಬ್ರಾಹ್ಮಣ–ಸುವಾಸಿನಿಯರಿಗೆ ಫಲಹಾರಪೂಜೆ ಮಾಡಿಸಿ ತಾಂಬೂಲ ವಸ್ತ್ರಾದಿ ದಾನಗಳಿಂದ ತೃಪ್ತಿ ಪಡಿಸಿ ಶ್ರೀಕೃಷ್ಣಾರ್ಪಣವೆನ್ನಬೇಕು.

**09, 10 ಮತ್ತು 11.06.25 ರಂದು ಶ್ರೀ ಶ್ರೀಪಾದರಾಜರ ಆರಾಧನೆ.** ಶುಕ್ಲ ಅಂಗಾರಕಚತುರ್ದಶೀ, ಸುವರ್ಣಾನದಿಸ್ನಾನದಿಂದ ವಿಶೇಷ ಫಲ, ವಟಸಾವಿತ್ರೀ ಪೂಜಾ ಕಥಾ.

11.06.25 ಭೌಚ್ಚಕಸಾವರ್ಣಿ ಮನ್ವಾದಿ, ಪಾದುಕಾ ಛತ್ರದಾನ, ಅನಡ್ವಾಹ ಪೂರ್ಣಿಮಾ, ತಿಲದಾನದಿಂದ ಅಶ್ವಮೇಧಫಲಂ, ಕಾರಹುಣ್ಣಿಮೆ, ವಿಷ್ಣುಪಂಚಕೋಪವಾಸ.

12.06.25 ಪೂರ್ಣಿಮಾಸೀಷ್ಟಿ.

14.06.25 ಗುರ್ವಸ್ತ.

15.06.25 ಮಿಥುನ ಸಂಕ್ರಮಣ.

21.06.25 ದಶಮೀ ಅನುಷ್ಠಾನ, ಹರಿವಾಸರ ರಾತ್ರಿ 8–11 ನಿಮಿಷದಿಂದ.

24.06.25 ಕೃಷ್ಣ ಅಂಗಾರಕಚತುರ್ದಶೀ, ಸುವರ್ಣಾನದಿಸ್ನಾನ ವಿಶೇಷ ಫಲ, ಯಮತರ್ಪಣ, ಕಾತ್ಯಾಯನಾನಾಂ ಪಿಂಡಪಿತೃಯಜ್ಞ.

25.06.25 ಮಣ್ಣೆತ್ತಿನ ಅಮಾವಾಸ್ಯೆ, ಬಲಕರಿಂದ ಮಣ್ಣೆತ್ತಿನ ಪೂಜೆ, ಅನ್ವಾದಾನ, ದರ್ಶ, ವೈಶ್ವದೇವ, ಬಲಿಹರಣ, ಪಿಂಡ ಪಿತೃಯಜ್ಞ, ವಿಷ್ಣುಪಂಚಕೋಪವಾಸ.

## ಆಷಾಢ ಮಾಸ

02.07.25 ವೈವಸ್ವತ ಸೂರ್ಯ ಪೂಜಾ. ಭಾನು ಸಪ್ತಮೀ.

05.07.25 ಚಾಕ್ಷುಷಮನ್ವಾದಿ.

06.07.25 ಸುದರ್ಶನಹೋಮ, ತಪ್ತಮುದ್ರಾಧಾರಣೆ, ಚಾತುರ್ಮಾಸ ವ್ರತಾರಂಭ. ಇಂದಿನಿಂದ ಒಂದು ತಿಂಗಳು ತರಕಾರಿ, ತೆಂಗು, ಬಾಳೆ, ಸುಗಂಧ ದ್ರವ್ಯ ಇತ್ಯಾದಿಗಳು ನೈವೇದ್ಯ-ಹಸ್ತೋದಕಗಳಿಗೆ ಬರುವುದಿಲ್ಲ.

**ಚಾತುರ್ಮಾಸ್ಯ ಸಂಕಲ್ಪ:** ಪ್ರಥಮೇಕಾದಶಿ ಗುರುಗಳಿಂದ ತಪ್ತಮುದ್ರಾಧಾರಣ ಮಾಡಿಸಿಕೊಂಡು ದೇವರಿಗೆ ಪೂಜೆಸಲ್ಲಿಸಿ ಸಂಕಲ್ಪ ಮಾಡಬೇಕು. ಗೋಪದ್ಮ ವ್ರತ.

**ಸುಪ್ತೇ ತ್ವಯಿ ಜಗನ್ನಾಥ ಜಗತ್ಸುಪ್ತಂ ಭವೇದಿದಮ್ ।**
**ವಿಬುದ್ಧೇ ಚ ವಿಬುಧ್ಯೇತ ಪ್ರಸನ್ನೋ ಮೇ ಭವಾಚ್ಯುತ ॥**

(ಎಂಬ ಮಂತ್ರದಿಂದ ಕೈಜೋಡಿಸಿ ಪ್ರಾರ್ಥನೆ ಮಾಡಬೇಕು) **ಚತುರೋವಾರ್ಷಿಕಾನ್ ಮಾಸಾನ್ ದೇವಸ್ತೋತ್ಥಾಪ। ಶ್ರಾವಣೇ ವರ್ಜಯೇ ಶಾಕಂ ದಧಿ ಭಾದ್ರಪದೇತಥಾ। ದುಗ್ಧಮಾಶ್ವಯುಜೇ ಮಾಸಿ ಕಾರ್ತಿಕೇ ದ್ವಿದಲಂತಥಾ। ಇಮಂ ಕರಿಷ್ಯೇ ನಿಯಮಂ ನಿರ್ವಿಘ್ನಂ ಕುರು ಮೇಽಚ್ಯುತ॥ ಇದಂ ವ್ರತಂ ಮಯಾ ದೇವ ಗೃಹೀತಂ ಪುರತಸ್ತವ। ನಿರ್ವಿಘ್ನಂ ಸಿದ್ಧಿಮಾಯಾತು ಪ್ರಸಾದಂ ಕುರು ಕೇಶವ॥ ಗೃಹಿ ತೇಽಸ್ಮಿನ್ ವ್ರತೇ ದೇವ ಪಂಚತ್ವಂ ಯದಿ ಮೇ ಭವೇತ್। ತದಾಭವತು ಸಂಪೂರ್ಣಂ ಪ್ರಸಾದಾತ್ತೇ ಜನಾರ್ದನ॥** (ಎಂಬ ಮಂತ್ರವನ್ನು ಉಚ್ಚರಿಸಿ ಶಂಖದಿಂದ ದೇವರಿಗೆ ಅರ್ಘ್ಯ ಕೊಡಬೇಕು) ಹೀಗೆ ಚಾತುರ್ಮಾಸ್ಯ ವ್ರತ ಸಂಕಲ್ಪಮಾಡಿ ದೇವರನ್ನು ತೊಟ್ಟಲಲ್ಲಿಟ್ಟು ಪೂಜಿಸಬೇಕು. ಆಷಾಢ ಶುದ್ಧ ಪೌರ್ಣಮಿ ಅಥವಾ ಸಂಪ್ರದಾಯ ಪ್ರಕಾರ ಯತಿಗಳು ಚಾತುರ್ಮಾಸ್ಯ ವ್ರತಕ್ಕೆ ಕೂಡುವಾಗ ಸಂಕಲ್ಪ ಮಾಡಿ ಶ್ರೀವೇದವ್ಯಾಸರ ಪೂಜೆ, ಭಾಷ್ಯಕಾರ ಟಿಪ್ಪಣಿಕಾರರ ಪೂಜೆ, ಸ್ವಗುರು ಪೂಜೆ ಮಾಡಿ ಗೃಹಸ್ಥಮಹಾಜನಗಳ ಪ್ರಾರ್ಥನೆಯನ್ನು ಮಾನ್ಯಮಾಡಿ ಅವರಿಗೆ ಅನುಗ್ರಹ ಮಾಡಲಿಕ್ಕೆ ಮಂತ್ರ:

**ಅಹಂ ತಾವನ್ನಿವತ್ಸ್ಯಾಮಿ ಸರ್ವಭೂತಹಿತಾಯ ವೈ।**
**ಪ್ರಾಯೇಣ ಪ್ರಾವೃಷಿ ಪ್ರಾಣಿಸಂಕುಲಂ ವರ್ತ್ಮ ದೃಶ್ಯತೇ।**
**ಅತಸ್ತೇಷಾಮಹಿಂಸಾರ್ಥಂ ಪಷಾನ್ವೈ ಶ್ರುತಿಸಂಶ್ರಯಾನ್॥**

(ಎಂದು ಹೇಳಬೇಕು) ಗೃಹಸ್ಥರು- **ನಿವಸಂತು ಸುಖೇನಾತ್ರಗಮಿಷ್ಯಾಮಃ ಕೃತಾರ್ಥತಾಮ್। ಯಥಾಶಕ್ತಿ ಚ ಶುಶ್ರೂಷಾಂ ಕರಿಷ್ಯಾಮೋ ವಯಂ ಮುದಾ॥** (ಎಂದು ಗೃಹಸ್ಥರು ಪ್ರಾರ್ಥಿಸಬೇಕು). ಶ್ರೀಗುರುಗಳವರು ತಮ್ಮ ಗುರುಪರಂಪರಾದವರ ಆಜ್ಞೆ ಪಡೆದು ಮಠದ ಸಂಪ್ರದಾಯ ಪ್ರಕಾರ ಮೃತ್ತಿಕಾ, ದಂತಕಾಷ್ಠ, ಕೌಪೀನ, ನೂತನ ಶಾಟಿ ವಸ್ತ್ರಾದಿಗಳು ತೆಗೆದು-ಕೊಂಡು ಗುರು ಪರಂಪರೆಯವರಿಗೆ ಅರ್ಘ್ಯಕೊಟ್ಟು, ನಮಸ್ಕರಿಸಿ, ತಾವೂ ಅರ್ಘ್ಯ ಬಿಟ್ಟು ಭಿಕ್ಷಾಸ್ವೀಕರಿಸಿ ನಮಸ್ಕಾರವನ್ನು ಮಾಡಿ ಸಂಕಲ್ಪಕ್ಕೆ ಕೂಡಬೇಕು.

07.07.25 ಶ್ರೀವಾಮನ ಪೂಜೆ, ಸೂತಪುರಾಣಿಕರ ಪುಣ್ಯದಿನ.

10.07.25 ತಾಪಸಮನ್ವಾದಿ, ಕೋಕಿಲಾವ್ರತ, ವ್ಯಾಸಪೂರ್ಣಿಮಾ, ಮೃತ್ತಿಕಾಸಂಗ್ರಹಣೋತ್ಸವ, ಅನ್ವಾಧಾನ, ವಿಷ್ಣುಪಂಚಕೋಪವಾಸ.

12.07.25 ಅಶೂನ್ಯಶಯನವ್ರತ.

13.07.25 ವಿಷ್ಣುಪಂಚಕೋಪವಾಸವಿಲ್ಲ.

16.07.25 ಕರ್ಕ ಸಂಕ್ರಮಣ, ಕರ್ಕಸಂಕ್ರಮಣ ಪ್ರಯುಕ್ತ ಮಧ್ಯಾಹ್ನ 12.20ನಿ.ದಿಂದ ಸೂರ್ಯಾಸ್ತದವರೆಗೆ ದಕ್ಷಿಣಾಯಣ ಪರ್ವಪುಣ್ಯಕಾಲ.

17.07.25 ದಕ್ಷಿಣಾಯನ ಆರಂಭ, ಕಾಲಾಷ್ಟಮೀ.

24.07.25 ನಾಗನ ಭೀಮನ ಅಮಾವಾಸ್ಯೆ, ದಿವಸೀ ಅಮಾವಾಸ್ಯೆ, ವಿಷ್ಣುಪಂಚಕೋಪವಾಸ, ನವವಧುಗಳಿಂದ 5ವರ್ಷ ಮಂಗಳ ಗೌರೀವ್ರತ, ದೀಪಸ್ಥಂಭ, ಗೌರಿವ್ರತ.

**ಆಷಾಢ ಬಹುಳ ದ್ವಿತೀಯ:** – ಈ ದಿನ ಚಂದ್ರೋದಯ ಕಾಲದಲ್ಲಿ ಶ್ರೀಲಕ್ಷ್ಮೀನಾರಾಯಣ ಅಥವಾ ಶ್ರೀಲಕ್ಷ್ಮೀನರಸಿಂಹ ಪ್ರತಿಮೆಯನ್ನು ನೂತನ ಹಾಸಿಗೆಯಲ್ಲಿಟ್ಟು ಪೂಜಿಸಿ.

**ಪತ್ನ್ಯು ಭರ್ತುರ್ವಿಯೋಗಂ ಚ ಭರ್ತಾಭಾರ್ಯಾಸಮುದ್ಭವಂ।**
**ನಾಪ್ನುವಂತಿ ಯಥಾ ದುಃಖಂ ದಾಂಪತ್ಯಾನಿ ತಥಾ ಕುರು॥**

ಎಂಬ ಮಂತ್ರದಿಂದ ದೇವರಿಗೆ ಮತ್ತು ಚಂದ್ರನಿಗೆ ಅರ್ಘ್ಯವನ್ನು ಕೊಟ್ಟು ರಾತ್ರಿಯ ಭೋಜನ ಮಾಡಬೇಕು. ಇವತ್ತಿನಿಂದ ಆರಂಭಿಸಿ ಮುಂದೆ ಶ್ರಾವಣ–ಭಾದ್ರಪದ ಮಾಸಗಳಲ್ಲಿ ದೇವರನ್ನು ಪೂಜಿಸಿ ಕೊನೆಗೆ ಆಶ್ವಯುಜ ಬಹುಳ ಬಿದಿಗೆ ರಾತ್ರಿ ಬ್ರಾಹ್ಮಣದಂಪತಿಗಳಿಗೆ ಹಾಸಿಗೆಯೊಡನೆ ಲಕ್ಷ್ಮೀನಾರಾಯಣ ಪ್ರತಿಮೆಯನ್ನು ದಾನಕೊಟ್ಟು ಭೋಜನದಿಂದ ತೃಪ್ತಿ ಪಡಿಸಬೇಕು. ಹೀಗೆ ಮಾಡುವುದರಿಂದ ದಾಂಪತ್ಯ ಸುಖವು ಏಳು ಜನ್ಮಗಳವರೆಗೆ ಅಖಂಡವಾಗಿರುತ್ತದೆ.

## ಶ್ರಾವಣ ಮಾಸ

25.07.25 ಈ ಮಾಸದಲ್ಲಿ ನಕ್ತವ್ರತ, ಏಕಭುಕ್ತವ್ರತ, ಮಾಸ ಮಹಾಲಕ್ಷ್ಮೀಸ್ಥಾಪನೆ, ಪ್ರತಿಶನಿ–ರವಿವಾರಗಳಲ್ಲಿ ಹನುಮಂತ, ಅಶ್ವತ್ಥನರಸಿಂಹ, ಲಕ್ಷ್ಮೀಪೂಜೆ, ದರ್ಶೇಷ್ಟಿ.

26.07.25 ಚಂದ್ರದರ್ಶನ.

28.07.25 ದೂರ್ವಾಗಣೇಶವ್ರತ, ವಿನಾಯಕ ನಾಗಚತುರ್ಥಿ ಗಣೇಶನಿಗೆ ಪವಿತ್ರಾರೋಪಣೆ, ನಾಗರಚೌತಿ, **ತತ್ ಪುರುಷಾಯ ವಿದ್ಮಹೇ ಸಹಸ್ರ ಫಣಾಯ ಧೀಮಹಿ। ತನ್ನೋ ಶೇಷಃ ಪ್ರಚೋದಯಾತ್॥ ಸಹಸ್ರ ವಕ್ತ್ರಂ ದ್ವಿಸಹಸ್ರ ಜಿಹ್ವಂ ಪಿಶಂಗನೇತ್ರಮ್, ಕಪಿಲಾಂ ಶುಕಾದ್ಯಮ್। ವಿಷಾಯುಧಂ ಪ್ರೋಜ್ವಲ ದಂಷ್ಟ್ರ ಬಾಹುಂ ತಂ ನಾಗರಾಜಂ ಪ್ರಣತೋಽಸ್ಮಿ ವಿಶ್ವಮ್॥**

29.07.25 ನಾಗರ ಪಂಚಮಿ, ಗರುಡ ಪಂಚಮಿ, **ತತ್ಪುರುಷಾಯ ವಿದ್ಮಹೇ ಸುವರ್ಣ ಪಕ್ಷಾಯ ಧೀಮಹಿ। ತನ್ನೋ ಗರುಡಃ ಪ್ರಚೋದಯಾತ್॥ ಸುಪರ್ಣಂ ವೈನತೇಯಂ ಚ ನಾಗಾರಿಂ ನಾಗಭೂಷಣಮ್। ವಿಷಾಂತಕಂ ಶಶಾಕಂಚ ಆದಿತ್ಯಂ ವಿಶ್ವತೋಮುಖಮ್। ಗರುತ್ಮಂತಂ ಖಗಪತಿಂ ತಾರ್ಕ್ಷ್ಯಂ ಕಶ್ಯಪನಂದನಮ್ ದ್ವಾದಶೈತಾನಿ ನಾಮಾನಿ ಗರುಡಸ್ಯ ಮಹಾತ್ಮನಃ। ಯಃ ಪಠೇತ್ಪ್ರಾತರುತ್ಥಾಯ ಸರ್ವತ್ರ ವಿಜಯೀಭವೇತ್॥**

30.07.25 ಶಿರಯಾಳಷಷ್ಠೀ, **ಮರ್ಹ್ಯಾಲಯೇಷ್ವಪಿ ಸಂತಾನ ಹರೇಕಥಾಃ ಸ್ಯುಃ ಪಾಖಂಡಿನೋ ಸ್ವಜನಾವೃಥಾ, ಲಾನ್ಯದೇವಾಃ ಸ್ವಾಹಾ ಸ್ವಧಾವಷಡಿತಿಸ್ಮಗಿರೋ ಕಲೇರ್ಭಗವಾನ್ ಯುಗಾಂತೇ,** ಕಲ್ಕಿ ಜಯಂತೀ, ಬುಧಬೃಹಸ್ಪತಿ ಪೂಜಾ.

31.07.25 ಶೀತಲಾಸಪ್ತಮೀ ಶ್ರಾವಣ ಶುಕ್ಲ ಸಪ್ತಮಿಯಂದು ಭಾನುಸಪ್ತಮಿ, ಮೌನದಿಂದ ಸೂರ್ಯಪೂಜೆ.

**ಶೀತಲೇ ತ್ವಂ ಜಗನ್ಮಾತಾ ಶೀತಲೇ ತ್ವಂ ಜಗತ್ಪಿತಾ।**
**ಶೀತಲೇ ತ್ವಂ ಜಗದ್ಧಾತ್ರೇ ಶೀತಲಾಯೈನಮೋನಮಃ॥**
**ಭಾನುದೇವ ನಮಸ್ತುಭ್ಯಂ ಪ್ರಸೀದ ಮಮ ಭಾಸ್ಕರ**
**ದಿವಾಕರ ನಮಸ್ತುಭ್ಯಂ ಪ್ರಭಾಕರ ನಮೋಽಸ್ತುತೇ॥**

05.08.25 ಶಾಕವ್ರತ ಸಂಪೂರ್ಣ ಫಲಕ್ಕಾಗಿ ಶಾಕದಾನ ಮಂತ್ರ: **ಉಪಾಯನಮಿದಂ ದೇವ ವ್ರತ ಸಂಪೂರ್ತಿಹೇತವೇ। ಶಾಕಂ ತು ದ್ವಿಜವರ್ಯಾಯ ಸಹಿರಣ್ಯಂ ದದಾಮ್ಯಹಮ್॥** ಎಂದು ಶಾಕದಾನ ಮಾಡಬೇಕು. ಈ ದಿನ ದಧಿವ್ರತ ಸಂಕಲ್ಪ :- **ದಧಿ ಭಾದ್ರಪದೇ ಮಾಸೇ ವರ್ಜಯಿಷ್ಯೇ ಸದಾಹರೇ। ಇಮಂ ಕರಿಷ್ಯೇ ನಿಯಮಂ ನಿರ್ವಿಘ್ನಂ ಕುರು ಕೇಶವ** ॥ ಎಂದು ಸಂಕಲ್ಪ ಮಾಡಿ ಈ ಮಾಸದಿಂದ ಭಾದ್ರಪದ ಶುದ್ಧ ದಶಮಿ ಪರ್ಯಂತ ಮೊಸರನ್ನು ಬಿಡಬೇಕು.

06.08.25 ವಿಷ್ಣು ಪವಿತ್ರಾರೋಪಣೆ, ಪ್ರದೋಷ, ಬುಧ ಬೃಹಸ್ಪತಿಪೂಜಾ. ಪವಿತ್ರದ್ವಾದಶೀ.

**ಪವಿತ್ರ ದೋರಬಂಧನ** – ಪವಿತ್ರ ಸಮರ್ಪಣೆಯನ್ನು ಅಗತ್ಯವಾಗಿ ಮಾಡಬೇಕು. ಆದ್ದರಿಂದ ಇಡೀ ವರ್ಷ ಮಾಡಿದ ಪೂಜೆಗೆ ಪೂರ್ಣತೆಯು ಬರುತ್ತದೆ. ಇಲ್ಲದಿದ್ದರೆ ಇಡೀ ವರ್ಷಪೂರ್ಣ ಮಾಡಿದ ಪೂಜೆ ನಿಷ್ಫಲವಾಗುವುದು.

3 ನೂಲಿನ 1 ದಾರವನ್ನು 3 ಪಟ್ಟು ಮಾಡಬೇಕು. (ಎತ್ತರವಾದ) ಪ್ರತಿಮೆಯ ಪಾದದವರೆಗೆ ಇದ್ದರೆ ಉತ್ತಮ. ಮೊಣ ಕಾಲಿನವರೆಗೆ ಮಧ್ಯಮ, ನಾಭಿಯವರೆಗೆ ಅಧಮ, 108 ದಾರಗಳು ಇರಬೇಕು. 36 ಗಂಟುಗಳು ಉತ್ತಮ, 24 ಮಧ್ಯಮ, 12 ಅಧಮ, ರೇಶ್ಮೆಯ ದಾರವಿದ್ದರೆ ಉತ್ತಮ. ಹತ್ತಿದಾರದಿಂದಲೂ ಮಾಡಬಹುದು. ಏಕಾದಶೀ ದಿನ ಬಿದಿರಿನ ಬುಟ್ಟಿಯಲ್ಲಿ ಇಟ್ಟು ಪವಿತ್ರವನ್ನು **'ದೇವಸ್ಯತ್ವಾ ಸವಿತುಃ ಪ್ರಸವೇಽಶ್ವಿನೋರ್ಬಾಹುಭ್ಯಾಂ ಪೂಷ್ಣೋ ಹಸ್ತಾಭ್ಯಾಮ್'**ಎಂಬ ಮಂತ್ರದಿಂದ ಮೂರು ಬಾರಿ ಪ್ರೋಕ್ಷಿಸಬೇಕು. **ಯೇನ ದೇವಾಃ ಪವಿತ್ರೇಣಾತ್ಮಾನಂ ಪುನತೇ ಸದಾ। ತೇನ ಸಹಸ್ರಧಾರೇಣ ಪಾವಮಾನ್ಯಃ ಪುನಂತು ಮಾಮ್। ಪ್ರಾಜಾಪತ್ಯಂ ಪವಿತ್ರಂ ಶತೋದ್ಯಾಮಂ ಹಿರಣ್ಮಯಮ್। ತೇನ ಬ್ರಹ್ಮವಿದೋ ವಯಮ್ ಪೂತಂ ಬ್ರಹ್ಮ ಪುನೀಮಹೇ॥ ಎಂದು ಅಭಿಮಂತ್ರಿಸಿ, ನಾರಾಯಣಂ ಆವಾಹಯಾಮಿ। ವಾಸುದೇವಂ... ವಿಷ್ಣು... ಕೇಶವಂ... ನಾರಾಯಣಂ... ಕೃಷ್ಣಂ ಅವಾಹಯಾಮಿ** ಎಂದು ದಾರಗಳಲ್ಲಿ ಭಗವನ್ಮೂರ್ತಿಗಳನ್ನು ಆವಾಹಿಸಬೇಕು. ಗಂಟುಗಳಲ್ಲಿ **ವಿಶ್ವಂ, ತೈಜಸಂ, ಪ್ರಾಜ್ಞಂ, ತುರೀಯಂ, ಆತ್ಮಾನಂ. ಅಂತರಾತ್ಮಾನಂ, ಜ್ಞಾನಾತ್ಮಾನಂ, ಪರಮಾತ್ಮಾನಂ, ವಾಸುದೇವಂ, ಸಂಕರ್ಷಣಂ, ಪ್ರದ್ಯುಮ್ನಂ, ಅನಿರುದ್ಧಂ, ವಾಯುಗಂ ಪ್ರದ್ಯುಮ್ನಂ, ಸೂರ್ಯಸ್ಥಂ ಸಂಕರ್ಷಣಂ ಆವಾಹಯಾಮಿ, ಎಲ್ಲ ಆ ದಾರಗಳಲ್ಲಿ ಪ್ರಜಾಪತಿಗಂ ವಾಸುದೇವಂ ಆವಾಹಯಾಮಿ** ಎಂದು ಆವಾಹಿಸಿ ಷೋಡಶೋಪಚಾರ ಪೂಜೆಯನ್ನು ಮಾಡಬೇಕು.

**ಪ್ರಾರ್ಥನೆ : ಆಮಂತ್ರಿತೋಽಸಿ ದೇವೇಶ ಪುರಾಣಪುರುಷೋತ್ತಮ। ಪ್ರಾತಸ್ತ್ವಾ ಪೂಜಯಿಷ್ಯಾಮಿ ಸಾನ್ನಿಧ್ಯಂ ಕುರು ಕೇಶವ॥** (ಇದಕ್ಕೆ ಅಧಿವಾಸನ ಎನ್ನುತ್ತಾರೆ) ದ್ವಾದಶೀ ದಿನ ಪೂಜೆಯ ವೇಳೆಗೆ ಸಿದ್ಧಪಡಿಸಿದ ಪವಿತ್ರಗಳನ್ನು, **ದೇವ ದೇವ ನಮಸ್ತುಭ್ಯಂ ಪವಿತ್ರಂ ಪೂತಮುತ್ತಮಮ್। ಗೃಹೀತ್ವಾ ವಾರ್ಷಿಕೀಂ ಪೂಜಾಂ ಭಗವನ್ ಪರಿಪೂರಯ॥** ಎಂದು ಪ್ರಾರ್ಥಿಸಿ, **'ಅತೋ ದೇವಾ ಆವಂತು ನೋ ಯತೋ ವಿಷ್ಣುರ್ವಿಚಕ್ರಮೇ। ಪೃಥಿವ್ಯಾಃ ಸಪ್ತಧಾಮಭಿಃ'** ಎಂಬ ಮಂತ್ರದಿಂದ ಸಮರ್ಪಣೆ ಮಾಡಬೇಕು. ಆಮೇಲೆ ಅರ್ಚನೆ ಮಂಗಳಾರತಿಯನ್ನು ಮಾಡಿ ಆ ಪವಿತ್ರವನ್ನು ಲಕ್ಷ್ಮೀದೇವಿ, ವಾಯುದೇವರೇ ಮೊದಲಾದ ದೇವತೆಗಳಿಗೆ ಸಮರ್ಪಿಸಿ ಅದನ್ನು ತಾನು ಧರಿಸಬೇಕು.

**ಧಾರಣ ಮಂತ್ರ :–**

**ಪವಿತ್ರಂ ವೈಷ್ಣವಂ ತೇಜಃ ಸರ್ವ ವಿಘ್ನನಿವಾರಣಮ್।**
**ಪೂಜಾಷಾಡ್ಗುಣ್ಯ ಸಿಧ್ಯರ್ಥಂ ಮಮಾಂಗೇ ಧಾರಯಾಮ್ಯಹಮ್॥**

08.08.25 ವರಮಹಾಲಕ್ಷ್ಮೀ ವ್ರತಃ, **ಯಾ ಸಾ ಪದ್ಮಾಸನಸ್ಥಾ ವಿಪುಲಕಟಿತಟೀ ಪದ್ಮಪತ್ರಾಯತಾಕ್ಷೀ । ಗಂಭಿರಾವರ್ತನಾಭಿ ಸ್ತನಭರನಮಿತಾ ಶುಭ್ರವಸ್ತ್ರೋತ್ತರೀಯಾ । ಲಕ್ಷ್ಮೀರ್ದಿವ್ಯೈರ್ಗಜೇಂದ್ರೈ ಮಣಿಗಣಖಚಿತೈಃ ಸ್ನಾಪಿತಾ ಹೇಮಕುಂಭೈಃ । ನಿತ್ಯಂ ಸಾ ಪದ್ಮಹಸ್ತಾ ಮಮ ವಸತು ಗೃಹೇ ಸರ್ವ ಮಾಂಗಲ್ಯಯುಕ್ತಾ॥ ಸಿದ್ಧಲಕ್ಷ್ಮೀರ್ಮೋಕ್ಷಲಕ್ಷ್ಮೀರ್ಜಯಲಕ್ಷ್ಮೀಃ ಸರಸ್ವತೀ। ಶ್ರೀಲಕ್ಷ್ಮೀರ್ವರಲಕ್ಷ್ಮೀಶ್ಚ ಪ್ರಸನ್ನಾ ಮಮ ಸರ್ವದಾ॥**

09.08.25 ಋಗ್ವೇದ/ಯಜುರ್ವೇದ ನಿತ್ಯ–ನೂತನ ಉಪಾಕರ್ಮ, ಅನ್ವಾಧಾನ, ಕುಲಧರ್ಮ, ಹಯಗ್ರೀವ ಜಯಂತಿ, ರಕ್ಷಾಬಂಧನ, ನೂಲಹುಣ್ಣಿಮೆ. ಶ್ಯಾಮಾಕಾಗ್ರಯಣ, ಶ್ರೀವಿಷ್ಣುವಿಗೆ ಸರ್ವದೇವತೆಗಳಿಗೆ ಪವಿತ್ರಾರೋಪಣ.

**11.08.25 ಶ್ರೀ ರಾಘವೇಂದ್ರಸ್ವಾಮಿಗಳ ಆರಾಧನೆ.**

16.08.25 ಗೋಕುಲಾಷ್ಟಮಿ ಶ್ರೀಕೃಷ್ಣ ಜಯಂತಿ, ರಾತ್ರಿ 11.50ನಿ. ಚಂದ್ರೋದಯಕ್ಕೆ ಅರ್ಘ್ಯ – ನಿಯಮ ಸ್ವೀಕಾರ ಮಂತ್ರ, **ಅದ್ಯ ಸ್ಥಿತ್ವಾ ನಿರಾಹಾರಃ ಶ್ವೋಭೂತೇ ಪರಮೇಶ್ವರ ಭೋಕ್ಷ್ಯಾಮಿ। ಪುಂಡರೀಕಾಕ್ಷ ಜಯಂತೀ ವ್ರತ ತತ್ಪರಃ॥**

**ಸ್ನಾನ ಮಂತ್ರ :–**

**ಸಮಸ್ತ ಜಗದಾಧಾರ ಶಂಕಚಕ್ರ ಗದಾಧರ। ದೇವ ದೇಹಿ ಮಮಾನುಜ್ಞಾಂ**
**ಯುಷ್ಮತ್ತೀರ್ಥನಿಷೇವಣೇ॥ ಸತ್ಯಾಯ ಸತ್ಯಪತಯೇ ಸತ್ಯೇಶ್ವರಾಯ**
**ಸತ್ಯಸಂಭವಾಯ ಶ್ರೀಗೋವಿಂದಾಯ ನಮೋ ನಮಃ॥**

**ಗೋಕುಲಾಷ್ಟಮೀ ಕೃಷ್ಣ ಪ್ರಾರ್ಥನಾ ಮಂತ್ರ :–**

**ಅವತಾರಸಹಸ್ರಾಣಿ ಕರೋಷಿ ಮಧುಸೂದನ। ನ ತೇ ಸಂಖ್ಯಾವತಾರಾಣಾಂ**
**ಕಶ್ಚಿಜ್ಜಾನಾತಿ ವೈ ಭುವಿ॥ ದೇವಾ ಬ್ರಹ್ಮಾದಯೋ ವಾಪಿ ಸ್ವರೂಪಂ ಸವ।**
**ನ ವಿದುಸ್ತುವ ಅತಸ್ತ್ವಾಂ ಪೂಜಯಿಷ್ಯಾಮಿ ಮಾತುರುತ್ಸಂಗ ಸಂಸ್ಥಿತಮ್।**
**ವಾಂಛಿತಂ ಕುರು ಮೇ ದೇವ ಸಂಸಾರಾರ್ತಿ ಭಯಾಪಹ॥**

ಹೀಗೆ ಪ್ರಾರ್ಥನೆ (ಶಂಖದಲ್ಲಿ ಪುಷ್ಪ–ಫಲ–ಚಂದನ ಸಹಿತವಾಗಿ ಜಲವನ್ನು ತುಂಬಿಸಿ ಶ್ರೀಕೃಷ್ಣನಿಗೆ ಅರ್ಘ್ಯವನ್ನು ಕೊಡಬೇಕು).

**ಶ್ರೀಕೃಷ್ಣಾರ್ಘ್ಯಮಂತ್ರಃ :–**

**ಜಾತಃ ಕಂಸವದಾರ್ಥಾಯ ಭೂಭಾರಹರಣಾಯ ಚ।**
**ಕೌರವಾನಾಂ ವಿನಾಶಾಯ ದೈತ್ಯಾನಾಂ ನಿಧನಾಯ ಚ।**
**ಪಾಂಡವಾನಾಂ ಹಿತಾರ್ಥಾಯ ಧರ್ಮಸಂಸ್ಥಾಪನಾಯ ಚ।**
**ಗೃಹಾಣಾರ್ಘ್ಯಂ ಮಯಾದತ್ತಂ ದೇವಕ್ಯಾಸಹಿತೋ ಹರೇ॥**

ಈ ಮಂತ್ರದಿಂದ 3 ಸಲ ಅರ್ಘ್ಯವನ್ನು ಕೊಡಬೇಕು. ದೇವಕಿ ಸಹಿತಾಯ ಶ್ರೀಕೃಷ್ಣಾಯ ಇದಮರ್ಘ್ಯಂ,

ಬಲಭದ್ರ (ಬಲರಾಮನೇ) **ಬಲಭದ್ರ ನಮಸ್ತೇಸ್ತು ಪ್ರಲಂಬಾದಿ ವಿಭಂಜನ।**
**ಗೃಹಾಣಾರ್ಘ್ಯಂ ಮಯಾದತ್ತಂ ರೇವತ್ಯಾ ಸಹಿತೋ ಹರೇ।**
**ರೇವತೀ ಸಹಿತಾಯ** ಬಲಭದ್ರಾಯ **ಇದಮರ್ಘ್ಯಂ ಇದಮರ್ಘ್ಯಂ**
**ಇದಮರ್ಘ್ಯಂ॥**

ಗೋಕುಲಾಷ್ಟಮಿ, ಚಂದ್ರಪ್ರಾರ್ಥನಾ ಮಂತ್ರ: **ಜ್ಯೋತ್ಸ್ನಾಪತೇ ನಮಸ್ತುಭ್ಯಂ ನಮಸ್ತೇ ಜ್ಯೋತಿಷಾಂಪತೇ । ನಮಸ್ತೇ ರೋಹಿಣೀಕಾಂತ ಸುಧಾಕುಂಭ ನಮೋಸ್ತುತೇ ॥**

**ಚಂದ್ರಾರ್ಘ್ಯ ಮಂತ್ರ :–**

**ಕ್ಷೀರೋದಾರ್ಣವ ಸಂಭೂತ ಅತ್ರಿನೇತ್ರ ಸಮುದ್ಭವ।**
**ಗೃಹಾಣಾರ್ಘ್ಯಂ ಶಶಾಂಕೇಂದಂ ರೋಹಿಣ್ಯಾ ಸ್ಸಹಿತೋಮಮ॥**

ಈ ಮಂತ್ರದಿಂದ ಹಾಲಿನಿಂದ ಅರ್ಘ್ಯ ಕೊಡಬೇಕು.

**ಶ್ರೀಕೃಷ್ಣ ಸ್ತೋತ್ರ :–**

**ಅನರ್ಘ್ಯಂ ವಾಮನಂ ಶೌರಿಂ ಗೋವಿಂದಂ ಪುರುಷೋತ್ತಮಮ್।**
**ವಾಸುದೇವಂ ಹೃಷಿಕೇಶಂ ಮಾಧವಂ ಮಧುಸೂದನಮ್॥ ದಾಮೋದರಂ।**
**ಪದ್ಮನಾಭಂ ಕೇಶವಂ ಗರುಡಧ್ವಜಮ್। ಗೋವಿಂದಮಚ್ಯುತಂ**
**ಕೃಷ್ಣಮನಂತಮ್॥ ಅಪರಾಜಿತಂ ಅಧೋಕ್ಷಜಂ ಜಗದ್ಭೀಜಂ**
**ಸರ್ಗಸ್ಥಿತ್ಯಂತಕಾರಿಣಮ್। ಅನಾದಿನಿಧನಂ ವಿಷ್ಣುಂ ದೇವದೇವಂ**
**ತ್ರಿವಿಕ್ರಮಮ್। ನಾರಾಯಣಂ ಚತುರ್ಬಾಹುಂ ಶಂಖಚಕ್ರಗದಾಧರಮ್॥**
**ಪೀತಾಂಬರಧರಂ ಸೌಮ್ಯಮ್ ವನಮಾಲಾ ವಿಭೂಷಿತಮ್। ಶ್ರೀವತ್ಸ**
**ವಕ್ಷಸಂ ಶ್ರೀಶಂ ಶ್ರೀಧರಮ್ ಶ್ರೀಪತಿಂಪತಿಮ್। ಉಪೇಂದ್ರಂ**
**ದೇವಕೀಸೋಮಂ ಪ್ರಣಮಾಮಿ ಪ್ರಜಾಪತಿಮ್॥**

ಈ ಸ್ತೋತ್ರದಿಂದ ಪ್ರಾರ್ಥನೆ :– **ಪುನಃ ಪ್ರಾರ್ಥನೆ**

**ಪುಷ್ಯರಾಕ್ಷ ನಿಮಗ್ನೋಽಹಂ ಮಹತ್ಯಜ್ಞಾನಸಾಗರೇ।**
**ತ್ರಾಹಿ ಮಾಂ ದೇವದೇವೇಶ ಮಹಾಸಂಸಾರ ಸಾಗರಾತ್॥**

ಎಂದು ಪ್ರಾತಃ ಕಾಲ ಪುನಃ ಪೂಜೆ ಪಾರಣೆ ಬ್ರಾಹ್ಮಣ ಸುವಾಸಿನಿಯರ ಸಮಾರಾಧನೆ ನಡೆಸಬೇಕು.

21.08.25 ಗುರುಪುಷ್ಯಯೋಗ, ಮಾಸಶಿವರಾತ್ರಿ.

22.08.25 ದರ್ಶ, ಅನ್ವಾಧಾನ, ವೈಶ್ವದೇವ, ಬಲಿಹರಣ.

23.08.25 ಬೆನಕನಅಮಾವಾಸ್ಯೆ, ಕುಶಾಗ್ರಹಣ, ವಿಷ್ಣುಪಂಚಕೋಪವಾಸ.

## ಭಾದ್ರಪದ ಮಾಸ

24.08.25 ಪ್ರೋಷ್ಠಪದಿ ಭಾಗವತ ಪುರಾಣಾರಂಭ, ಚಂದ್ರದರ್ಶನ.

25.08.25 ವರಾಹ ಜಯಂತಿ.

26.08.25 ಸ್ವರ್ಣಗೌರೀವ್ರತ, ಹರಿತಾಲಿಕಾವ್ರತ, ತಾಪಸ ಮನ್ವಾದಿ, ಸಾಮಗೋಪಕರ್ಮ.

27.08.25 ವಿನಾಯಕ ವ್ರತ, ಈ ದಿನ ಚಂದ್ರದರ್ಶನ ನಿಷೇಧ, ಚಂದ್ರದರ್ಶನ ದೋಷ ಪರಿಹಾರಕ್ಕೆ – **ಸಿಂಹಃ ಪ್ರಸೇನಮವಧೀತ್ಸಿಂಹೋ ಜಾಂಬವತಾ ಹತಃ। ಸುಕುಮಾರಕ ಮಾ ರೋದೀಃ ತವ ಹ್ಯೇಷ ಸ್ಯಮಂತಕಃ ॥** ಈ ಶ್ಲೋಕವನ್ನು ಜಪಿಸಬೇಕು.

28.08.25 ಋಷಿ ಪಂಚಮಿ, ವ್ರತಗ್ರಹಣಕ್ಕೆ ಬರುತ್ತದೆ.

29.08.25 ಸೂರ್ಯಷಷ್ಠೀ, ಭಾಸ್ಕರ ಪೂಜಾ, ಕಾರ್ತೀಕೇಯ ದರ್ಶನ.

30.08.25 ಜ್ಯೇಷ್ಠಾದೇವಿ ಆವಾಹನೆ, ಅಮುಕ್ತಾಭರಣ ಸಪ್ತಮೀ.

31.08.25 ಜ್ಯೇಷ್ಠಾದೇವಿ ಪೂಜೆ, ನಕ್ಷತ್ರಪರಾಣಾಂ, ದುರ್ಗಾಷ್ಟಮಿ, ದೂರ್ವಾಷ್ಟಮಿ.

01.09.25 ದೋರಬಂಧನ, ಜ್ಯೇಷ್ಠಾದೇವಿ ವಿಸರ್ಜನೆ.

03.09.25 ಶ್ರೀವಿಷ್ಣುಪರಿವರ್ತನೋತ್ಸವ, ದಧಿದಾನ, ವಿಷ್ಣುಪಂಚಕ ವ್ರತಗ್ರಹಣಕ್ಕೆ ಬರುತ್ತದೆ, ಕ್ಷೀರವ್ರತಾರಂಭ, ಸುದರ್ಶನ ಹೋಮ, ಒಂದು ತಿಂಗಳು ಹಾಲು ನೈವೇದ್ಯಕ್ಕೆ ಬರುವುದಿಲ್ಲ.

04.09.25 ಪಾರಣೆ ಹರಿವಾಸರ 7.21ನಿ.ವರೆಗೆ, ದಧಿವಾಮನ ಜಯಂತೀ.

06.09.25 ಅನಂತ ಚತುರ್ದಶಿ, ವ್ರತ ಗ್ರಹಣಕ್ಕೆ ಬರುತ್ತದೆ.

07.09.25 ಅನಂತ ಹುಣ್ಣಿಮೆ, ಜೋಕುಮಾರ ಹುಣ್ಣಿಮೆ, ಶ್ರೀಮಠದಲ್ಲಿ ಪ್ರೋಷ್ಠಪದಿ ಭಾಗವತ ಮಂಗಳ, ಸನ್ಯಾಸಿಗಳ ಚಾತುರ್ಮಾಸ್ಯವ್ರತ ದೀಕ್ಷಾ ಸಮಾಪ್ತಿ, ಸೀಮೋಲ್ಲಂಘನ, ಅನ್ವಾಧಾನ, ವಿಷ್ಣುಪಂಚಕೋಪವಾಸ, ಪ್ರೋಷ್ಠಪದೀ ಶ್ರಾದ್ಧ, ರಾಹುಗ್ರಸ್ತ ಖಗ್ರಾಸ ಚಂದ್ರಗ್ರಹಣ.

**ಪ್ರೋಷ್ಠಪದ್ಯಾಂ ಸಿತೇಪಕ್ಷೇ ದ್ವಾದಶ್ಯಾಂ ಶ್ರವಣೇ ಯದಾ । ತದಾರಭ್ಯವ್ರತಂ ಕಾರ್ಯಂ ಮಾರ್ಗಶೀರ್ಷೇಽಥವಾ ನೃಪ ॥ ಏಕಾದಶ್ಯಾಮುಪವಸೇತ್ ಪ್ರತಿಪಕ್ಷಂಚ ಪರ್ವಣಿ । ಶ್ರವಣೇಚ ತದೋಪೋಷ್ಯ ಪೂಜಯೇದ್ಗರುಡಧ್ವಜಂ ॥ ಮಾಸಿ ಭಾದ್ರಪದೇ ಶುಕ್ಲೇ ಶ್ರವಣೇನ ಯುತಾ ಯದಿ । ಏಕಾದಶೀ ತದಾ ಗ್ರಾಹ್ಯಂ ವ್ರತಂ ವರ್ಷಾತ್ಮಕಂ ಶುಭಮ್॥ ಪ್ರಾರಂಭ ದಿವಸೇ ಪ್ರಾಪ್ತೇ ಸ್ವಸ್ತಿವಾಚನ ಪೂರ್ವಕಂ ಸಂಕಲ್ಪಂ ವಿಧಿವತ್ಕುರ್ಯಾತ್ ವ್ರತಮಾತ್ಸರಂ ಕ್ರಮಾತ್। ಮಾಗಶೀರ್ಷೇಽಥವಾ ಕುರ್ಯಾದೇಕಾದಶ್ಯಾಂಸಿತೇ ಶುಭೇ। ಹೀನಾಯಾಂ ವಿಷ್ಣುಭೇನಾಪಿ ವ್ರತಮೇತತ್ ಸಮಾಚರೇತ್** (ವಿಷ್ಣುಪ್ರೀತ್ಯರ್ಥವಾಗಿ ವಿಷ್ಣು ಪಂಚಕವ್ರತವನ್ನು ಆಚರಿಸಬೇಕು.) ವಾಮನ ಜಯಂತಿ **ದೇವೇಶ್ವರಾಯದೇವಾಯ ದೇವಸಂಭೂತಿ ಕಾರಿಣೇ ಪ್ರಭವೇ ಸರ್ವದೇವಾನಾಂ ವಾಮನಾಯ ನಮೋ ನಮಃ** (ಪೂಜಾ) ಅರ್ಘ್ಯ ಮಂತ್ರ: **ನಮಸ್ತೇ ಪದ್ಮನಾಭಾಯ ನಮಸ್ತೇ ಜಲಶಾಯಿನೇ । ತುಭ್ಯಮರ್ಘ್ಯಂ ಪ್ರಯಚ್ಛಾಮಿ ಬಾಲವಾಮನ ರೂಪಿಣೇ। ನಮಃ ಶಾರ್ಙ್ಗಧನುರ್ಬಾಪ ಪಾಣಯೇ ವಾಮನಾಯಚ। ಯಜ್ಞಭೋಕ್ತಾರಂ ಫಲದಾತ್ರೇಚ ವಾಮನಾಯ ನಮೋ ನಮಃ.**

08.09.25 ಮಹಾಲಯ ಪಕ್ಷಾರಂಭ, ಪೂರ್ಣಿಮಾಸೀಷ್ಟಿ.

12.09.25 ಮಹಾಭರಣಿ ಶ್ರಾದ್ಧ.

13.09.25 ಪೂರ್ವೇದ್ಯು ಶ್ರಾದ್ಧ.

14.09.25 ಮಧ್ಯಾಷ್ಟಮೀ, ಅಷ್ಟಕ ಶ್ರಾದ್ಧ, ಕಾಲಾಷ್ಟಮೀ.

15.09.25 ಅವಿಧಾವನವಮೀ, ಅನ್ವಷ್ಟಕಾ ಶ್ರಾದ್ಧ, ವ್ಯತೀಪಾತ ಶ್ರಾದ್ಧ.

17.09.25 ಸರ್ವೇಷಾಮೇಕಾದಶೀ(ಇಂದಿರಾ), ಕನ್ಯಾ ಸಂಕ್ರಮಣ,

18.09.25 ಪಾರಣೆ, ಹರಿವಾಸರ 6–59ನಿ. ವರೆಗೆ, ಯತಿದ್ವಾದಶಿ, ಸನ್ಯಾಸಿನಾಂ ಮಹಾಲಯ, ಗುರುಪುಷ್ಯಯೋಗ.

19.09.25 **ಶ್ರೀ ವಿಜ್ಞಾನನಿಧಿತೀರ್ಥರ ಆರಾಧನೆ,** ಮಘಾ ತ್ರಯೋದಶೀ, ಪ್ರದೋಷ, ಗಜಚ್ಛಾಯಾಶ್ರಾದ್ಧ, ಕಲಿಯುಗಾದಿ.

20.09.25 ಘಾತ ಚತುರ್ದಶಿ, ಶಸ್ತ್ರಾಸ್ತ್ರ ಹತರಿಗೆ.

21.09.25 ಸರ್ವಪಿತೃ ಅಮಾವಾಸ್ಯೆ, ದರ್ಶ, ಅನ್ವಧಾನ, ವೈಶ್ವದೇವ, ಬಲಿಹರಣ, **ಶ್ರೀ ಮಾಧವತೀರ್ಥರ ಪುಣ್ಯದಿನ,** ಪಿಂಡ ಪಿತೃಯಜ್ಞ, ವಿಷ್ಣುಪಂಚಕೋಪವಾಸ.

## ಆಶ್ವಯುಜ ಮಾಸ

22.09.25 ಶರನ್ನವರಾತ್ರೋತ್ಸವಾರಂಭ, ಧ್ವಜಾರೋಹಣ, ಘಟಸ್ಥಾಪನ, ದೀಪಸಂಯೋಜನ, ಬ್ರಾಹ್ಮಣಸಂತರ್ಪಣ, ಸಚ್ಛಾಸ್ತ್ರ ಪಾರಾಯಣ, ವೇಂಕಟೇಶ ಮಹಾತ್ಮೆ ಪುರಾಣಾರಂಭ, ದರ್ಶೇಷ್ಟಿ, ದೌಹಿತ್ರ ಕರ್ತೃಕ ಮಾತಾಮಹ ಶ್ರಾದ್ಧ.

24.09.25 ಸಪ್ತರಾತ್ರೋತ್ಸವಾರಂಭ.

26.09.25 ಉಪಾಂಗ ಲಲಿತಾವ್ರತ, ಪಂಚರಾತ್ರೋತ್ಸವಾರಂಭ.

29.09.25 ಸರಸ್ವತಿ ಆವಾಹನೆ. ಶ್ರೀಪ್ರಾಣೇಶದಾಸರ ಪುಣ್ಯದಿನ.

30.09.25 ಸರಸ್ವತಿ ಪೂಜೆ, ತ್ರಿರಾತ್ರೋತ್ಸವಾರಂಭ, ದುರ್ಗಾಷ್ಟಮೀ, ದುರ್ಗಾಪೂಜ.

01.10.25 ಸಂಜೆ ವೇದವ್ಯಾಸ ಮಂಗಳಾರತಿ, ಸರಸ್ವತೀ ಬಲಿ, ದುರ್ಗಾಷ್ಟಮೀ, ದುರ್ಗಾಪೂಜಾ, ಆಯುಧಪೂಜಾ ಗೋಗಜಾಶ್ವರಥ ಪೂಜಾ ಘಟವಿಸರ್ಜನೆ, ಸ್ವಾರೋಚಿಷಮನ್ವಾದಿ, ಮಹಾನವಮೀ.

02.10.25 ವಿಜಯ ದಶಮಿ, ಅಪರಾಜಿತ ಶಮೀಪೂಜೆ, ಬುದ್ಧಜಯಂತಿ, ಸರಸ್ವತಿ ವಿಸರ್ಜನೆ, ಮಧ್ವಜಯಂತಿ, ವಿಷ್ಣುಪಂಚಕೋಪವಾಸವಿಲ್ಲ, ವೆಂಕಟೇಶ ಕಲ್ಯಾಣ ಪುರಾಣ ಮಂಗಳ.

06.10.25 ರಾತ್ರಿಯಲ್ಲಿ ಲಕ್ಷ್ಮೀಪೂಜೆ, ಇಂದ್ರಪೂಜೆ, ಅಕ್ಷಕ್ರೀಡಾ, ಜಾಗರಣ, ಕೋಜಾಗರವ್ರತ.

ಆಶ್ವೀಜ ಶುದ್ಧ ಪಾಡ್ಯದಿಂದ ಹಿಡಿದು ಮೂಲಾ ನಕ್ಷತ್ರದವರಿಗೂ ಸಚ್ಛಾಸ್ತ್ರ ಪಾರಾಯಣ, ಸ್ನಾನ–ದಾನ, ಮಂತ್ರ–ಜಪ–ಹೋಮ–ಇವುಗಳು ಪ್ರಶಸ್ತ ಮಾರ್ಗಗಳು ವಿಶೇಷ ಫಲಪ್ರದ. **'ಮೂಲೇ ತು ಸ್ಥಾಪಯೇದ್ದೇವಿಂ ಪೂರ್ವಾಷಾಡಾಸು ಪೂಜನಂ ಉತ್ತರಾಸು ಬಲಿಂದದ್ಯಾತ್ ಶ್ರವಣೇತು ವಿಸರ್ಜಯೇತ್ ವಿಷ್ಣುತೀರ್ಥಿಯ ಮೂಲಾದೌಸ್ಥಾಪಯೇದ್ದೇವೀಂ ಶ್ರವಣಾಂತೇ ವಿಸರ್ಜನಂ'.** ಸಚ್ಛಾಸ್ತ್ರಗ್ರಂಥಗಳು ಹಸ್ತರಚಿತ–ತಾಳಗರಿ ಅಥವಾ ಮುದ್ರಿತವಾದ ಗ್ರಂಥಗಳನ್ನಿಟ್ಟು ಗ್ರಂಥಾಂತರ್ಗತ ಶ್ರೀವೇದವ್ಯಾಸದೇವರನ್ನು ಪರಶುರಾಮ–ಹಯಗ್ರೀವ ಕಪಿಲಾದಿ ದೇವರುಗಳನ್ನು ಆಹ್ವಾನಿಸಿ ಪೂಜಿಸಬೇಕು. ದಿಕ್ಪಾಲಕರ ಸ್ಥಾನಗಳಲ್ಲಿ ಶ್ರೀವೇದವ್ಯಾಸದೇವರ ಶಿಷ್ಯರುಗಳಾದ ಸುಮಂತು, ಜೈಮಿನಿ, ಬಾದರಿ, ವೈಶಂಪಾಯನ, ಆಶ್ವರಥ್ಯ, ಕಾಶಕೃತ್ಸ್ನ, ಲೋಮಶ ಋಷಿಗಳನ್ನು ಆಹ್ವಾನಿಸಬೇಕು. ಸಚ್ಛಾಸ್ತ್ರಾಭಿಮಾನಿಗಳಾದ ಬ್ರಹ್ಮದೇವರು ಮೊದಲಾದ ದೇವತೆಗಳನ್ನು ವಿದ್ಯಾಭಿಮಾನಿಗಳಾದ ಸರಸ್ವತಿ– ಭಾರತಿದೇವಿಯರ ಅಂತರ್ಗತರಾದ ವೇದಾಭಿಮಾನಿ ಲಕ್ಷ್ಮೀದೇವಿಯರನ್ನು ಆಹ್ವಾನಿಸಬೇಕು. ಸಚ್ಛಾಸ್ತ್ರ ಪ್ರವರ್ತಕರಾದ ಶ್ರೀಮನ್ಮಧ್ವಾಚಾರ್ಯರು ಟೀಕಾಕೃತ್ಪಾದರುಗಳಾದ ಶ್ರೀಪದ್ಮನಾಭಾದಿ ಟೀಕಾಚಾರ್ಯರನ್ನು ಟಿಪ್ಪಣಿ ಕರ್ತೃಗಳಾದ ಗುರುಗಳನ್ನು ಆವಾಹನೆ ಮಾಡಿ ಪೂಜಿಸುವುದು, ಮೂಲಾ ನಕ್ಷತ್ರದಲ್ಲಿ ಆವಾಹನೆ–ತದಂಗ ಪೂಜೆ ಪೂರ್ವಾಷಾಢದಲ್ಲಿ ಶ್ರೀವೇದವ್ಯಾಸ ವಿಶೇಷ. ಪೂಜೆ–ನೈವೇದ್ಯ ಮಂಗಳಾರತಿ, ಉತ್ತರಾಷಾಢ ನಕ್ಷತ್ರದಲ್ಲಿ ವಿಶೇಷಪೂಜೆ ಮಹಾನೈವೇದ್ಯ ಮಹಾಮಂಗಳಾರತಿ ವಿದ್ವಾಂಸರಿಂದ ಪುರಾಣ ಪ್ರವಚನ, ಶ್ರವಣ ನಕ್ಷತ್ರದಲ್ಲಿ ವಿಸರ್ಜನಾಂಗ ಪೂಜೆಯನ್ನು ಮಾಡಿ ಶ್ರೀವೇದವ್ಯಾಸದೇವರ ಕೃಪೆಗೆ ಪಾತ್ರರಾಗುವುದು, ಸಂಪ್ರದಾಯ ಮಹಾನವಮಿ ಅಶ್ವಪೂಜೆ – ಗೋಪೂಜೆ – ಗಜಪೂಜೆ – ಆಯುಧಪೂಜೆ–ಚತುರ್ದಶಿ ಕೋಜಾಗರವ್ರತ. ಈ ದಿನ ಸೂರ್ಯಾಸ್ತ ನಂತರ ಅಕ್ಕಿ ರಾಶಿಯಲ್ಲಿ ಪದ್ಮಾಸನಾನೇವ ಶ್ರೀಲಕ್ಷ್ಮೀಯನ್ನು ಧ್ಯಾನಾವಾಹನ ಪೂಜೆ ಮಾಡಬೇಕು.

**ಲಕ್ಷ್ಮೀಪೂಜೆ : ನಮಸ್ತೇ ಸರ್ವದೇವಾನಾಂ ವರದಾಯಿ ಹರಿಪ್ರಿಯೇ। ಯಾ ಗತಿಃ ತ್ವತ್ಪ್ರಪನ್ನಾನಾಂ ಸಾ ಮೇ ಭೂಯಾತ್ ತ್ವದರ್ಚನಾತ್॥** ಎಂದು ಪೂಜೆ ಮಾಡಬೇಕು. ನವರಾತ್ರಿ, ಶರನ್ನವರಾತ್ರಿ ಉತ್ಸವ, ವಿಜಯದಶಮಿ ಶಮೀಪೂಜೆ. **ಅಮಂಗಳಾನಾಂ ಶಮನೀ ಶಮನೀ ದುಷ್ಕೃತಸ್ಯ ಚ। ದುಃಖಪ್ರಣಾಶಿನೀಂ ಧನ್ಯಾ ಪ್ರಪದ್ಯೇಹಂ ಶಮೀಂ ಶುಭಾಂ॥ ಶಮೀ ಶಮಯತೇಪಾಪಂ ಶಮೀ ಶತ್ರುವಿನಾಶಿನೀ। ಅರ್ಜುನಸ್ಯ ಧನುರ್ಧಾತ್ರೀ ರಾಮಸ್ಯ ಪ್ರಿಯದರ್ಶಿನೀ॥**

07.10.25 ಅಗ್ರಯಣೇಷ್ಠಿ, ನವಾನ್ನ ಭಕ್ಷಣ, ಜ್ಯೇಷ್ಠಾಪತ್ಯ ನಿರಾಜಿನ, ಸೀಗೆಹುಣ್ಣಿಮೆ, ಅನ್ವಾಧಾನ, ವೈಶ್ವದೇವ, ಬಲಿಹರಣ, ಕಾರ್ತೀಕಸ್ನಾನಾರಂಭ, ವಿಷ್ಣುಪಂಚಕೋಪವಾಸ.

**ಆಶ್ವೀಜ ಶುದ್ಧ ಪೌರ್ಣಮಿ ಕಾರ್ತೀಕ ಸ್ನಾನ ಪ್ರಾರಂಭ :** (ಕಾರ್ತೀಕ ಪೌರ್ಣಮಿ ಪರ್ಯಂತ) **ಕಾರ್ತಿಕೇಽಹಂ ಕರಿಷ್ಯಾಮಿ ಪ್ರಾತಃ ಸ್ನಾನಂ ಜನಾರ್ದನ। ಪ್ರೀತ್ಯರ್ಥಂ ತವದೇವೇಶ ದಾಮೋದರ ಮಯಾಸಹ। ಧ್ಯಾತ್ವಾಽಹಂ**

**ತ್ವಾಂಚ ದೇವೇಶ ಜಲೇऽಸ್ಮಿನ್ ಸ್ನಾತುಮುದ್ಯತಃ। ತವ ಪ್ರಸಾದಾತ್ಪಾಪಂ ಮೇ ದಾಮೋದರ ವಿನಶ್ಯತು** ಎಂದು ಹೇಳಿ ಸ್ನಾನ ಮಾಡಬೇಕು.

**ಅರ್ಘ್ಯ ಮಂತ್ರ : ನಿತ್ಯನೈಮಿತ್ತಿಕೇ ಕೃಷ್ಣಕಾರ್ತಿಕೇ ಪಾಪನಾಶನೇ ಗೃಹಾಣಾರ್ಘ್ಯಂ ಮಯಾದತ್ತಂ ರಾಧಯಾ ಸಹಿತೋ ಹರೇ॥ ಪ್ರತ್ಯಹಂ ಕಾರ್ತೀಕೇ ಮಾಸಿ ಸ್ನಾತಸ್ಯವಿಧಿವನ್ಮಮ। ಗೃಹಾಣಾರ್ಘ್ಯಂ ಮಯಾದತ್ತಂ ರಾಧಯಾ ಸಹಿತೋ ಹರೇ॥ ನಮಃ ಕಮಲಾನಾಭಾಯ ನಮಸ್ತೇ ಜಲಾಶಾಯಿನೇ। ನಮಸ್ತೇಸ್ತು ಹೃಷೀಕೇಶ ಗೃಹಾಣಾರ್ಘ್ಯಂ ನಮೋಸ್ತುತೇ॥** (ಎಂದು ಅರ್ಘ್ಯಬಿಡಬೇಕು).

14.10.25 ಗಂಗಾಷ್ಟಮೀ, ರಾಧಾಕುಂಡ ಸ್ನಾನ.

18.10.25 ಯಮದೀಪ ದಾನ, ಭೌಮಪ್ರದೋಷ. ಆಶ್ವೀಜ ಬಹುಳ ದ್ವಾದಶೀ ಗೋವತ್ಸ ದ್ವಾದಶೀ ಗೋಪೂಜೆ ಮಾಡಿ, ಅರ್ಘ್ಯಕೊಡಬೇಕು. ತುಲಾಸಂಕ್ರಮಣ.

**ಅರ್ಘ್ಯಮಂತ್ರ : ಕ್ಷೀರೋದಾರ್ಣವಸಂಭೂತೇ ಸುರಾಸುರನಮಸ್ಕೃತೇ ಸರ್ವದೇವಮಯೇ ಮಾತರ್ಗೃಹಾಣಾರ್ಘ್ಯಂ ನಮೋಸ್ತುತೇ ॥** – ಎಂದು ಜಲದಿಂದ ಗೋಕಾಲಿನ ಮೇಲೆ ಕೊಡಬೇಕು.

19.10.25 ಧನಲಕ್ಷ್ಮೀ ತ್ರಯೋದಶಿ, ಕುಲಧರ್ಮ, ಗೋ ತ್ರಿರಾತ್ರ ವ್ರತ, ಯಮದೀಪ ದಾನ, ಜಲಪೂರ್ಣ ತ್ರಯೋದಶಿ, ನೀರುತಂಬುವ ಹಬ್ಬ, ನೀರಾಜಿನ, ಮಾಸ ಶಿವರಾತ್ರಿ. ಶ್ರೀಲಕ್ಷ್ಮೀನಾರಾಯಣರು ರಾತ್ರಿ ಬಂಧುಗಳಲ್ಲಿ ಸನ್ನಿಹಿತರಾಗಿರುತ್ತಾರೆ. ಯಮದೀಪದಾನ,

20.10.25 ಉಲ್ಕಾದರ್ಶನ, ನರಕಚತುರ್ದಶಿ ಪ್ರಯುಕ್ತ ನಾರೀಕೃತ ಪ್ರಾತಃ ಚಂದ್ರೋದಯಕ್ಕೆ ನಾರೀಕೃತ ನೀರಾಜಿನ, ಅಭ್ಯಂಜನ. ಪಶ್ಚಿಮಜಾಗರ ಮಂಗಳಾರತಿ ಪ್ರಾರಂಭ, ಯಮತರ್ಪಣ.

**ನರಕಚತುರ್ದಶಿ ಯಮತರ್ಪಣ :– ಯಮಾಯ ಧರ್ಮರಾಜಾಯ ಮೃತ್ಯವೇ ಚಾಂತಕಾಯಚ। ವೈವಸ್ವತಾಯ ಕಾಲಾಯ ಸರ್ವ ಭೂತಕ್ಷಯಕರಾಯಚ। ಔದುಂಬರಾಯದದ್ನಾಯ ನೀಲಾಯ ಪರಮೇಷ್ಠಿನೇ। ವೃಕೋದರಾಯ ಚಿತ್ರಾಯ ಚಿತ್ರಾಗುಪ್ತಾಯವೈ ನಮಃ॥** (ಯಮಾಯನಮಃ ಯಮಂ ತರ್ಪಯಾಮಿ) ಎಂಬಂತೆ ಪಿತೃತರ್ಪಣಕ್ಕೆ ಅಧಿಕಾರವಿದ್ದವರು ದಕ್ಷಿಣಕ್ಕೆ ಮುಖಮಾಡಿ ಸವ್ಯದಿಂದಲೇ (ಯಮ ದೇವತೆಯಾದ್ದರಿಂದ) ಬೆರಳು ತುದಿಗಳಿಂದಲೇ ತಿಲತರ್ಪಣವನ್ನು ಕೊಡಬೇಕು. ಪ್ರಮಾಣ **ದಕ್ಷಿಣಾಭಿ ಮುಖೋ ಭೂತ್ವಾತಿಲೈಃ ಸವ್ಯಂ ಸಮಾಶ್ರಿತಃ.**

**ನರಕಚತುರ್ದಶಿ:** ಸೂರ್ಯಾಸ್ತಮಾನವಾದ ಮೇಲೆ ನಮ್ಮ ಕುಲದಲ್ಲಿ ಹುಟ್ಟಿ ಬೆಂಕಿಯಲ್ಲಿ ಬಿದ್ದವರು ಸಿಡಿಲುಬಡಿದು ಸತ್ತವರೆ ಮೊದಲಾದವರಿಗೆ ಸದ್ಗತಿಯಾಗುವುದಕ್ಕೆ ಹಾಗೂ ಮಹಾಲಯಕ್ಕಾಗಿ ಯಮಲೋಕದಿಂದ ಭೂಲೋಕಕ್ಕೆ ಬಂದ ಪಿತೃಗಳಿಗೆ ಪುನಃ ಹಿಂದಿರುಗಿ ಯಮಲೋಕಕ್ಕೆ ಹೋಗುವುದಕ್ಕೆ ಮಾರ್ಗ ತಿಳಿಯುವುದಕ್ಕಾಗಿ ದೇವಾಲಯ – ಉದ್ಯಾನರಸ್ತೆ ಗೋಶಾಲೆ, ಮನೆಮುಂದೆ ದೀಪಗಳನ್ನು ಹಚ್ಚಿಡಬೇಕು, ಕೊಳ್ಳಿಗಳನ್ನು ಬೆಳಗಿಸಬೇಕು ಮತ್ತು **ಅಗ್ನಿದಗ್ಧಾಶ್ಚ ಯೇಜೀವಾ ಯೇಪ್ಯದಗ್ಧಾಃ ಕುಲೇ ಮಮ। ಉಜ್ವಲಜ್ಯೋತಿಷಾದಗ್ಧಾಸ್ತೇ ಯಾಂತು ಪರಮಾಂಗತಿಮ್। ಯಮಲೋಕಂ ಪರಿತ್ಯಜ್ಯ ಆಗತಾ ಯೇ ಮಹಾಲಯೇ। ಉಜ್ವಲ ಜ್ಯೋತಿಷಾವರ್ತ್ಮ ಪ್ರಪಶ್ಯಂತು ವ್ರಜಂತು ತೇ॥** ಈ ಮಂತ್ರದಿಂದ ದೀಪಗಳನ್ನು ಹಚ್ಚಬೇಕು. ಈ ದಿನ ರಾತ್ರಿ ಎಲ್ಲರೂ ಊಟಮಾಡಬೇಕು. ನಂತರ ಗೋಗ್ರಾಸವನ್ನು ಕೊಟ್ಟು ಪ್ರಾರ್ಥಿಸಬೇಕು. **ಸರ್ವದೇವಮಯೇದೇವಿ ಸರ್ವದೇವೈರಲಂಕೃತೇ। ಮಾತರ್ಮಮಾಭಿಲಷಿತಂ ಸಫಲಂಕುರುನಂದಿನಿ॥** (ಎಂಬ ಮಂತ್ರದಿಂದ ಪ್ರಾರ್ಥಿಸಬೇಕು).

ಆಶ್ವೀಜ ಬಹುಳ ಚತುರ್ದಶಿ–ನಾರಿಕೃತನೀರಾಜನ ಪಂಚಪಂಚ ಉಷಃ ಕಾಲದಲ್ಲಿ ದೇವರಿಗೆ ವಿಶೇಷಪೂಜೆ ಮಾಡಿ ಮಂಗಳದ್ರವ್ಯ–ಎಣ್ಣೆ–ನೀರು

ಸಮರ್ಪಿಸಿ, ನೀರಾಜನ ಮಾಡಿ ಗೃಹಸ್ತರು–ಗೃಹಿಣಿಯರು ಬಾಲಕರು – ವೃದ್ಧರು – ವಿಧವೆಯರು ಎಲ್ಲಾವರ್ಗದವರು ಅಭ್ಯಂಜನ ಮಾಡಿಕೊಳ್ಳಬೇಕು. ಯತಿಗಳು ಸಹ ಅಭ್ಯಂಜನ ಮಾಡಿಕೊಳ್ಳಬೇಕು. **ಸೀತಾಲೋಷ್ಠಸಮಾಯುಕ್ತ ಸಕಂಕದಲಾನ್ವಿತ ಹರ ಪಾಪಮಪಾಮಾರ್ಗ ಭ್ರಾಮ್ಯಮಾಣಃ ಪುನಃ ಪುನಃ** (ಎಂದು ತನಗೇ ಮೂರುಸುತ್ತು ಅಪಾಮಾರ್ಗದಿಂದ ಭ್ರಮಣ ಮಾಡಬೇಕು) ಇಂದ್ರಪೂಜೆ– **ಚತುರ್ದಂತ ಸಮಾರೂಢೋ ವಜ್ರಪಾಣಿಃ ಪುರಂದರಃ। ಶಚೀಪತಿಶ್ಚಧ್ಯಾತವ್ಯೋ ನಾನಾಭರಣಭೂಷಿತಃ** ಎಂಬ ಮಂತ್ರದಿಂದ ಇಂದ್ರನನ್ನು ಧ್ಯಾನಿಸಿ "ಇಂದ್ರಾಯನಮಃ" ಎಂದು ಷೋಡಶೋಪಚಾರ ಪೂಜೆ ಮಾಡಿ.

ಪುಷ್ಪಾಂಜಲಿ : **ವಿಚಿತ್ರೈರಾವತಸ್ಥಾಯ ಭಾಸ್ವತ್ಕುಲಿಶಪಾಣಯೇ।**
**ಪೌಲೋಮ್ಯಾಲಿಂಗಿತಾಂಗಾಯ ಸಹಸ್ರಾಕ್ಷಾಯ ತೇ ನಮಃ॥**

ಎಂಬ ಮಂತ್ರದಿಂದ ಪುಷ್ಪಾಂಜಲಿಯನ್ನು ಕೊಡಬೇಕು. ಎಳನೀರು, ಅವಲಕ್ಕಿ ನೈವೇದ್ಯವನ್ನು ಇಂದ್ರಾಂತರ್ಗತ ಲಕ್ಷ್ಮೀನಾರಾಯಣರಿಗೆ ಸಮರ್ಪಿಸಬೇಕು. ಅಷ್ಟೈಶ್ವರ್ಯ ಪ್ರಾಪ್ತಿಯಾಗುತ್ತದೆ.

**ಆಶ್ವಯುಜ ಬಹುಳ ಅಮಾವಾಸ್ಯೆ :** ಧನಲಕ್ಷ್ಮೀಪೂಜೆ ಧನವನ್ನು–ಬಂಗಾರವನ್ನು ಇಟ್ಟು ಧನಲಕ್ಷ್ಮೀಪೂಜೆಯನ್ನು ವಿಶೇಷವಾಗಿ ಮಾಡಿದಲ್ಲಿ ಮನೆಯಲ್ಲಿ ಐಶ್ವರ್ಯ ಪ್ರಾಪ್ತಿಯಾಗುತ್ತದೆ.

21.10.25 ದೀಪಾವಳಿ ಅಮಾವಾಸ್ಯೆ, ಆಕಾಶದೀಪ, ದರ್ಶ, ಅನ್ವಾಧಾನ, ವೈಶ್ವದೇವ, ಬಲಿಹರಣ, ಪಿಂಡ ಪಿತೃಯಜ್ಞ, ವಿಷ್ಣುಪಂಚಕೋಪವಾಸ.

## ಕಾರ್ತೀಕ ಮಾಸ

22.10.25 ಗೋವರ್ಧನಪೂಜ, ಗೋಪೂಜಾ, ವಷ್ಠಿಕಾಕರ್ಷಣ, ಮಾರ್ಗಪಾಲಿಬಂಧನ, ದ್ಯೂತಾರಂಭ, ಅಕ್ಷಕ್ರೀಡಾ, ಈ ಬಲಿಪಾಡ್ಯಮಿದಿನ ಐದು ಬಣ್ಣಗಳಿಂದ ಬಲೀಂದ್ರನನ್ನು ಬರೆದು ಪೂಜಿಸಬೇಕು. ಶ್ರೀಮಠದಲ್ಲಿ ಮೂಲ ವಿಗ್ರಹಗಳಿಗೆ ಮಹಾಭಿಷೇಕ, ವಿಕ್ರಮಶಕಾರಂಭ, ದರ್ಶೇಷ್ಟಿ, ಚಂದ್ರದರ್ಶನ.

**ಬಲಿಪಾಡ್ಯಮಿ:** ಈ ದಿನ ಶ್ರೀವಾಮನದೇವರು ಬಲಿಚಕ್ರವರ್ತಿಗೆ ಸುತಲ ಲೋಕಾಧಿಪತ್ಯವನ್ನು ಕೊಟ್ಟರು. ಈ ದಿನ ಜನರು ಸುಖ ಸಂತೋಷದಿಂದ ಇರುವಂತೆ ವರಪ್ರಸಾದಾನವನ್ನು ಶ್ರೀವಾಮನದೇವರು ಮಾಡಿದ್ದಾರೆ. ಈ ದಿನ ತೈಲಾಭ್ಯಂಗ – ವಿಶೇಷ ದಾನ–ಧರ್ಮ ಮಾಡಬೇಕು.

**ಬಲಿರಾಜ ನಮಸ್ತುಭ್ಯಂ ವಿರೋಚನ ಸುತ ಪ್ರಭೋ।**
**ಭವಿಷ್ಯೇಂದ್ರ ಸುರಾರಾತೇ ಪೂಜೇಯಂ ಪ್ರತಿ ಗೃಹ್ಯತಾಂ॥**

ಈ ಮಂತ್ರದಿಂದ ಬಲಿಪೂಜೆ ಮಾಡಿ ಯಥಾಶಕ್ತಿ ದಾನ ಮಾಡಬೇಕು. ದೀಪದಾನ ಮಾಡಿದರೆ ಲಕ್ಷ್ಮೀದೇವಿಯುಸ್ಥಿರವಾಗಿ ಉಳಿಯುತ್ತಾಳೆ. ಲಕ್ಷ್ಮೀಪೂಜೆ, ಕುಬೇರಪೂಜೆ, ಗೋಪೂಜೆ **ಲಕ್ಷ್ಮೀರ್ಯಾ ಲೋಕಪಾಲಾನಾಂ ಧೇನುರೂಪೇಣ ಸಂಸ್ಥಿತಾ। ಘೃತಂ ವಹತಿ ಯಜ್ಞಾರ್ಥೇ ಮಮ ಪಾಪಂ ವ್ಯಪೋಹತು। ಅಗ್ರತಃ ಸಂತು ಮೇ ಗಾವೋ ಗಾವೋ ಮೇ ಸಂತು ಪೃಷ್ಠತಃ। ಗಾವೋ ಮೇ ಹೃದಯೇಸಂತು ಗವಾಂ ಮಧ್ಯೇ ವಸಾಮ್ಯಹಂ** (ಈ ಮಂತ್ರದಿಂದ ಅಲಂಕರಿಸಿದ ಗೋವನ್ನು ಪೂಜೆ ಮಾಡಬೇಕು) ಗೋವರ್ಧನ ಪೂಜೆ, **ಬಲಿರಾಜ್ಞೋ ದ್ವಾರಪಾಲೋ ಭವಾನದ್ಯ ಜಯಪ್ರಭೋ। ನಿಜವಾಕ್ಸಾಧನಾರ್ಥಾಯ ಸಗೋವರ್ಧನ ಗೋಪತೇ** (ಈ ಮಂತ್ರದಿಂದ ಗೋವರ್ಧನ ಸಹಿತನಾದ ಗೋವಿಂದನನ್ನು ಆವಾಹನೆ ಮಾಡಿ ಪೂಜಿಸಬೇಕು) **ಗೋಪಾಲಮೂರ್ತೇ ವಿಶ್ವೇಶ ಶಕ್ರೋತ್ಸವವಿಭೇದಕ। ಗೋವರ್ಧನಕೃತಛತ್ರಪೂಜಾಂಮೇ ಹರಗೋಪತೇ॥ ಗೋವರ್ಧನ ಧರಾಪಾಶ ಗೋಕುಲತ್ರಾಣಕಾರಕ ವಿಷ್ಣುಬಾಹು ಕೃತಚ್ಛಾಯ ಗವಾಂ ಕೋಟಿಪ್ರದೋಭವ॥** (ಈ ಮಂತ್ರದಿಂದ ಗೋವರ್ಧನ ಪರ್ವತವನ್ನು

ಶ್ರೀಕೃಷ್ಣನನ್ನು ಷೋಡಶೋಪಚಾರಗಳಿಂದ ಪೂಜೆಮಾಡಿ ವಿಶೇಷವಾಗಿ ನೈವೇದ್ಯ ಗೋಗ್ರಾಸವನ್ನು ಕೊಡಬೇಕು) ಮಾರ್ಗಪಾಲಿ ಬಂಧನ ಇದೇ ದಿನ ಸಾಯಂಕಾಲದಲ್ಲಿ ದರ್ಭೆಯ ಹಗ್ಗವನ್ನು ಎತ್ತರವಾದ ಗಿಡಗಳಿಗೆ ಕಟ್ಟಿ ಅದರ ಅಡಿಯಲ್ಲಿ ಪರಿವಾರ ಸಹಿತವಾಗಿ ಹೋಗಬೇಕು. **ಮಾರ್ಗಪಾಲಿ ನಮಸ್ತೇಸ್ತು ಸರ್ವಲೋಕ ಸುಖಪ್ರದೇ । ವಿಧೇಯೈಃ ಪುತ್ರ ದಾರಾದ್ಯೈಃ ಪುನರೇಹಿ ವ್ರತಸ್ಯಮೇ ಇತಿ ಪ್ರಾರ್ಥನಾ ॥**

23.10.25 ಯಮ ದ್ವಿತೀಯಾ, ಈ ದಿನ ಯಮುನೆಯು ತನ್ನ ಅಣ್ಣನಾದ ಯಮನಿಗೆ ಊತಣ ಮಾಡಿಸಿದ್ದರಿಂದ **ಯಮದ್ವಿತೀಯ** ಎಂದು ಹೆಸರು ಬಂದಿದೆ. ಈ ದಿನದಲ್ಲಿ ಪ್ರಯತ್ನ ಮಾಡಿಯಾದರೂ ಸಹೋದರಿಯ ಮನೆಯಲ್ಲಿ ಊಟಮಾಡಬೇಕು. ಸಹೋದರಿಯರಿಗೆ ವಸ್ತ್ರಾಭರಣಗಳನ್ನು ಕೊಡುವುದರಿಂದ ತನಗೆ ಧನ, ಧಾನ್ಯ, ವಸ್ತ್ರಭೂಷಣ ಲಾಭವು ಸುಖವೂ ಆಗುತ್ತದೆ, ಚಿತ್ರಗುಪ್ತರನ್ನು ಯಮದೂತರಸಹಿತ ಯಮಧರ್ಮರಾಜರನ್ನು ಪೂಜಿಸಬೇಕು. ಈ ದಿನ ಯಮುನಾ ಸ್ನಾನ ಶ್ರೇಷ್ಠ.

24.10.25 ಭಗಿನಿ ತೃತೀಯ, ಈ ದಿನ ಅಣ್ಣ ತಮ್ಮಂದಿರು ಅಕ್ಕ ತಂಗಿಯರನ್ನು ಮನೆಗೆ ಕರೆದು ಭೋಜನಮಾಡಿಸಿ ಉಡುಗೊರೆಗಳನ್ನು ಕೊಡಬೇಕು.

26.10.25 ಪಾಂಡವ ಪಂಚಮಿ.

29.10.25 ದುರ್ಗಾಷ್ಟಮೀ, ಗೋಪಾಷ್ಟಮೀ, ಗೋಪೂಜಾ, ಗೋಪ್ರದಕ್ಷಿಣ. ಸಾಯಂಕಾಲದಲ್ಲಿ ಗೋಪೂಜೆಮಾಡಿ ಗ್ರಾಮ (ಮಧುರಾನಗರಿ) ಪ್ರದಕ್ಷಿಣೆ.

30.10.25 ಕೂಷ್ಮಾಂಡನವಮೀ, ಕೂಷ್ಮಾಂಡದಾನ, ಕೃತಯುಗಾದಿ. ಮಧುರಾಪ್ರದಕ್ಷಿಣೆ.

01.11.25 ದಶಮೀ ಅನುಷ್ಠಾನ. ಹರಿವಾಸರ ರಾತ್ರಿ 9.01ನಿ.ದಿಂದ.

02.11.25 ಸರ್ವೇಷಾಮೇಕಾದಶೀ (ಪ್ರಬೋಧಿನಿ) ಭೀಷ್ಮಪಂಚಕವ್ರತ ಗ್ರಹಣಕ್ಕೆ ಬರುವುದಿಲ್ಲ.

03.11.25 ಪ್ರಭೋದೋತ್ಸವ, ಚಾತುರ್ಮಾಸ್ಯ ವ್ರತಸಮಾಪ್ತಿ, ತಾಪಸ ಮನ್ವಾದಿ, ಪ್ರದೋಷ, ಉತ್ಥಾನ ದ್ವಾದಶಿ, ಈ ದಿನದಲ್ಲಿ ಸೂರ್ಯಸ್ತವಾದಮೇಲೆ ತುಲಸಿ–ಧಾತ್ರಿ–ರಾಧಾ ಸಮೇತ ಕಾರ್ತೀಕ ದಾಮೋದರನನ್ನು ಕೂಡಿಸಿ – ಪುರುಷ ಸೂಕ್ತದಿಂದ ಷೋಡಶೋಪಚಾರ ಪೂಜೆಯನ್ನು ಮಾಡಬೇಕು. ಘಂಟಾದಿವಾದ್ಯಘೋಷಗಳಿಂದ **ಬ್ರಹ್ಮೇಂದ್ರರುದ್ರಾಗ್ನಿ ಕುಬೇರಸೂರ್ಯ ಸೋಮಾದಿಭಿರ್ವಂದಿತ ವಂದನೀಯ । ಬುದ್ದ್ಯಸ್ವ ದೇವೇಶ ಜಗನ್ನಿವಾಸ ಮಂತ್ರಪ್ರಭಾವೇಣ ಸುಖೇನ ದೇವ ॥ ಇಯಂಚ ದ್ವಾದಶೀ ದೇವ ಪ್ರಬೋಧಾರ್ಥಂತು ನಿರ್ಮಿತಾ । ತ್ವಯೈವ ಲೋಕನಾಥಾನಾಂ ಹಿತಾರ್ಥಂ ಶೇಷಶಾಯಿನಾ ॥**

**ಉತ್ತಿಷ್ಠೋತ್ತಿಷ್ಠ ಗೋವಿಂದ ತ್ಯಜನಿದ್ರಾಂ ಜಗತ್ಪತೇ।**
**ತ್ವಯಿ ಸುಪ್ತೇ ಜಗತ್ಸುಪ್ತಂ ಉತ್ಥಿತೇ ಚೋತ್ಥಿತಂ ಜಗತ್॥**

ಎಂಬ ಮಂತ್ರದಿಂದ ಶ್ರೀಹರಿಯನ್ನು ಎಬ್ಬಿಸಬೇಕು ಅಂದರೆ ಪ್ರಾರ್ಥಿಸಬೇಕು.

**ಗತಾಮೇಘಾವಿಯಚ್ಚೈವ ನಿರ್ಮಲಂ ನಿರ್ಮಲಾದಿಶಃ । ಶಾರದಾನಿಚ ಪುಷ್ಪಾಣಿ ಗೃಹಾಣ ಮಮ ಕೇಶವ॥** ಎಂಬ ಮಂತ್ರದಿಂದ ಪುಷ್ಪಾಂಜಲಿಯನ್ನು ಸಮರ್ಪಿಸಬೇಕು.

ತುಳಸೀ ವಿವಾಹ, ಉತ್ಥಾನ ದ್ವಾದಶಿ ದೇವರನ್ನು (ಕಾರ್ತೀಕ ದಾಮೋದರ) ತುಳಸಿಗೆ ಅಭಿಮುಖವಾಗಿ ನಿಲ್ಲಿಸಿ ಪೂಜಿಸಿ ಅಂತಃ ಪಟವನ್ನು ಹಿಡಿದು ಮಂಗಳಾಷ್ಟಕವನ್ನು ಪಠಿಸಬೇಕು.

**ದೇವೀಂ ಕನಕಸಂಪನ್ನಾಂ ಕನಕಾಭರಣೈ ರ್ಯುತಾಂ।**
**ದಾಸ್ಯಾಮಿ ವಿಷ್ಣವೇ ತುಭ್ಯಂ ಬ್ರಹ್ಮಲೋಕಜಿಗೀಷಯಾ॥**

ಎಂಬ ಮಂತ್ರದಿಂದ ತುಳಸಿಯನ್ನು ದಾಮೋದರನ ಕೈಯಲ್ಲಿ ಕೊಟ್ಟು ಅಕ್ಷತೆ ಜಲವನ್ನು ಬಿಡಬೇಕು.

04.11.25 ಶುಕ್ಲಂಗಾರಕ ಚತುರ್ದಶೀ, ಸುವರ್ಣಾನದಿಸ್ನಾನದಿಂದ ವಿಶೇಷ ಫಲ, ವೈಕುಂಠ ಚತುರ್ದಶಿ, ವಿಷ್ಣುಪೂಜೆ.

05.11.25 ವ್ಯಾಸಪೂರ್ಣಿಮ, ಇಂದ್ರಸಾವರ್ಣಿ ಮನ್ವಾದಿ, ಕಾಮ್ಯವೃಷೋತ್ಸರ್ಗ, ದೀಪೋತ್ಸವಪೂರ್ಣಿಮ, ಕಾರ್ತೀಕಸ್ನಾನ ಸಮಾಪ್ತಿ, ಧಾತ್ರೀಹವನ, ವನಭೋಜನ ಕೊನೆಯ ದಿನ, ವಿಷ್ಣುಪಂಚಕೋಪಾಸ.

**ವನಭೋಜನ :–** ಈ ಮಾಸದಲ್ಲಿ ನೆಲ್ಲಿ ಗಿಡದ ಕೆಳಗೆ ತುಳಸಿಧಾತ್ರಿ ರಾಧಾಸಮೇತ ಕಾರ್ತೀಕ ದಾಮೋದರನನ್ನು ಪೂಜಿಸಿ ವನ ಭೋಜನವನ್ನು ಧಾತ್ರಿಹವನ ಮಾಡಬೇಕು. ಈ ವನಭೋಜನ ಮಾಡುವುದರಿಂದ ಒಂದು ವರ್ಷದವರೆಗೆ ಪರಾನ್ನಭೋಜನಾದಿಗಳಿಂದ ಬಂದ ದೋಷವು ಹೋಗುತ್ತದೆ. ನೆಲ್ಲಿಯ ಗಿಡದ ಕೆಳಗೆ ಕಾರ್ತೀಕ ಶುದ್ಧ ತ್ರಯೋದಶಿ–ಚತುರ್ದಶಿ ಪೂರ್ಣಿಮೆ ಅಥವಾ ಕಾರ್ತೀಕ ಬಹುಳ ಪಂಚಮೀವರೆಗೆ ಶುಕ್ರವಾರ, ಭಾನುವಾರ, ಮಂಗಳವಾರ ಬಿಟ್ಟು ಇತರ ದಿನಗಳಲ್ಲಿ ಸ್ಥಾಪಿಸಿ ಪೂಜಿಸಿ ಉತ್ತಮ ರೀತಿಯಿಂದ ಹೆಸರು ಬೇಳೆ ತೊವ್ವೆ, ಬೆಲ್ಲ–ತುಪ್ಪಗಳಿಂದ ಮಾಡಿದ ಅಪೂಪಗಳಿಂದ ಹೋಮವನ್ನು ಮಾಡಿ ಧಾತ್ರಿ ದೇವಿಯನ್ನು ಪ್ರಾರ್ಥಿಸಬೇಕು.

**ದೇವಿ ಧಾತ್ರಿ ನಮಸ್ತುಭ್ಯಂ ಗೃಹಾಣಬಲಿಮುತ್ತಮಮ್। ಮಿಶ್ರಿತಂ ಗುಡಸೂಪಾಭ್ಯಾಂ ಸರ್ವ ಮಂಗಳದಾಯಿನಿ॥** (ಎಂದು ಬಲಿಹಾಕಿ). **ಪುತ್ರಾನ್ದೇಹಿ ಮಹಾ ಪ್ರಾಜ್ಞೇ ಯಶೋದೇಹಿ ನಿರಂತರಮ್। ಪ್ರಜ್ಞಾಂಮೇಧಾಂಚ ಸೌಭಾಗ್ಯಂ ವಿಷ್ಣು ಭಕ್ತಿಂ ಚ ದೇಹಿಮೇ॥ ನೀರೋಗಂ ಕುರುಮಾಂನಿತ್ಯಂ ನಿಷ್ಪಾಪಂ ಕುರುಸರ್ವದಾ। ಸರ್ವಜ್ಞಂ ಕುರು ಮಾಂ ದೇವಿ ಧನವಂತಂ ತಥಾ ಕುರು॥** ಈ ವನ ಭೋಜನದಿಂದ ಪರಾನ್ನ ಭೋಜನ, ಶೂದ್ರ ದೃಷ್ಟವಾದ ಅನ್ನ ಭೋಜನ, ವೈಶ್ವದೇವ ಮಾಡಿದ ಅನ್ನವನ್ನು ಭೋಜನ ಮಾಡದ ದಕ್ಷಿಣಾಯನದಲ್ಲಿ ಸಂಭವಿಸಿದ ಎಲ್ಲಾ ದೋಷಗಳೂ ಪರಿಹಾರವಾಗುತ್ತದೆ.

15.11.25 ದಶಮೀ ಅನುಷ್ಠಾನ, ಹರಿವಾಸರ ರಾತ್ರಿ 9.51ನಿ.ವರೆಗೆ.

16.11.25 ಸರ್ವೇಷಾಮೇಕಾದಶೀ (ಉತ್ಪತ್ತೀ) ವೃಶ್ಚಿಕ ಸಂಕ್ರಮಣ. ಮಹಾಲಯ ಉತ್ತರಾವಧಿ,

17.11.25 ಪಾರಣೆ, ದನ್ವಂತರೀ ಜಯಂತೀ, ಸೋಮಪ್ರದೋಷ.

19.11.25 ಶ್ರೀಪದ್ಮನಾಭತೀರ್ಥರ ಆರಾಧನೆ. ಪಂಕಜನಾಭ ವಿದ್ವತ್ ಸಭಾ, ದರ್ಶ, ಅನ್ವಾಧಾನ, ವೈಶ್ವದೇವ, ಬಲಿಹರಣ, ಪಿಂಡಪಿತೃಯಜ್ಞ,

20.11.25 ಚೆಟ್ಟಿ ಅಮಾವಾಸ್ಯೆ, ವಿಷ್ಣುಪಂಚಕೋಪವಾಸ, ದರ್ಶೇಷ್ಟಿ, ಪದ್ಮಕಯೋಗ ಪ್ರಯುಕ್ತ ಸ್ನಾನ, ದಾನ, ಹೋಮಾದಿಗಳು ಹಾಗೂ ಶ್ರಾದ್ಧಾದಿ ಕಾರ್ಯಗಳಿಂದ ನೂರಾರು ಗ್ರಹಣಗಳಲ್ಲಿ ಮಾಡಿದ ಕಾರ್ಯದ ಪುಣ್ಯಫಲಪ್ರಾಪ್ತಿ.

## ಮಾರ್ಗಶಿರ ಮಾಸ

21.11.25 ಚಂದ್ರದರ್ಶನ

26.11.25 ಸ್ಕಂದ ಸುಬ್ರಹ್ಮಣ್ಯ ಷಷ್ಠಿ, ಚಂಪಾಷಷ್ಠಿ.

01.12.25 ಸರ್ವೇಷಾಮೇಕಾದಶೀ (ಮೋಕ್ಷದಾ) ಗೀತಾಜಯಂತಿ, ಗೀತಾಪಾರಾಯಣ, ಶ್ರೀಮದ್ಭಗವದ್ಗಿತಾ ಪಾರಾಯಣ, ಪಾಠ, ಪ್ರವಚನ, ಶ್ರೀವಿಷ್ಣುಸಹಸ್ರಾನಾಮ ಇತ್ಯಾದಿ ಭಗವಂತನಿಗೆ ಪ್ರೀತಿಕರವಾದದ್ದು.

02.12.25 ಪಾರಣೆ. ಹನುಮದ್ವ್ರತ, ಅನಂಗತ್ರಯೋದಶೀ, ಭೌಮಪ್ರದೋಷ.

04.12.25 ದತ್ತ ಜಯಂತಿ, ಹೊಸ್ತಿಲ ಹುಣ್ಣಿಮೆ, ಲವಣದಾನೇನ ಸುರೂಪತಾ, ಅನ್ವಾಧಾನ, ವಿಷ್ಣುಪಂಚಕೋಪವಾಸ.

09.12.25 ಶ್ರೀಮದಕ್ಷೋಭ್ಯತೀರ್ಥ ಪುಣ್ಯದಿನ.

16.12.25 ಧನುಸ್ಸಂಕ್ರಮಣ.

17.12.25 ಧನುರ್ಮಾಸ ಪ್ರಾರಂಭ, ಧನುರ್ಮಾಸವು ದೇವತೆಗಳಿಗೆ ರಾತ್ರಿಯ ಕೊನೆಯ ಭಾಗವಾದ ಅರುಣೋದಯಕಾಲದ ಆರಂಭವಾಗಿದೆ. ಅನ್ಯದೇವತೆಗಳು ದೇವರನ್ನು ಪೂಜಿಸಿ ಹುಗ್ಗಿಯನ್ನು ಅರ್ಪಿಸಿದರು. ದೇವತೆಗಳು ತಮ್ಮ ಅರುಣೋದಯ ಕಾಲದಲ್ಲಿ ದೇವರನ್ನು ಪೂಜಿಸುವುದರಿಂದ ಮನುಷ್ಯರು ತಮ್ಮ ಅರುಣೋದಯ ಕಾಲದಲ್ಲಿ ಧನುರ್ಮಾಸದಲ್ಲಿ ಶ್ರೀಹರಿಯನ್ನು ಪೂಜಿಸಿ ಹೆಸರುಬೇಳೆ ಮಿಶ್ರಿತ ಶುಂಠಿಯನ್ನು ಸೇರಿಸಿ ಹುಗ್ಗಿಯನ್ನು ಮಾಡಿ ಧನುರ್ನಾರಾಯಣನಿಗೆ ನೈವೇದ್ಯ ಮಾಡಿ ಪ್ರಾತಃಕಾಲದಲ್ಲಿ ಕುಟುಂಬಸ್ಥ ಬ್ರಾಹ್ಮಣ ಭೋಜನ ಮಾಡಿಸಬೇಕು.

**ಶ್ರೀದೇವೀ ಪ್ರಥಮಂ ನಾಮ ದ್ವಿತೀಯಮಮೃತೋದ್ಭವಾ। ತೃತೀಯಂ ಕಮಲಾ ಪ್ರೋಕ್ತಾ ಚತುರ್ಥಂ ಲೋಕಸುಂದರೀ॥ ಪಂಚಮಂ ವಿಷ್ಣುಪತ್ನೀ ಚ ಷಷ್ಠಂ ಶ್ರೀವೈಷ್ಣವೀ ತಥಾ॥ ಸಪ್ತಮಂ ತು ವರಾರೋಹಾ ಹ್ಯಷ್ಟಮಂ ಹರಿವಲ್ಲಭಾ॥ ನವಮಂ ಶಾರ್ಙ್ಗಿಣೀ ಪ್ರೋಕ್ತಾ ದಶಮಂ ದೇವದೇವಿಕಾ। ಏಕಾದಶಂ ಮಹಾಲಕ್ಷ್ಮೀರ್ದ್ವಾದಶಂ ಲೋಕಸುಂದರೀ॥ ಶ್ರೀಃಪದ್ಮಾ ಕಮಲಾ ಮುಕುಂದಮಹಿಷೀ ಲಕ್ಷ್ಮೀಸ್ತ್ರಿಲೋಕೇಶ್ವರೀ। ಮಾ ಕ್ಷೀರಾಬ್ಧಿ ಸುತಾ ವಿರಿಂಚಜನನೀ ವಿದ್ಯಾ ಸರೋಜಾನನಾ, ಸರ್ವಾಭೀಷ್ಟಫಲಪ್ರದೇತಿ ಸತತಂ ನಾಮಾನಿ ಯೇ ದ್ವಾದಶ॥ ಪ್ರಾತಃ ಶುದ್ಧತರಾ ಪಠಂತ್ಯಭಿಮತಾನ್ ಸರ್ವಾನ್ ಲಭಂತೇ ಗುಣಾನ್॥** ಎಂದು ಸ್ತೋತ್ರ ಮಾಡಬೇಕು.

**ಧನುರ್ವ್ಯತೀಪಾತ ಯೋಗ :** ಧನುರ್ಮಾಸದಲ್ಲಿ ವ್ಯತೀಪಾತ ಯೋಗದಲ್ಲಿ ಅರುಣೋದಯಕಾಲದಲ್ಲಿ ವಿಷ್ಣುವನ್ನು ಪೂಜಿಸಿ **ವ್ಯತೀಪಾತ ಮಹಾಸತ್ವ ಸರ್ವಪಾಪ ಪ್ರಣಾಶನ। ಸಹಸ್ರಬಾಹೋ ವಿಶ್ವಾತ್ಮನ್ ಗೃಹಾಣಾರ್ಘ್ಯಂ ನಮೋಸ್ತುತೇ॥ ವ್ಯತೀಪಾತ ನಮಸ್ತೇಸ್ತು ನಮಸ್ತೇ ವಿಶ್ವಮಂಗಲ। ವಿಷ್ಣುಚಕ್ರ ಸ್ವರೂಪಾಯ ನಮಸ್ತೇ ದಿವ್ಯತೇಜಸೇ॥** ಎಂಬ ಮಂತ್ರದಿಂದ ವಿಷ್ಣುಚಕ್ರ ರೂಪಿಯಾದ ವ್ಯತೀಪಾತ ದೇವತೆಗೆ ಅರ್ಘ್ಯವನ್ನು ಕೊಡಬೇಕು. ಆಮೇಲೆ ದಕ್ಷಿಣಾಭಿಮುಖವಾಗಿ ಸಮಸ್ತ ಪಿತೃಗಳನ್ನೂ ಸ್ಮರಿಸುತ್ತಾ **ವಿಷ್ಣುಪ್ರಿಯ ವ್ಯತೀಪಾತ ಪಿತೃಣಾಮನೃಣಪ್ರದ। ಪಿತ್ರೂಣಾಂ ಮಮ ವೈಕುಂಠಂ ಪ್ರಯಚ್ಛ ಭಗವನ್ ಹರೇ॥ ತ್ವತ್ಪ್ರಸಾದೇನ ಮೇಭಕ್ತಿ ರಸ್ತ್ವೇವಮನಪಾಯಿನೀ। ಜ್ಞಾನವಿಜ್ಞಾನ ವೈರಾಗ್ಯಂ ಪ್ರಯಚ್ಛ ಭಗವನ್ಮಮ॥** ಎಂಬ ಮಂತ್ರದಿಂದ ತರ್ಪಣವನ್ನು (ಅಧಿಕಾರವಿದ್ದವರು) ಕೊಡಬೇಕು. ಈ ವ್ಯತೀಪಾತ ದಿನದ ಪೂಜೆಯ ಅರ್ಧೋದಯಾದಿ ಮಹಾಪುಣ್ಯ ಕಾಲಕ್ಕಿಂತ ಸಹಸ್ರಪಾಲು ಅಧಿಕ ಪುಣ್ಯ ಪ್ರದವಾಗಿದೆ.

19.12.25 ಎಳ್ಳಮಾವಾಸ್ಯೆ, ವಿಷ್ಣುಪಂಚಕೋಪವಾಸ, ದರ್ಶ, ವೈಶ್ವದೇವ, ಬಲಿಹರಣ. ಸರ್ವೇಷಾಂ ಪಿಂಡಪಿತೃಯಜ್ಞ.

## ಪುಷ್ಯ ಮಾಸ

27.12.25 ಧನುರ್ವ್ಯತೀಪಾತಯೋಗ.

28.12.25 ದುರ್ಗಾಷ್ಟಮೀ, ಬನಶಂಕರೀ ನವರಾತ್ರಾರಂಭ.

30.12.25 ವೈಕುಂಠ ಏಕಾದಶಿ, ರೈವತ ಮನ್ವಾದಿ.

31.12.25 ಮುಕ್ಕೋಟಿದ್ವಾದಶಿ, ಪಾರಣೆ,

01.01.26 ಪ್ರದೋಷ.

02.01.26 ಶಾಕಂಬರಿಗೆ ಸರ್ವಶಾಕಾ ನಿವೇದನೆ.

03.01.26 ಬನದಹುಣ್ಣಿಮೆ, ಶಾಕಂಬರಿ ರಥ, ಮಾಘಸ್ನಾರಂಭ, ಅನ್ವಾಧಾನ, ವಿಷ್ಣುಪಂಚಕೋಪವಾಸ. ಈ ದಿನದಿಂದ ಒಂದು ತಿಂಗಳು ಮಾಘ ಶುದ್ಧ ಪೌರ್ಣಮಿವರೆಗೆ ಮಾಘಸ್ನಾನ. ಮಾಸನಿಯಮಾಕನಾದ ಮಾಧವನ ಪ್ರೀತ್ಯರ್ಥವಾಗಿ ಅರುಣೋದಯಕ್ಕೆ ನದಿ ಮುಂತಾದ ತೀರ್ಥಗಳಲ್ಲಿ ಪ್ರಾತಃ ಸ್ನಾನವನ್ನು ಮಾಡಬೇಕು.

**ಮಾಘಸ್ನಾನದ ಫಲ :** ಮನೆಯಲ್ಲಿ ಬಿಸಿನೀರಿನಿಂದ ಮಾಡಿದ ಸ್ನಾನಕ್ಕೆ 6 ವರ್ಷಗಳಲ್ಲಿ ಮಾಡಿದ ಸ್ನಾನಫಲ, ಭಾವಿನೀರಿನಲ್ಲಿ 12 ವರ್ಷಗಳ ಫಲ, ಕೆರೆಯಲ್ಲಿ 24 ವರ್ಷಗಳ ಫಲ, ನದಿಯಲ್ಲಿ 69 ವರ್ಷಗಳ ಫಲ, ಮಹಾನದಿಗಳಲ್ಲೂ 6900 ವರ್ಷಗಳ ಫಲ, ಮಹಾನದಿಗಳ ಸಂಗಮದಲ್ಲಿ 38,400 ವರ್ಷಗಳ ಫಲ, ಗಂಗೆಯಲ್ಲಿ **ಮಾಘಸ್ನಾನಮಿಮಂ ಪೂರ್ಣಂ ಸ್ನಾಸ್ಯೇಽಹಂ ದೇವ ಮಾಧವ। ತೀರ್ಥಸ್ಯಾಸ್ಯಜಲೇ ನಿತ್ಯಮಿತಿ ಸಂಕಲ್ಪ್ಯ ಚೇತಸಿ॥ ದುಃಖ ದಾರಿದ್ರ್ಯನಾಶಾಯ ಶ್ರೀವಿಷ್ಣೋಸ್ತೋಷಣಾಯ ಚ। ಮಕರಸ್ಥೇರವೌ ಮಾಘೇ ಗೋವಿಂದಾಚ್ಯುತ ಮಾಧವ॥ ಸ್ನಾನೇನಾನೇನ ಮೇ ದೇವ ಯಥೋಕ್ತಫಲದೋಭವ॥** ಎಂಬ ಮಂತ್ರದಿಂದ ಸ್ನಾನ ಮಾಡಬೇಕು.

**ಸೂರ್ಯಾರ್ಘ್ಯ ಮಂತ್ರಃ – ಸವಿತ್ರೇ ಪ್ರಸವಿತ್ರೇ ಚ ಪರಂಧಾಮ ಜಲೇ ಮಮ। ತ್ವತ್ತೇಜಸಾ ಪರಿಭ್ರಷ್ಟಂ ಪಾಪಂಯಾತು ಸಹಸ್ರಧಾ॥** ಎಂಬ ಮಂತ್ರದಿಂದ ಅರ್ಘ್ಯವನ್ನು ಕೊಟ್ಟು ಪಿತೃತರ್ಪಣಾದಿಗಳನ್ನು ನಿತ್ಯಕರ್ಮಗಳನ್ನು ಮುಗಿಸಿ ಮಾಧವನನ್ನು ಪೂಜಿಸಬೇಕು. ಮಹೋದಯ ಯೋಗ, ಪುಷ್ಯ ಮಾಸದಲ್ಲಿ ಭಾನುವಾರ ಪುಷ್ಯನಕ್ಷತ್ರವಿದ್ದರೆ ಪುಷ್ಯಾರ್ಕಯೋಗವೆಂದು ಹೆಸರು. (ಶ್ರೀರಾಘವೇಂದ್ರ ಸ್ತೋತ್ರ ಅಷ್ಟೋತ್ತರ ಪಾರಾಯಣ – ಹವನ–ಹೋಮ ವಿಶೇಷವಾಗಿ ಭಕ್ತರು ಆಚರಿಸುವ ಕಾಲ) ಪುಷ್ಯ ಮತ್ತು ಮಾಘಮಾಸಗಳಲ್ಲಿ ಭಾನುವಾರ–ಅಮಾವಾಸ್ಯೆ ವ್ಯತೀಪಾತಯೋಗ। ಶ್ರವಣನಕ್ಷತ್ರ ಈ ನಾಲ್ಕು ಒಟ್ಟು ಗೂಡಿದರೆ ಅರ್ಧೋದಯ ಯೋಗವೆಂದು ಹೆಸರು. ಈ ನಾಲ್ಕರಲ್ಲಿ ಯಾವುದಾದರು ಒಂದು ಕಡಿಮೆಯಿದ್ದರೆ ಮಹೋದಯಯೋಗ, ಶ್ರೀಪುರಂದರದಾಸರ ಆರಾಧನೆ ದಿನ ಈ ಯೋಗವು ಸಾಧಾರಣವಾಗಿ ಇರುತ್ತದೆ. ಸ್ನಾನ–ಧ್ಯಾನ, ಜಪ–ಪಾರಾಯಣ–ಪೂಜೆ ಮಹಾವಿಶೇಷವುಳ್ಳ ವ್ರತಗ್ರಹಣಕಾಲಕ್ಕಿಂತಲೂ ಈ ಮಹೋದಯಯೋಗ ಪುಣ್ಯಫಲ ವ್ರತ.

10.01.26 ಶ್ರೀನರಹರಿತೀರ್ಥರ ಪುಣ್ಯದಿನ.

13.01.26 ಧನುರ್ಮಾಸ ಸಮಾಪ್ತಿ.

14.01.26 ಸರ್ವೇಷಾಮೇಕಾದಶೀ (ಷಟ್ತಿಲ), ಭೋಗಿ, ಮಕರ ಸಂಕ್ರಮಣ.

15.01.26 ಪಾರಣೆ, ಸೂರ್ಯೋದಯದಿಂದ ಬೆಳಿಗ್ಗೆ 8–56ನಿ. ವರೆಗೆ, ಉತ್ತರಾಯಣ ಪರ್ವಪುಣ್ಯಕಾಲ, ಉತ್ತರಾಯಣಾರಂಭ, ಷಟ್ತಿಲಕರ್ಮಾನುಷ್ಠಾನ, ಪಾರಣೆಗೆ ಮೊದಲು ಸಂಕ್ರಮಣ ಪ್ರಯುಕ್ತ ಷಟ್ತಿಲಕರ್ಮಗಳನ್ನು ಆಚರಿಸಬೇಕು.

18.01.26 ಶ್ರೀಪುರಂದರದಾಸರ ಪುಣ್ಯದಿನ, ಅಮೃತನ ಅಮಾವಾಸ್ಯೆ, ದರ್ಶ, ಅನ್ವಾಧಾನ, ವೈಶ್ವದೇವ, ಬಲಿಹರಣ ಪಿಂಡಪಿತೃಯಜ್ಞ, ವಿಷ್ಣುಪಂಚಕೋಪವಾಸ.

## ಮಾಘ ಮಾಸ

19.01.26 ಸರ್ವಮೂಲ, ಸುಮಧ್ವ ವಿಜಯ ಪಾರಾಯಣ, ನಿತ್ಯ ಶ್ರೀಮುಖ್ಯಪ್ರಾಣದೇವರಿಗೆ ವಾಯುಸ್ತುತಿ ಪುನಶ್ಚರಣ ಪೂರ್ವಕ ವಿಶೇಷ ಕ್ಷೀರಾಭಿಷೇಕ, ಇಂದಿನಿಂದ ಒಂಬತ್ತು ದಿನ ಮಧ್ವಸಿದ್ಧಾಂತ ತತ್ವಗಳ ಬಗ್ಗೆ ಪಂಡಿತರಿಂದ ಉಪನ್ಯಾಸ.

25.01.26 ರಥಸಪ್ತಮಿ, ಅರುಣೋದಯಕ್ಕೆ ಸಪ್ತಾರ್ಕಪರ್ಣಸ್ನಾನ ವೈವಸ್ವತಮನ್ವಾದಿ, ತರ್ಪಣ, ರಥಸ್ಥಸೂರ್ಯ ಪೂಜಾ, ಈ ದಿನದಲ್ಲಿ ಏಳು ಎಕ್ಕೆ ಎಲೆಗಳನ್ನು ತಲೆಮೇಲೆ ಅಂಗಾಂಗಳಲ್ಲಿ ಇಟ್ಟುಕೊಂಡು ಏಳು ಸಲ ನದಿಯಲ್ಲಿ (ಅವಗಾಹನೆ) ಸ್ನಾನ ಮಾಡಬೇಕು.

**ಸಪ್ತಸಪ್ತಮಹಾಸಪ್ತ ಸಪ್ತದ್ವೀಪಾವಸುಂಧರಾ। ಸಪ್ತಾರ್ಕಪರ್ಣಮಾದಾಯ ಸಪ್ತಮ್ಯಾಂ ಸ್ನಾನಮಾಚರೇತ್। ಯದ್ಯಜ್ಜನ್ಮಕೃತಂಪಾಪಂ ಮಯಾಜನ್ಮಸು ಜನ್ಮಸು। ತನ್ಮೇ ರೋಗಂ ಚ ಶೋಕಂ ಚ ಮಾಕರೀ ಹಂತು ಸಪ್ತಮೀ। ಏತಜ್ಜನ್ಮ ಕೃತಂ ಪಾಪಂ ಯಚ್ಚ ಜನ್ಮಾಂತರಾರ್ಜಿತಮ್। ಮನೋವಾಕ್ಕಾಯಜಂ ಯಚ್ಚ ಜ್ಞಾತಾಜ್ಞಾತೇಚ ಯೇ ಪುನಃ। ಇತಿಸಪ್ತ ವಿಧಂಪಾಪಂ ಸ್ನಾನಾನ್ಮೇ ಸಪ್ತಸಪ್ತಿಕೇ। ಸಪ್ತವ್ಯಾಧಿಸಮಾಯುಕ್ತಂ ಹರ ಮಾಕರಿಸಪ್ತಮಿ।** ಎಂಬ ಈ ಮಂತ್ರದಿಂದ ಸ್ನಾನ ಮಾಡಬೇಕು. **ಸಪ್ತಸಪ್ತಿವಹಪ್ರೀತಾ ಸಪ್ತಲೋಕಪ್ರದೀಪನ। ಸಪ್ತಮೀಸಹಿತೋದೇವ ಗೃಹಾಣಾರ್ಘ್ಯಂದಿವಾಕರ॥** (ಸೂರ್ಯಾರ್ಘ್ಯವನ್ನು ಕೊಡಬೇಕು).

26.01.26 ಭೀಷ್ಮಾಷ್ಠಮಿ, ಭೀಷ್ಮರಿಗೆ ತರ್ಪಣ (ಜೀವಪ್ಪಿತೃಗಳೂ ಸಹ ಕೊಡಬೇಕು) **ವೈಯಾಘ್ರಪಾದಗೋತ್ರಾಯ ಸಾಂಕೃತಿಪ್ರವರಾಯಚ। ಗಂಗಾಪುತ್ರಾಯ ಭೀಷ್ಮಾಯ ಆಜನ್ಮ ಬ್ರಹ್ಮಚಾರಿಣೇ। ಅಪುತ್ರಾಯ ಜಲಂದದ್ಮಿ ನಮೋಭೀಷ್ಮಾಯ ವರ್ಮಣೇ॥ ಭೀಷ್ಮೋಶಾಂತನವೋವೀರಃ । ಸತ್ಯವಾದೀ ಜಿತೇದ್ರಿಂಯಃ। ಆಭಿರದ್ಭಿರವಾಪ್ನೋತು ಪುತ್ರಪೌತ್ರಾರ್ಚಿತಾ ಕ್ರಿಯಾಂ॥** (ಅಧಿಕಾರವಿದ್ದವರು ಅಪಸವ್ಯದಿಂದ ತರ್ಪಣ ಕೊಟ್ಟು ಸವ್ಯದಿಂದ ಆಚಮನ ಮಾಡಬೇಕು).

**ಅರ್ಘ್ಯಮಂತ್ರಃ :– ವಸೂನಾಮವತಾರಾಯ ಶಂತನೋರಾತ್ಮಜಾಯಚ। ಆರ್ಘ್ಯಂ ದದಾಮಿ ಭೀಷ್ಮಾಯ ಆಬಾಲಬ್ರಹ್ಮಚಾರಿಣೇ॥** ಎಂಬ ಮಂತ್ರದಿಂದ ಅರ್ಘ್ಯವನ್ನು ಕೊಡಬೇಕು.

27.01.26 ಮಧ್ವನವಮೀ, ಶ್ರೀಮಧ್ವಾಚಾರ್ಯರು ಉಡುಪಿ ಅನಂತೇಶ್ವರ ದೇವಾಲಯದಲ್ಲಿ ಉತ್ತಮ ಶಿಷ್ಯರಿಗೆ ಶ್ರೀಮದೈತ್ತರಿಯೋಪನಿಷತ್ತನ್ನು ಉಪದೇಶ ಮಾಡುತ್ತಿದ್ದಾಗ ರುದ್ರಾದಿ ದೇವತೆಗಳು ಈ ಉಪದೇಶವನ್ನು ಕೇಳಿ ಆನಂದದಿಂದ ಶ್ರೀಮದಾಚಾರ್ಯರ ಶಿರಸ್ಸಿನ ಮೇಲೆ ಪುಷ್ಪ ವೃಷ್ಟಿ ಸುರಿಸಿದರು. ಅವರ ಪ್ರಾರ್ಥನೆ ಮೇರೆಗೆ ಅದೃಶ್ಯರಾಗಿ ಬದರಿಕ್ಷೇತ್ರದಲ್ಲಿ ದೃಶ್ಯರಾಗಿ ಶ್ರೀವೇದವ್ಯಾಸದೇವರ ಸನ್ನಿಧಾನದಲ್ಲಿ ಸನ್ನಿಹಿತರಾಗಿದ್ದಾರೆ. ಈ ದಿನ ಮಧ್ವನವಮಿ.

30.01.26. ಭೀಮದ್ವಾದಶೀ, ಅಂತ್ಯಪುಷ್ಕರಣಿ, ತಿಲೋತ್ಪತ್ತಿ. ಪ್ರದೋಷ.

31.01.26 ಶುಕ್ರೋದಯ, ಪ್ರದೋಷ, ಕಲ್ಪಾದಿ, ಅಂತ್ಯಪುಷ್ಕರಣಿ, ಸ್ತ್ರೀಯರು ಮರದ ಬಾಗಿಣ ಕೊಡಬೇಕು. ಮುತ್ತೈದೆಯರು ದಂಪತಿವೀಳ್ಯ, ದಂಪತಿಭೋಜನ, ಮುತ್ತೈದೆರಿಗೆ ಮರದ ಬಾಗಿನ ಕೊಟ್ಟು ದೀರ್ಘ ಸೌಮಂಗಲ್ಯವನ್ನು ಹೊಂದಲು ಅರ್ಹರಾಗುತ್ತಾರೆ.

01.02.26 ಪ್ರತಿನಿತ್ಯ ಮಾಘ ಸ್ನಾನ ಮಾಡಲು ಅಶಕ್ತರಾದವರು ತ್ರಯೋದಶಿ, ಚತುರ್ದಶಿ, ಪೌರ್ಣಿಮಿ ಇವು ಅಂತ್ಯಪುಷ್ಕರಣಿ. ಈ ಸ್ನಾನವನ್ನು ಅತ್ಯಾವಶ್ಯಕವಾಗಿ ಮಾಡಬೇಕು.

02.02.26 ಭಾರತ ಹುಣ್ಣಿಮೆ, ವ್ಯಾಸಪೂರ್ಣಿಮಾ, ವ್ಯಾಸಪೂಜಾ, ಮಾಘಸ್ನಾನ ಸಮಾಪ್ತಿ, ಪುಷ್ಯಾರ್ಕಯೋಗ. ಅಂತ್ಯಪುಷ್ಕರಿಣಿ, ಅನ್ವಾಧಾನ ವೈಶ್ವದೇವ, ಬಲಿಹರಣ, ದ್ವಾಪರಯುಗಾದಿ, ಮಾಘ ಶುದ್ಧ ಪಂಚಮಿ ಬೆಲ್ಲತೊಗರಿಬೇಳೆ ದಾನದಿಂದ ಮಹಾಫಲ, ಸಪ್ತಮಿ ಕುಂಬಳಕಾಯಿ ದಾನದ ಜೊತೆ ಮುತ್ತು ಹವಳ, ಬಂಗಾರ ದಾನದಿಂದ ಸಂತತಿ ಅಭಿವೃದ್ಧಿ, ಅನಿಷ್ಟ ನಿವೃತ್ತಿ. ಮಾಘ ಶುದ್ಧ ತ್ರಯೋದಶಿ ಚತುರ್ದಶಿ ಹುಣ್ಣಿಮೆ 3 ದಿನ ಮರದ ಬಾಗಿನ, ಸೌಭಾಗ್ಯ ಪ್ರಾಪ್ತಿ ಈ ಮಾಸದಲ್ಲಿ ವೇಣಿದಾನ – ತಿಲಪಾತ್ರದಾನ–ಶಾಲಿಗ್ರಾಮದಾನ ತಿಲಮಿಶ್ರಜಲಸ್ನಾನ, ತಿಲಹೋಮ, ತಿಲಭಕ್ಷಣ, ದೇವಪೂಜಾದಿಗಳು ಭಾಗವತ – ಭಗವದ್ಗೀತೆ – ವಿಷ್ಣುಸಹಸ್ರನಾಮ ಪಾರಾಯಣ ಅಷ್ಟಮಹಾಮಂತ್ರ ಜಪ ಸರ್ವಮೂಲ ಪಾರಾಯಣ ವಿಹಿತವಾಗಿದೆ, ಕುಂಭಸಂಕ್ರಮಣ.

13.02.26 ಸರ್ವೇಷಾಮೇಕಾದಶೀ (ವಿಜಯಾ), ಕುಂಭ ಸಂಕ್ರಮಣ.

14.02.26 ಪಾರಣೆ, ಶನಿಪ್ರದೋಷ.

15.02.26 ಮಹಾಶಿವರಾತ್ರಿ, ಪ್ರದೋಷ ಕಾಲದಲ್ಲಿ ಶ್ರೀರುದ್ರಾಂತರ್ಯಾಮಿ ಶ್ರೀಸಂಕರ್ಷಣಮೂರ್ತಿ ದರ್ಶನ.

17.02.26 ವಾರುಣಿಯೋಗ, ಅಮಾವಾಸ್ಯೆ, ದರ್ಶ, ಅನ್ವಾಧಾನ, ವೈಶ್ವದೇವ, ಬಲಿಹರಣ, ಪಿತೃಯಜ್ಞ, ದ್ವಾಪರಯುಗಾದಿ. ವಿಷ್ಣುಪಂಚಕೋಪವಾಸ, ದರ್ಶೇಷ್ಟಿ, ಪದ್ಮಕಯೋಗ ಪ್ರಯುಕ್ತ ಸ್ನಾನ, ದಾನ, ಹೋಮಾದಿಗಳು ಹಾಗೂ ಶ್ರಾದ್ಧಾದಿ ಕಾರ್ಯಗಳಿಂದ ನೂರಾರು ಗ್ರಹಣಗಳಲ್ಲಿ ಮಾಡಿದ ಕಾರ್ಯದ ಪುಣ್ಯಫಲ ಪ್ರಾಪ್ತಿ.

## ಫಾಲ್ಗುಣ ಮಾಸ

27.02.26 ಸರ್ವೇಷಾಮೇಕಾದಶೀ (ಅಮಲಕಿ),

28.02.26 ಪಾರಣೆ.

01.02.26 ಪಯೋವ್ರತ ಸಮಾಪ್ತಿ, ಭಾನುಪ್ರದೋಷ, ಪುಷ್ಯಾರ್ಕಯೋಗ, ಮಾಸನಿಯಾಮಕ ಗೋವಿಂದ ಪ್ರೀತ್ಯರ್ಥವಾಗಿ ವಿಶೇಷ ಪೂಜೆ ದಾನ ಧರ್ಮ ಪಯೋವ್ರತ ಶ್ರೀಮದ್ಭಾಗವತದ ಅಷ್ಟಮಸ್ಕಂಧದಲ್ಲಿ ಉಕ್ತವಾಗಿರುವಂತೆ ಶ್ರೀಗೋವಿಂದನ ಪ್ರೀತ್ಯರ್ಥವಾಗಿ ಫಾಲ್ಗುಣ ಶುದ್ಧ ಪಾಡ್ಯದಿಂದ ದ್ವಾದಶೀವರಿಗೆ 12 ದಿನಗಳು ಮಾಡಬೇಕು. ಕ್ಷೀರಾಭಿಷೇಕ ಕ್ಷೀರದಿಂದ ಮಾಡಿದ ಭಕ್ಷಗಳ ನೈವೇದ್ಯ ದಂಪತಿಗಳು ಉಪವಾಸವಿದ್ದು ಕುಟುಂಬ ಭೋಜನ ಮಾಡಿಸಿದರೆ ಸತ್ಸಂತಾನವಾಗುವುದಲ್ಲದೆ ಮೋಕ್ಷ ಉಂಟಾಗುತ್ತದೆ.

02.03.26 ಹೋಳಿಕಾ–ಕಾಮದಹನ, ಈ ದಿನದಲ್ಲಿ ಸೂರ್ಯಾಸ್ತಮಾನಾ ನಂತರ **ಅಸ್ಮಾಭಿರ್ಭಯಸಂತಸ್ತೈ ವಿಕೃತಾತ್ವಂ ಹೋಲಿಕೇಯತಃ ಅತಸ್ತ್ವಾಂ ಪೂಜಯಿಷ್ಯಾಮಿ ಭೂತೇಭೂತಿಪ್ರದಾಭವ॥** – ಎಂಬ ಮಂತ್ರದಿಂದ ಹೋಳಿಗೆಯನ್ನು ಸುಟ್ಟು ಹೋಳಿಕಾದೇವಿಯನ್ನು ಪೂಜಿಸುವುದು ಕೆಲವರ ಸಂಪ್ರದಾಯವಿದೆ. ಮಾರನೆ ದಿನ –

**ವಂದಿತಾಸಿ ಸುರೇಂದ್ರೇಣ ಬ್ರಹ್ಮಣಾ ಶಂಕರೇಣಚ ।**
**ಅತಸ್ತ್ವಂ ಪಾಹಿ ನೋ ದೇವಿ ಭೂತೇ ಭೂತಿ ಪ್ರದಾಭವ ॥**

ಎಂಬ ಮಂತ್ರದಿಂದ ಸುಟ್ಟ ಬೂದಿಯನ್ನು ನಮಸ್ಕರಿಸಬೇಕು. ಫಾಲ್ಗುಣ ಬಹುಳ ಪಾಡ್ಯ ಆ ದಿನ ವಸಂತಪ್ರತಿಪತ್ ಎಂದು ಹೆಸರು. ಈ ದಿನ ಪೂರ್ವಾಭಿಮುಖವಾಗಿ ಮನೆ ಅಂಗಳದಲ್ಲಿ ಸಾರಿಸಿ–ರಂಗೋಲಿ ಹಾಕಿ ಶುಭ್ರವಸ್ತ್ರವನ್ನು ಉಟ್ಟುಕೊಂಡು ಆರತಿ ಮಾಡಿಸಿಕೊಂಡು **ಚೂತಮಗ್ರ್ಯಂ ವಸಂತಸ್ಯಮಾಕಂದ ಕುಸುಮಂತವ। ಸಚಂದನಂ ಪಿಬಾಮ್ಯದ್ಯ ಸರ್ವ ಕಾಮ್ಯಾರ್ಥ ಸಿದ್ಧಯೇ॥** ಎಂದು (ಗಂಧಯುಕ್ತವಾಗಿ ಮಾವಿನ ಹೂವನ್ನು ಪ್ರಾಶನ ಮಾಡಬೇಕು).

03.03.26 ಬ್ರಹ್ಮ ಸಾವರ್ಣಿ ಮನ್ವಾದಿ, ಹೋಳಿ ಹುಣ್ಣಿಮೆ, ಅನ್ವಾದಾನ, ವೈಶ್ವದೇವ ಬಲಿಹರಣ, ವಿಷ್ಣುಪಂಚಕೋಪವಾಸ, ಕರಿದಿನ, ಕೇತುಗ್ರಸ್ತ ಗ್ರಸ್ತೋದಯ ಖಗ್ರಾಸ ಚಂದ್ರಗ್ರಹಣ.

06.03.26 ಶ್ರೀವಾದಿರಾಜರ ಆರಾಧನೆ.

07.03.26 ಶ್ರೀವ್ಯಾಸರಾಜರ ಆರಾಧನೆ.

08.03.26 ಶ್ರೀವಿಜಯನಿಧಿತೀರ್ಥ ಆರಾಧನೆ.

18.03.26 ದರ್ಶ, ಅನ್ವಾಧಾನ, ವೈಶ್ವದೇವ, ಬಲಿಹರಣ, ಪಿಂಡಪಿತೃಯಜ್ಞ.

19.03.26 ಚಾಂದ್ರಮಾನ ಯುಗಾದಿ, ಶ್ರೀಪರಾಭವ ಸಂವತ್ಸರಾರಂಭ, ವಿಷ್ಣುಪಂಚಕೋವಾಸವಿಲ್ಲ, ಶ್ರೀರಾಮನವರಾತ್ರ್ಯಾರಂಭ, ಮನ್ವಾದಿ.

~*~

## ಉಪನಯನ ಮುಹೂರ್ತಗಳು

| ದಿನಾಂಕ | ವಾರ | ಮಾಸ | ತಿಥಿ | ಪಕ್ಷ | ರಾಶಿ | ಗಂಟೆ |
|---|---|---|---|---|---|---|
| 03.04.25 | ಗುರು | ಚೈತ್ರ | ಪಂಚಮೀ | ಶುಕ್ಲ | ವೃಷಭ | 09.50 |
| 16.04.25 | ಬುಧ | ಚೈತ್ರ | ತದಿಗೆ | ಕೃಷ್ಣ | ಮಿಥುನ | 10.10 |
| 30.04.25 | ಬುಧ | ವೈಶಾಖ | ತದಿಗೆ | ಶುಕ್ಲ | ವೃಷಭ | 08.05 |
| 01.05.25 | ಗುರು | ವೈಶಾಖ | ಚೌತಿ | ಶುಕ್ಲ | ವೃಷಭ | 08.00 |
| 01.05.25 | ಗುರು | ವೈಶಾಖ | ಚೌತಿ | ಶುಕ್ಲ | ಮಿಥುನ | 09.10 |
| 19.05.25 | ಸೋಮ | ವೈಶಾಖ | ಸಪ್ತಮೀ | ಕೃಷ್ಣ | ಮಿಥುನ | 09.10 |
| 30.05.25 | ಶುಕ್ರ | ಜ್ಯೇಷ್ಠ | ಚೌತಿ | ಶುಕ್ಲ | ಮಿಥುನ | 08.30 |
| 08.02.26 | ಭಾನು | ಮಾಘ | ಸಪ್ತಮೀ | ಕೃಷ್ಣ | ಮಕರ | 07.20 |
| 22.02.26 | ಭಾನು | ಫಾಲ್ಗುಣ | ಪಂಚಮೀ | ಶುಕ್ಲ | ಮಕರ | 07.45 |
| 22.02.26 | ಭಾನು | ಫಾಲ್ಗುಣ | ಪಂಚಮೀ | ಶುಕ್ಲ | ವೃಷಭ | 12.00 |
| 05.03.26 | ಗುರು | ಫಾಲ್ಗುಣ | ಬಿದಿಗೆ | ಕೃಷ್ಣ | ವೃಷಭ | 10.50 |
| 06.03.26 | ಶುಕ್ರ | ಫಾಲ್ಗುಣ | ತದಿಗೆ | ಕೃಷ್ಣ | ಮೀನ | 07.40 |
| 06.03.26 | ಶುಕ್ರ | ಫಾಲ್ಗುಣ | ತದಿಗೆ | ಕೃಷ್ಣ | ವೃಷಭ | 10.45 |
| 25.03.26 | ಬುಧ | ಚೈತ್ರ | ಸಪ್ತಮೀ | ಶುಕ್ಲ | ಮಿಥುನ | 12.30 |

## ವಿವಾಹ ಮುಹೂರ್ತಗಳು

| ದಿನಾಂಕ | ವಾರ | ಮಾಸ | ತಿಥಿ | ಪಕ್ಷ | ರಾಶಿ | ಗಂಟೆ |
|---|---|---|---|---|---|---|
| 16.04.25 | ಬುಧ | ಚೈತ್ರ | ತದಿಗೆ | ಕೃಷ್ಣ | ಮಿಥುನ | 10.10 |
| 18.04.25 | ಶುಕ್ರ | ಚೈತ್ರ | ಪಂಚಮೀ | ಕೃಷ್ಣ | ಮಿಥುನ | 10.00 |
| 18.04.25 | ಶುಕ್ರ | ಚೈತ್ರ | ಪಂಚಮೀ | ಕೃಷ್ಣ | ಮಿಥುನ | 12.20 |
| 30.04.25 | ಬುಧ | ವೈಶಾಖ | ತದಿಗೆ | ಶುಕ್ಲ | ವೃಷಭ | 08.05 |
| 01.05.25 | ಗುರು | ವೈಶಾಖ | ಚೌತಿ | ಶುಕ್ಲ | ವೃಷಭ | 08.00 |
| 16.05.25 | ಶುಕ್ರ | ವೈಶಾಖ | ಚೌತಿ | ಕೃಷ್ಣ | ಮಿಥುನ | 09.25 |
| 19.05.25 | ಸೋಮ | ವೈಶಾಖ | ಸಪ್ತಮೀ | ಕೃಷ್ಣ | ಮಿಥುನ | 09.10 |
| 02.06.25 | ಸೋಮ | ಜ್ಯೇಷ್ಠ | ಸಪ್ತಮೀ | ಶುಕ್ಲ | ಮಿಥುನ | 06.53 |
| 02.06.25 | ಸೋಮ | ಜ್ಯೇಷ್ಠ | ಸಪ್ತಮೀ | ಶುಕ್ಲ | ಮಿಥುನ | 07.20 |
| 02.06.25 | ಸೋಮ | ಜ್ಯೇಷ್ಠ | ಸಪ್ತಮೀ | ಶುಕ್ಲ | ಕಟಕ | 09.15 |
| 04.06.25 | ಬುಧ | ಜ್ಯೇಷ್ಠ | ನವಮೀ | ಶುಕ್ಲ | ಮಿಥುನ | 08.10 |
| 05.06.25 | ಗುರು | ಜ್ಯೇಷ್ಠ | ದಶಮೀ | ಶುಕ್ಲ | ಮಿಥುನ | 07.52 |
| 08.06.25 | ಭಾನು | ಜ್ಯೇಷ್ಠ | ದ್ವಾ/ತ್ರ | ಶುಕ್ಲ | ಮಿಥುನ | 07.40 |
| 19.10.25 | ಭಾನು | ಆಶ್ವಯುಜ | ತ್ರಯೋ | ಕೃಷ್ಣ | ವೃಶ್ಚಿಕ | 08.17 |
| 03.11.25 | ಸೋಮ | ಕಾರ್ತಿಕ | ತ್ರಯೋ | ಶುಕ್ಲ | ಧನು | 10.20 |

| | | | | | | |
|---|---|---|---|---|---|---|
| 03.11.25 | ಸೋಮ | ಕಾರ್ತೀಕ | ತ್ರಯೋ | ಶುಕ್ಲ | ಮಕರ | 11.45 |
| 06.02.26 | ಶುಕ್ರ | ಮಾಘ | ಪಂಚಮೀ | ಕೃಷ್ಣ | ಮೇಷ | 10.54 |
| 20.02.26 | ಶುಕ್ರ | ಫಾಲ್ಗುಣ | ತದಿಗೆ | ಶುಕ್ಲ | ಮೇಷ | 09.58 |
| 20.02.26 | ಶುಕ್ರ | ಫಾಲ್ಗುಣ | ತದಿಗೆ | ಶುಕ್ಲ | ವೃಷಭ | 12.38 |
| 26.02.26 | ಗುರು | ಫಾಲ್ಗುಣ | ದಶಮೀ | ಶುಕ್ಲ | ವೃಷಭ | 11.23 |
| 08.03.26 | ಭಾನು | ಫಾಲ್ಗುಣ | ಪಂಚಮೀ | ಕೃಷ್ಣ | ವೃಷಭ | 10.42 |

## ಗೃಹಪ್ರವೇಶ ಮುಹೂರ್ತಗಳ

| ದಿನಾಂಕ | ವಾರ | ಮಾಸ | ತಿಥಿ | ಪಕ್ಷ | ರಾಶಿ | ಗಂಟೆ |
|---|---|---|---|---|---|---|
| 30.04.25 | ಬುಧ | ವೈಶಾಖ | ತದಿಗೆ | ಶುಕ್ಲ | ವೃಷಭ | 08.05 |
| 01.05.25 | ಗುರು | ವೈಶಾಖ | ಚೌತಿ | ಶುಕ್ಲ | ವೃಷಭ | 08.00 |
| 16.05.25 | ಶುಕ್ರ | ವೈಶಾಖ | ಚೌತಿ | ಕೃಷ್ಣ | ಮಿಥುನ | 09.25 |
| 24.10.25 | ಶುಕ್ರ | ಕಾರ್ತೀಕ | ತದಿಗೆ | ಶುಕ್ಲ | ವೃಶ್ಚಿಕ | 08.05 |
| 21.11.25 | ಗುರು | ಮಾರ್ಗ | ಸಪ್ತಮೀ | ಶುಕ್ಲ | ಧನು | 09.30 |
| 08.12.25 | ಸೋಮ | ಮಾರ್ಗ | ಚೌತಿ | ಕೃಷ್ಣ | ಧನು | 08.45 |
| 21.02.26 | ಶನಿ | ಫಾಲ್ಗುಣ | ಚೌತಿ | ಶುಕ್ಲ | ವೃಷಭ | 11.40 |
| 25.03.26 | ಬುಧ | ಚೈತ್ರ | ಸಪ್ತಮೀ | ಶುಕ್ಲ | ಮಿಥುನ | 12.30 |

~*~

## ಮುಹೂರ್ತ ಸಂಬಂಧಿ ಸೂಚನೆ

**ತಾರಾಬಲ :** ಜನ್ಮ ನಕ್ಷತ್ರದಿಂದ ಆರಂಭಿಸಿ ಇಷ್ಟಕಾಲದಲ್ಲಿರುವ ನಕ್ಷತ್ರದವರಿಗೆ ಎರಡನ್ನು ಸೇರಿಸಿ, ಬಂದ ಮೊತ್ತಕ್ಕೆ 9 ರಿಂದ ಭಾಗಿಸಿದಾಗ ಶೇಷವು 1 ಬಂದರೆ ಜನ್ಮತಾರೆ (ನಿಷಿದ್ಧ) 2 ಉಳಿದರೆ ಸಂಪತ್ತಾರೆ (ಶುಭ) 3 ವಿಪತ್ತಾರೆ (ಅಶುಭ) 4 ಕ್ಷೇಮತಾರೆ(ಶುಭ) 5 ಪ್ರತ್ಯಕ್ ತಾರೆ (ಅಶುಭ) 8 ಸಾಧಕತಾರೆ (ಶುಭ) 7 ವಧತಾರೆ (ಮಹಾ ಅಶುಭಾ) 8 ಮಿತ್ರತಾರೆ (ಶುಭ) 9 ಅಥವಾ ಸೊನ್ನೆ ಉಳಿದರೆ ಪರಮಮೈತ್ರ ತಾರೆ (ಅತ್ಯಂತ ಶ್ರೇಷ್ಠ)

**ತಾರಾ ಶಾಂತಿ :** ಜನ್ಮತಾರೆಗೆ ತರಕಾರಿ ಸದಕ್ಷಿಣಾದಾನವು, ವಿಪತ್ತಾರೆಗೆ ಬೆಲ್ಲದಾನ, ಪ್ರತ್ಯಕ್ ತಾರೆಗೆ ಲವಣದಾನ, ವಧತಾರೆಗೆ ತಿಲದಾನ, ಸುವರ್ಣದಾನ, ವಸ್ತ್ರಸಹಿತದಾನದಿಂದ ದೋಷ ಪರಿಹಾರವು.

**ಚಂದ್ರಬಲ :** ಶುಕ್ಲಪಕ್ಷದಲ್ಲಿ ತಾರಾಬಲವನ್ನು, ಕೃಷ್ಣಪಕ್ಷದಲ್ಲಿ ಚಂದ್ರಬಲವನ್ನು ನೋಡಬೇಕು. ಜನ್ಮರಾಶಿಯಿಂದ ಇಷ್ಟಕಾಲದಲ್ಲಿ ಚಂದ್ರನಿರುವ ರಾಶಿಯವರೆಗೂ ಎರಡನ್ನೂ ಕೂಡಿಬರುವ ಮೊತ್ತವು 1 ದೈಹಿಕ ಸೌಖ್ಯ, 2 ಜಗಳ, 3 ದ್ರವ್ಯಲಾಭ, 4 ರೋಗ, 5 ಕಾರ್ಯದಲ್ಲಿ ವಿಕಲ್ಪ, 6 ಶತ್ರುನಾಶ, 7 ಸೌಖ್ಯಾಭಿವೃದ್ಧಿ, 8 ಆರೋಗ್ಯವೃದ್ಧಿ, 9 ಕಾರ್ಯ ವಿಳಂಬ, 10 ಉದ್ಯೋಗವೃದ್ಧಿ, 11 ಇಷ್ಟಪ್ರಾಪ್ತಿ, 12 ಧನವ್ಯಯ.

**ಚಂದ್ರಶಾಂತಿ :** ಚಂದ್ರ ಪೂಜೆ, ಚಂದ್ರ ಮಂತ್ರ ಜಪ, ಅಕ್ಕಿಯ ದಾನದಿಂದ ದೋಷ ಶಾಂತಿ.

**ಗುರುಬಲ :** ಗುರುಬಲ ಅತಿ ಮಹತ್ವದ್ದು, ಉಪನಯನದಲ್ಲಿ ಗುರು ಅಸ್ತನಾಗಿರಬಾರದು. ಗುರುಬಲವು ವಟು ಅಥವಾ ತಂದೆಗೆ ಇರಬೇಕು. ಪ್ರತಿಷ್ಠಾಪನೆಗಳಿಗೆ ಗುರುಬಲ ಬೇಕೇಬೇಕು. ವಿವಾಹಕ್ಕೆ ಶುಕ್ರ ಬಲವಿರಬೇಕು. ಜನ್ಮರಾಶಿಯಿಂದ ಗೋಚಾರದಲ್ಲಿ ಗುರುವಿರುವ ರಾಶಿಯವರೆಗೂ ಎಣಿಸಿದಾಗ ಗುರುವು ಚಂದ್ರನಿಂದ 2, 5, 7, 9, 11ರಲ್ಲಿದ್ದರೆ ಗುರುಬಲವಿರುತ್ತದೆ.

**ಅಪವಾದ :** ಗುರುವು ತನ್ನ ಮನೆಯಾದ ಧನುಸ್ಸು, ಮೀನಾಗಳಲ್ಲಿದ್ದಾಗ, ಉಚ್ಛರಾಶಿಯಾದ ಕಟಕದಲ್ಲಿದ್ದಾಗಲೂ, ಮಿತ್ರ ಕ್ಷೇತ್ರಗಳಾದ ಸಿಂಹ, ಮೇಷ, ವೃಶ್ಚಿಕಗಳಲ್ಲಿದ್ದಾಗ 2, 5, 7, 9, 11ರಲ್ಲಿ ಇಲ್ಲದಿದ್ದರೆ ದೋಷವಿರುವುದಿಲ್ಲ.

**ಪಂಚಕ ಕ್ರಮ :** ವಿವಾಹೋಪನಯನಗಳಲ್ಲಿ ಪಂಚಕ ದೋಷವಿರಬಾರದು. ಹಾಗಾದಲ್ಲಿ ಮುಹೂರ್ತವು ವಿಷ್ಪಂಚಕವಾಗಿರುತ್ತದೆ. ಪಂಚಕವೆಂದರೆ ತಿಥಿ, ವಾರ, ನಕ್ಷತ್ರ, ಲಗ್ನ ಹಾಗೂ ಧ್ರುವಕಗಳು, ಇವೆಲ್ಲವನ್ನೂ ಕೂಡಿಸಿ ಬಂದ ಮೊತ್ತವನ್ನು ಒಂಬತ್ತರಿಂದ ಭಾಗಿಸಿದಾಗ 1 ಬಂದರೆ ಮೃತ್ಯು (ಅಶುಭ), 2 ಅಗನಿಭಯ, 4 ರಾಜ ಭಯ, 6 ಕಳ್ಳತನ, 8 ರೋಗ, ಇವು ಅಶುಭಗಳು ಶೇಷವು 3, 5, 7, 9, 0 ಬಂದರೆ ನಿಷ್ಪಂಚಕ.

**ನಿಷ್ಪಂಚಕ :** ವೈಶಾಖ ಬಿದಿಗೆ ಗುರುವಾರ ಅಶ್ವಿನೀನಕ್ಷತ್ರ ವೃಷಭ ಲಗ್ನ, ಬಿದಿಗೆ 2, ಗುರುವಾರ 5, ಅಶ್ವಿನೀ 1, ವೃಷಭ 2, ಧ್ರುವಕ್ಕೆ 7 ಕೂಡಿಸಿ ಬಂದ 17 ನ್ನು 9 ರಿಂದ ಭಾಗಿಸಿದರೆ 8 ಉಳಿಯುತ್ತದೆ ರೋಗ ಪಂಚಕ.

ಮುಹೂರ್ತಗಳು ಸಾಮಾನ್ಯವಾಗಿ ದ್ವಿತೀಯ ಯಾಮದೊಳಗೆ ಇರುತ್ತವೆ. ಪಂಚಕವನ್ನು ವಿದ್ಯಾಮಾಧವಿಯ ಪ್ರಕಾರ ಹಿಡಿದಿಲ್ಲ. ಮುಹೂರ್ತಗಳಿಗೆ ಗುರುಶುಕ್ರಬುಧರ ಅಂಶಾತ್ಮಕ ಅಥವಾ ಕೇಂದ್ರಕೋಣವನ್ನಾಧರಿಸಿ ನಿಶ್ಚಯಿಸಿರುತ್ತೇವೆ. ಇವುಗಳಲ್ಲಿ ವ್ಯತ್ಯಾಸ ಕಂಡುಬಂದಲ್ಲಿ ಸನಿಹದ ಉತ್ತಮ ಗಣಿತಜ್ಞರನ್ನು ವಿಚಾರಿಸಿಕೊಳ್ಳಿ. ದೇವನೊಬ್ಬನಿಗೆ ಬಿಟ್ಟರೆ ಸ್ವಲ್ಪವೂ ದೋಷ ರಹಿತವಾದ ಮುಹೂರ್ತಗಳು ದೊರೆಯುವುದಿಲ್ಲವೆಂದು ಅಭಿಜ್ಞರ ವಚನವಿದೆ. ದಗ್ಧ ಮೃತ್ಯು ಯಮಗಂಡ, ಗುಳಿಕ ಅರ್ಧಪ್ರಹರ, ರಾಹುಕಾಲಗಳು ಉಪನಯನ ವಿವಾಹ ಮುಹೂರ್ತಗಳಿಗೆ ನೋಡಬೇಕಾಗಿಲ್ಲ. ಮುಹೂರ್ತವು ವಿವಾಹದಲ್ಲಿ ವಧೂ–ವರರಿಗೆ, ಉಪನಯನದಲ್ಲಿ ವಟುವಿಗೆ ಅಷ್ಟಮ ಲಗ್ನವಾಗಬಾರದು. ಇನ್ನೂ ವಿಶೇಷಕ್ಕೆ ಧರ್ಮಶಾಸ್ತ್ರ ದರ್ಪಣವನ್ನು ನೋಡಿ.

~*~

## ಶುಭ ನಕ್ಷತ್ರಗಳು

**ಪದಾರ್ಥಗಳನ್ನು ಕೊಳ್ಳಲಿಕ್ಕೆ :–** ಅ, ಪು, ಪ, ಚಿ, ಮೃ, ರೇ, ಶ್ರ, ಧ, ಶ ಪು, ಸ್ವಾ, ಮ.

**ಸಂಗೀತ ವಿದ್ಯಾಭ್ಯಾಸಕ್ಕೆ :–** ಅ, ಹ, ರೇ, ಧ, ಉ, ಪು, ಶ, ಜ್ಯೇ.

**ಹೊಸ ಅಂಗಡಿ ಸ್ಥಾಪನಕ್ಕೆ :–** ಅ, ಉ, ಪು, ರೇ, ಮೃ, ಹ, ಚಿ, ಸ್ವಾ.

**ಯಂತ್ರಕಾರ್ಯ ಪ್ರಾರಂಭಕ್ಕೆ :–** ಧ, ಆ, ಹ, ಚಿ, ಅ, ಮೃ, ರೇ.

**ನೌಕರಿ ಮಾಡುವದಕ್ಕೆ :–** ಅ, ಪು, ಹ, ಚಿ, ಅ, ಮೃ, ರೇ, ಪು.

**ರಾಜದರ್ಶನಕ್ಕೆ :–** ಮೃ, ಅ, ಪು, ಶ್ರ, ಧ, ಶ.

**ರಾಜ ಸೇವೆಗೆ :–** ಅ, ಮ, ಪು, ಹ, ಚಿ, ಅ, ರೇ.

**ರೋಗಸ್ನಾನಕ್ಕೆ :–** ರೋ, ಮೃ, ಪು, ಅ, ಉ, ಸ್ವಾ, ಉಷಾ, ಉಭಾ, ರೇ.

**ವ್ಯಾಪಾರಕ್ಕೆ :–** ಅ, ರೋ ಮೃ, ಪು, ಅ, ಹ, ಚಿ, ಅ, ರೇ.

**ಪ್ರಸೂತಿಸ್ನಾನಕ್ಕೆ :–** ಅ, ರೋ, ಮೃ, ಪು, ಉ, ಹ, ಸ್ವಾ, ಅ, ಧ, ಜ್ಯೇ, ರೇ.

**ಗೃಹಾರಂಭ ಗೃಹಪ್ರವೇಶ :–** ಅ, ರೋ, ಮೃ, ಪು, ಪು, ಮ, ಉ, ಹ, ಚಿ, ಸ್ವಾ, ಅ, ಮೂ, ಶ್ರ, ರೇ.

**ಕೃಷ್ಯಾರಂಭಕ್ಕೆ :–** ರೋ, ಪು, ಪು, ಉ, ಹ, ಅ, ಮೂ, ಉ.ಷಾ, ಉ.ಭಾ, ರೇ.

**ಧಾನ್ಯ ಸಂಗ್ರಹಕ್ಕೆ :–** ಭ, ರೋ, ಅ, ಮ, ಹ, ಶ್ರ.

**ಬೀಜ ಹಾಕಲಿಕ್ಕೆ :–** ಅ, ರೋ ಮೃ ಪು, ಮ, ಉ, ಹ, ಚಿ, ಸ್ವಾ, ಅ, ಮೂ, ಉಷಾ, ಶ್ರ, ಧ, ಉ.ಭಾ.

**ವೃಕ್ಷಲತಾದಿಗಳನ್ನು ನಡೆಯಲಿಕ್ಕೆ :–** ಅ, ರೋ, ಮೃ, ಪು, ಉ, ಹ, ಚಿ, ವಿ, ಅ, ಮೂ, ಉಷಾ, ಉಭಾ.

**ಗದ್ದೆ ಕೊಯ್ಯಿಲುಕ್ಕೆ :–** ಭ, ಕೃ, ರೋ, ಮೃ, ಆ, ಪು, ಆ, ಮ, ಉ, ಹ, ಚಿ ಸ್ವಾ, ಜ್ಯೇ, ಮೂ, ಪೂ.ಷಾ.

**ಧನಸುವರ್ಣಾದಿ ಸ್ಥಾಪನೆಗೆ :–** ಭೃ, ಕೃ, ರೋ, ಮೃ, ಅ, ಪು, ಅ ಮ, ಪೂ, ಚಿ, ಮ, ವಿ, ಜ್ಯೇ,ಮೂ.

**ಮಹಾಲಯಕ್ಕೆ :–** ಅ, ಭ, ಅ, ಪು, ಮ, ಪೂ, ಹ, ಚಿ, ಸ್ವಾ, ಅ, ಜ್ಯೇ, ಮೂ, ಉ, ಶ್ರ, ಧ, ಶ್ರ, ರೇ.

**ನವಾನ್ನಕ್ಕೆ :–** ಅ, ರೋ, ಮೃ, ಪು, ಪು, ಮ, ಉ, ಹ, ಚಿ, ಸ್ವಾ, ವಿ, ಅ, ಮೂ, ಉ.ಷಾ, ಶ್ರ, ಧ, ಶ್ರ, ಉ.ಭಾ.

**ವಿವಾಹಕ್ಕೆ :–** ರೋ, ಮೃ, ಮ, ಉ, ಹ, ಸ್ವಾ, ಅ, ಮೂ, ಉ.ಷಾ, ಉ.ಭಾ, ರೇ, ಉತ್ತ, ಚಿ, ಶ್ರ, ಧ.

**ನೂತನ ವಧೂಪ್ರವೇಶಕ್ಕೆ :–** ಅ, ರೋ, ಮೃ, ಪು, ಮ, ಹ, ಚಿ, ಸ್ವಾ ಮೂ, ಉ.ಷಾ, ಶ್ರ, ಧ, ಉ.ಭಾ, ರೇ.

**ಗರ್ಭಾಧಾರಣಕ್ಕೆ :–** ಅ, ರೋ ಮೃ, ಪು, ಮ, ಉ, ಹ, ಚಿ, ಸ್ವಾ, ಮೂ, ಉ.ಷಾ, ಶ್ರ, ಧ, ಉ.ಭಾ, ರೇ.

**ಸೀಮಂತಕ್ಕೆ :–** ರೋ, ಮ, ಪು, ಹ, ಉ.ಷಾ, ಶ್ರ, ಉ.ಭಾ, ರೇ.

**ಪುಂಸವನಕ್ಕೆ :–** ಮೃ, ಪು, ಹ, ಮೂ, ಶ್ರ.

**ನಾಮಕರಣಕ್ಕೆ :–** ರೋ, ಮೃ, ಅ, ಪು, ಮ, ಉ, ಹ, ಸ್ವಾ, ಅ, ಮೂ, ಉ.ಷಾ, ಧ, ಶ್ರ, ಉ.ಭಾ, ರೇ.

**ಕರ್ಣವೇದಕ್ಕೆ :–** ಮೃ, ಅ, ಪು, ಉ, ಹ, ಚಿ, ಉ.ಷಾ, ಶ್ರ, ಧ, ಉ.ಭಾ, ರೇ.

**ಅನ್ನಪ್ರಾಶನ ಉಪನಯನಗಳಿಗೆ :–** ಅ, ರೋ, ಮೃ, ಪು, ಉ, ಹ, ಚಿ, ಸ್ವಾ, ಆ, ಉ.ಷಾ, ಶ್ರ, ಧ, ಉ.ಭಾ.

**ಚೌಲ ನಿತ್ಯಕ್ಷೌರಸಮಾವರ್ತನಗಳಿಗೆ :–** ರೋ ಮೃ ಪು, ಉ, ಹ, ಚಿ, ಸ್ವಾ, ಉ.ಷಾ, ಶ್ರ, ಧ, ಉ.ಭಾ.

**ದೇವ ಪ್ರತಿಷ್ಠೆಗೆ :–** ಆ, ರೇ ಮೃ, ಪು, ಮ, ಉ, ಹ, ಚಿ, ಸ್ವಾ, ಉ.ಷಾ, ಶ್ರ, ಧ, ಉ.ಭಾ, ರೇ.

**ಇತರ ಸಾಮಾನ್ಯ ಎಲ್ಲ ಕಾರ್ಯಗಳಿಗೆ :–** ಅ, ರೋ, ಮೃ, ಪು, ಉ, ಹ, ಚಿ, ಸ್ವಾ, ಶ್ರ, ಧ, ಶ್ರ ರೇ, ಉತ್ತ.

**ಪ್ರಯಾಣಕ್ಕೆ :–** ಅನು ಮೃಗ, ಅಶ್ವಿ, ಶ್ರವ, ಪುನ, ಪುಷ್ಯ, ಹಸ್ತಾ, ಮೂಲಾ, ಧನಿ, ರೇವತಿ ಈ ನಕ್ಷತ್ರಗಳೂ ಮಂಗಳ ಪೂರ್ವ ದಿಕ್ಕಿಗೆ, ಸೋಮ ಶನಿಗಳಲ್ಲಿ ದಕ್ಷಿಣಕ್ಕೆ, ಬುಧ ಗುರುಗಳಲ್ಲಿ ಪಶ್ಚಿಮಕ್ಕೆ ಶುಕ್ರ ರವಿ ಉತ್ತರ ದಿಕ್ಕಿಗೆ ಪ್ರಯಾಣವನ್ನು ಮಾಡುವುದು ಶುಭಕರವು.

**ಮೂಗು ಚುಚ್ಚುವುದಕ್ಕೆ :–** ರೋ, ಉ, ಉ.ಷಾ, ಉ.ಭಾ, ಮೂ, ಅ, ಮೃ, ಶ್ರ, ಶ, ಹ, ಚಿ, ರೇ, ಪು, ಈ ನಕ್ಷತ್ರಗಳಲ್ಲಿಯೂ, ಮಿಥುನಾ, ಕನ್ಯಾ, ಧನು, ಮೀನ, ಈ ಲಗ್ನಗಳಲ್ಲಿಯೂ, ಚಾತುಮಾಸ್ಯವನ್ನು ಬಿಟ್ಟಿ ಇಳಿದ ಎಂಟು ಮಾಸಗಳಲ್ಲಿಯೂ, ಸಮವರ್ಷ ಸಮತಿಥಿಗಳಲ್ಲಿಯೂ ಉತ್ತರಾಯಣದಲ್ಲಿಯೂ ಸೋಮ, ಬುಧ, ಗುರುಗಳಲ್ಲಿಯೂ ಹೆಣ್ಣು ಮಗುವಿಗೆ ಮೂಗು ಚುಚ್ಚುವುದಕ್ಕೆ ಶುಭಪ್ರದವು.

**ಶಿಶು ಕಟ್ಟಿವಸ್ತ್ರ ಬಂಧನಕ್ಕೆ :–** ರೇ, ಉತ್ತ, ಅ, ಹ, ಚಿ, ಸ್ವಾ, ಪು, ನಕ್ಷತ್ರಗಳು 2–3–5–7–7–9–10–11–12–13–14–15 ಈ ತಿಥಿಗಳು ರವಿ, ಬುಧು, ಗುರು, ಶುಕ್ರ ಈ ವಾರಗಳು ವೃಷಭ, ಮಿಥುನ, ಕರ್ಕ, ಸಿಂಹ, ತುಲಾ, ಧನು, ಮೀನಾ, ಈ ಲಗ್ನಗಳಲ್ಲಿ ಪ್ರಶಸ್ತವು.

**ಔಷಧ ತೆಗೆದುಕೊಳ್ಳಲಿಕ್ಕೆ :–** ಆ, ಪು, ಹ, ಚಿ, ರೇ, ಶ, ಪು, ಸ್ವಾ, ಮೂ.

**ಹೊಸಮನೆ ಕಟ್ಟಲಿಕ್ಕೆ :–** ಮೃ, ಮ, ಹ, ಸ್ವಾ, ಮೂ, ಅ, ರೋ, ಉ, ಉ.ಷಾ, ಉ.ಭಾ. ಚಿ, ಧ, ಶ್ರ, ಪು, ಈ ನಕ್ಷತ್ರಗಳಲ್ಲಿಯೂ ವೈಶಾಖ, ಶ್ರಾವಣ, ಕಾರ್ತಿಕ ಮಾರ್ಗಶಿರ, ಮಾಘ, ಫಾಲ್ಗುಣ, ಈ ಮಾಸಗಳಲ್ಲಿಯೂ, ಚಂದ್ರ, ಬುಧ, ಗುರು, ಶುಕ್ರ, ಈ ವಾರಗಳಲ್ಲಿಯೂ ಉತ್ತಮವು.

ಮೂರುವರೆ ಮುಹೂರ್ತಗಳು:– 1. ಹೊಸ ಸಂವತ್ಸರ ಪ್ರಾರಂಭವಾದ ದಿವಸ (ಯುಗಾದಿ) 2. ಅಕ್ಷಯ ತೃತೀಯ, 3. ವಿಜಯದಶಮಿ ಈ ಮೂರು ದಿನಗಳು ಸಂಪೂರ್ಣ ಮುಹೂರ್ತಗಳು ಮತ್ತು ಕಾರ್ತೀಕ ಶುದ್ಧ ಪ್ರತಿಪದ ಅರ್ಧ ಮುಹೂರ್ತವಿದೆ (ಸಂಜೆಯವರೆಗೆ) ಹೀಗೆ ಇವು ಶುಭ ಮುಹೂರ್ತಗಳು ಈ ದಿವಸಗಳಲ್ಲಿ ಯಾವ ಕೆಲಸವನ್ನು ಮಾಡುವುದಾದರೂ ಪಂಚಾಂಗ ಶುದ್ಧಿಯನ್ನು ನೋಡುವ ಅವಶ್ಯಕತೆ ಇಲ್ಲ.

**ಸಾಲ ತರುವುದಕ್ಕೆ :–** ಕ್ಷಯ, ವೃದ್ಧಿ, ತಿಥಿ, 14–30 ತಿಥಿ, ಸೂರ್ಯ ಸಂಕ್ರಾತಿ, ಗ್ರಹಣ ದಗ್ದ, ಮೃತ್ಯುಯೋಗಗಳು, ರವಿ, ಮಂಗಳವಾರ, ಹಸ್ತ, ಮೂಲ, ನಕ್ಷತ್ರಗಳನ್ನು ಬಿಟ್ಟು ಉಳಿದ ವೇಳೆಯಲ್ಲಿ ಸಾಲವನ್ನು ತರಲಿಕ್ಕೂ ಕೊಡಲಿಕ್ಕೂ ಉತ್ತಮ.

**ದೇವತಾ ಪ್ರತಿಷ್ಠಾಪನೆ (ಪ್ರತಿಷ್ಠೆಗೆ) :–** ಉ, ಉಷಾ, ಉ.ಭಾ., ರೋ, ಪು, ಶ್ರ, ಪು, ಆ, ಮೃ, ಹ, ಚಿ, ಸ್ವಾ, ಧ, ಶ, ಮ, ಮೂ ಈ ನಕ್ಷತ್ರಗಳಲ್ಲಿಯೂ, ಶುಭವಾರಗಳಲ್ಲಿಯೂ, ಶುಭಲಗ್ನದಲ್ಲಿಯೂ ಗುರು, ಶುಕ್ರ, ಗ್ರಹಗಳ ಉದಯ ಕಾಲದಲ್ಲಿ.

**ದೇವತಾ ಪ್ರತಿಷ್ಠೆಗೆ ಬಿಡಬೇಕಾದ ಕಾಲ :–** ಕೃಷ್ಣ ಪಕ್ಷ, ಚತುರ್ದಶಿ ಅಮಾವಾಸ್ಯೆ ಸೂರ್ಯಸ್ಸಂಕ್ರಾತಿ, ಗ್ರಹಣಕಾಲ, ರಿಕ್ತ ತಿಥಿ, ಗುರು, ಶುಕ್ರಾಸ್ತಕಾಲ ದಗ್ದ, ಮೃತ್ಯುಯೋಗ, ವ್ಯತಿಪಾತ ವೈಧೃತಿಯೋಗಗಳು ಶಕುನಿ, ಕಿಂಸ್ತುಘ್ನ ಈ ಕರಣಗಳು ಇವುಗಳನ್ನು ಬಿಡತಕ್ಕದ್ದು.

**ಕೆರೆ ಭಾವಿ ನಿರ್ಮಾಣಕ್ಕೆ (ಕಟ್ಟಿಸಲಿಕ್ಕೆ) :–** ರೋ, ಪು, ಅ, ಮೂ, ಶ್ರ, ಹ, ಮ, ಶ, ಮೃ, ಪು, ಉ.

**ಬಾಣಂತಿಯು ಗುರುದೇವತಾ ದರ್ಶನಕ್ಕೆ ಮತ್ತು ಗಂಗಾ ಪೂಜೆಗೆ :–** ಅ, ಪು, ಮೃ, ಹ, ಪು, ಧ, ಶ್ರ, ಈ ನಕ್ಷತ್ರಗಳಲ್ಲಿಯೂ ಶುಕ್ಲಪಕ್ಷ, ಕೃಷ್ಣಪಕ್ಷಗಳು 1–2–3–5–7–10–13–15 ಈ ತಿಥಿಗಳಲ್ಲಿಯೂ, ಶುಭವಾರಗಳಲ್ಲಿಯೂ ಉತ್ತಮ ದಗ್ದಯೋಗ, ಮೃತ್ಯುಯೋಗ, ಅಮಾವಾಸ್ಯೆ, ಗ್ರಹಣ, 14 ಈ ತಿಥಿ ಸೂರ್ಯ ಸಂಕ್ರಾಂತಿ, ವರ್ಷಸಂಕ್ರಾತಿಗಳನ್ನು ತ್ಯಜಿಸತಕ್ಕದ್ದು.

**ಹಲ್ಲಿಯು ಮೈಮೇಲೆ ಬಿದ್ದ ಫಲವು :–** ಹಲ್ಲಿಯು ನೆತ್ತಿಯ ಮೇಲೆ ಬಿದ್ದರೆ 4 ತಿಂಗಳೊಳಗಾಗಿ ತಾಯಿ–ತಂದೆಗಳಿಗೆ ಪೀಡೆಯು, ತಲೆಯ ಮೇಲೆ ಬಿದ್ದರೆ 11 ದಿವಸಗಳಲ್ಲಿ ಹಾನಿಯು, ಮೂಗಿನ ಮೇಲೆ ಬಿದ್ದರೆ 21 ದಿನಗಳಲ್ಲಿ ಪೀಡೆಯು, ಮುಂದಲೆಯ ಮೇಲೆ ಬಿದ್ದರೆ 1 ತಿಂಗಳಲ್ಲಿ ಶುಭಕಾರ್ಯವಾಗುವುದು. ಹಿಂದಲೆಯ ಮೇಲೆ ಬಿದ್ದರೆ ಸೋದರಮಾವಂದಿರಿಗೆ ಅನಿಷ್ಟವು, ಹಣೆಯ ಮೇಲೆ ಬಿದ್ದರೆ ಮೂರು ತಿಂಗಳಲ್ಲಿ ಲಾಭವು ತುರುಬಿನ ಮೇಲೆ ಬಿದ್ದರೆ ಒಂದು ವರ್ಷದೊಳಗಾಗಿ ಅನಿಷ್ಠ ಸಂಭವಿಸುವುದು. ಎಡಗಣ್ಣಿನ ಮೇಲೆ ಬಿದ್ದರೆ ಹಾನಿಯು, ಬಲಗಣ್ಣಿನ ಮೇಲೆ ಬಿದ್ದರೆ 1 ತಿಂಗಳೊಳಗಾಗಿ ಲಾಭವು ಎಡಗಿವಿಯ ಮೇಲೆ ಬಿದ್ದರೆ ಪೀಡೆಯು, ಬಾಯಿಯ ಮೇಲೆ ಬಿದ್ದರೆ 1 ವರ್ಷ ದೊಳಗಾಗಿ ದೇಹರಿಷ್ಟವಾಗುವುದು. ಹೆಗಲ ಮೇಲೆ ಹಿಂಭಾಗದಲ್ಲಿ ಬಿದ್ದರೆ 1 ವರ್ಷದೊಳಗಾಗಿ ಧನಲಾಭವಾಗುವುದು ಬಲಗಲ್ಲದ ಮೇಲೆ ಬಿದ್ದರೆ 9 ತಿಂಗಳಲ್ಲಿ ಹಾನಿಯೂ ಎಡಗಲ್ಲದ ಮೇಲೆ ಬಿದ್ದರೆ 1 ವರ್ಷ ದೊಳಗಾಗಿ ಧನಲಾಭವಾಗುವುದು. ಬಲತೋಳಿನ ಮೇಲೆ ಬಿದ್ದರೆ ಸಂತೋಷವು. ಬಲ ಮೊಳಕೈ ಮೇಲೆ ಬಿದ್ದರೆ ಒಂದು ವರ್ಷದೊಳಗೆ ಕಷ್ಟವು. ಎಡ ಮುಂಗೈ ಮೇಲೆ ಬಿದ್ದರೆ ಸಂತೋಷವು ಬಲ ಹೆಗಲ ಮೇಲೆ ಬಿದ್ದರೆ ಉಡುಗೊರೆ ಪ್ರಾಪ್ತಿಯು ಎಡ ಮೊಳಕೈ ಮೇಲೆ ಬಿದ್ದರೆ ಒಳ್ಳೆಯದಾಗುವುದು.

**ಶರೀರದ ಚಿಕಿತ್ಸೆಗೆ (ಆಪರೇಷನ್) :–** ಮೃಗ, ರೋಹಿಣಿ, ಅಶ್ವಿನಿ, ಪುಷ್ಯ, ಸ್ವಾತಿ, ಚಿತ್ತ, ಅನು, ಹಸ್ತಾ, ಶ್ರವಣಾ, ಈ ನಕ್ಷತ್ರಗಳಲ್ಲಿಯೂ, ರವಿ, ಗುರು, ಮಂಗಳ, ಶುಕ್ರ ಈ ವಾರಗಳಲ್ಲಿಯೂ ಶುಭಕರವು. ಸೂರ್ಯಸಂಕ್ರಾಂತಿ, ಗ್ರಹಣ, ಅಮಾವಾಸ್ಯೆ ಶುಕ್ಲ, ಕೃಷ್ಣ ಪಕ್ಷಗಳ 4–9–14ಗಳನ್ನು ಬಿಟ್ಟು ಉಳಿದ ತಿಥಿಗಳಲ್ಲಿ ಉತ್ತಮ.

**ಜನನಕ್ಕೆ ದುಷ್ಟ ನಕ್ಷತ್ರಗಳು :–** ಜ್ಯೇಷ್ಠ ನಕ್ಷತ್ರದ ಕಡೆಯ 2 ಘಟಿ, ಮೂಲಾ ನಕ್ಷತ್ರದ ಆರಂಭದ 2 ಘಟಿ ಈ ನಾಲ್ಕು ಘಳಿಗೆ ಅಭುಕ್ತ ಮೂಲಾ ಅನ್ನುವರು. ಇದು ಜನನಕ್ಕೆ ಅಬ್ಯಾಂತಬಾಧಕವು. ಜೇಷ್ಠ, ಆಶ್ಲೇಷ, ಮೂಲಾ ಚಿತ್ತಾ ನಕ್ಷತ್ರದ ಪೂರ್ವಾರ್ಧ ಪುಷ್ಯ 2–3ನೆಯ ಚರಣ, ಮಘ 1ನೆಯ ಚರಣ, ರೇವತಿ ಕಡೆಯ 2 ಘಟಿ ಅಶ್ವಿನಿ ಆರಂಭದ 2 ಘಟಕ ಇವುಗಳೆಲ್ಲವೂ ಜನನಕ್ಕೆ ದುಷ್ಟವಾದ ನಕ್ಷತ್ರಗಳ ವ್ಯತಿಪಾತ, ವೈಧೃತಿ ಈ ಯೋಗಗಳು ಭದ್ರಕರಣ ಗ್ರಹಣ ಪೂರ್ವಕಾಲ ದಿನ ಕ್ಷಯ, ಯಮಲ ಜನನ, ಸದಂತ ಜನನ, ತಿಕಪ್ರಸವ, ದರ್ಶಮುಖ ಜನನ, ಕೃಷ್ಣ ಚತುರ್ದಶಿ, ಅಮಾವಾಸ್ಯೆ ಇವುಗಳೆಲ್ಲವು ದೋಷಮುಕ್ತವಾಗಿರುವದರಿಂದ ಈ ದೋಷ ನಿವಾರಣಾರ್ಥವಾಗಿ ನಾಮಕರಣದ ದಿವಸ ಗೋಮುಖ ಪ್ರಸವದಿಂದ ಸಹಿತವಾದ ನಕ್ಷತ್ರಶಾಂತಿಯನ್ನು ತನ್ನ ಶಕ್ತ್ಯಾನುಸಾರವಾಗಿ ಮಾಡಿಕೊಳ್ಳಲೇಬೇಕು. ಶಾಂತಿ ಮಾಡುವುದರಿಂದ ದೋಷವು ನಿವಾರಣೆಯಾಗುವುದು.

**ದುಷ್ಟ ನಕ್ಷತ್ರಕ್ಕೆ ದಾನವು :–** **ನಿರ್ಣಯಾದೌ–ಉತ್ತ–ರೇ ತಿಲಪಾತ್ರಂ ಸ್ಯಾತ್ಪುಷ್ಯೇ ಗೋದಾನಮುಚ್ಯತೇ। ಅಚಾತಪ್ರದಾನಂ ತತ್ವಾಶ್ತೇಸ್ಯಾತ್ಪೂರ್ವಾಷಾಢೇಚ ಕಾಂಚನಂ** ಎಂದರೆ ಉತ್ತಾರಫಲ್ಗುನಿ ನಕ್ಷತ್ರದಲ್ಲಿ ಜನನವಾದರೆ ಎಳ್ಳು ತುಂಬಿದ ಪಾತ್ರೆಯನ್ನು, ಪುಷ್ಯದಲ್ಲಿ ಜನಿಸಿದರೆ ಗೋವನ್ನು, ಚಿತ್ತಾ ನಕ್ಷತ್ರದಲ್ಲಿ ಜನಿಸಿದರೆ ಕಂಬಳಿಯನ್ನು, ಪೂರ್ವಾಷಾಢ ನಕ್ಷತ್ರದಲ್ಲಿ ಜನನವಾದರೆ ದ್ರವ್ಯವನ್ನು ದಾನಮಾಡಿದರೆ ಶಾಂತಿಯಾಗಿ ಸುಖವಾಗಿರುತ್ತದೆ. ಜನ್ಮರಾಶಿಯ ವಿಚಾರ ದೇಶ ಗ್ರಾಮ, ಗೃಹಜ್ವರ ವ್ಯವಹಾರ ಜೂಜು, ದಾನ ಮಂತ್ರ ಕಾಕಿಣ ರಾಜಸೇವಾ, ಭೂಮಿ ಸಾಲಾವಳಿ, ವರ್ಗಶುದ್ಧಿ, ಯುದ್ಧ ಇತ್ಯಾದಿಗಳಿಗೆ ನಾಮರಾಶಿಯನ್ನು ಹಿಡಿಯಬೇಕು. ಇವುಗಳನ್ನು ತಿಳಿದು ವಿವಾಹಾದಿ ಎಲ್ಲಾ ಮಂಗಳ ಕಾರ್ಯಗಳಿಗೆ ಜನ್ಮರಾಶಿಯನ್ನು ಹಿಡಿಯತಕ್ಕದ್ದು.

**ನಾಮಕರಣ :–** ಮಗನು ಹುಟ್ಟಿದ 12ನೇ ದಿವಸದಲ್ಲಿಯೂ ಮಗಳು ಹುಟ್ಟಿದ 13ನೇ ದಿವಸದಲ್ಲಿಯೂ ನಾಮಕರಣ ಸಂಸ್ಕಾರವನ್ನು ಮಾಡಬೇಕು. ಈ ದಿವಸಮಾಡುವುದಾದರೆ ಮುಹೂರ್ತವನ್ನು ನೋಡುವ ಕಾರಣವಿಲ್ಲ. ಅಮಾವಾಸ್ಯೆ ಸಂಕ್ರಾಂತಿಯ ಪುಣ್ಯಕಾಲ ವ್ಯತೀಪಾತ, ವೈಧೃತಿ, ಭದ್ರ ಮೊದಲಾದವುಗಳಿದ್ದ ಪಕ್ಷದಲ್ಲಿ ಆ ದಿವಸ ಮಾಡುವುದನ್ನು ಬಿಡಬೇಕು. ಮುಂದೆ 16–20–22 ಈ ದಿವಸಗಳಲ್ಲಿ ಅಶ್ವಿನಿ, ಪುಷ್ಯ, ಹಸ್ತ ರೋಹಿಣಿ, ಉತ್ತರಾ, ಉ.ಷಾ, ಉ.ಭಾ., ಶ್ರವಣ, ಅನುರಾಧ, ರೇವತಿ, ಮೃಗಶಿರ ಈ ನಕ್ಷತ್ರಗಳನ್ನು ಚಂದ್ರಬಲವನ್ನು ನೋಡಿಕೊಂಡು ಹುಟ್ಟಿದ ಶಿಶುವಿಗೆ ನಾಮಕರಣವನ್ನು ಮಾಡತಕ್ಕದ್ದು, ತ್ರಿವಿಧ ಗಂಡಾತರದಲ್ಲಿ ಜನನವಾದ ದೋಷವು ಹಾಗೂ ತಚ್ಛಾಂತುಪಾಯವು.

**1. ತಿಥಿಗಂಡ :– ಜ್ಯೋತಿರ್ನಿಬಂಧೇ ಪೂರ್ಣಾನಂದಾಖ್ಯಯೋ ತಿಥ್ಯೋಸ್ಸಂಧಿರ್ನಾಡಿದ್ವಯಂ ತಥಾ । ಗಂಡಾಂತರ ಮೃತ್ಯುಂಜನ್ಮ ಯೋತ್ಯೋತ್ವಾಹವುದಿಷು॥**

**ಅರ್ಥ :–** ಪಂಚಮೀ, ಷಷ್ಠಿ, ದಶಮೀ, ಏಕಾದಶೀ, ಪೂರ್ಣಿಮಾ ಅಮಾವಾಸ್ಯೆ ಈ ಸಂಧಿಯಲ್ಲಿ ಎರಡೆರಡು ಘಟಿಕಾ, ಕಾಲವು, ತಿಥಿ ಗಂಡಾಂತರವು. ಈ ಗಂಡಾಂತರ ಕಾಲದಲ್ಲಿ ಜನಿಸಿದ ಶಿಶುವಿಗೆ ಮೃತ್ಯು ಭಯವು.

**2. ನಕ್ಷತ್ರಗಂಡ :– ಅಶ್ವಿನೀ ಮಘ ಮೂಲಾನಾಂ ಪೂರ್ವಾರ್ಧಂ ಬಾಧ್ಯತೇ ಪಿತಾ ಪೋಷಕೋಹಿ ಪಶ್ವಾರ್ದೇಜನನೀ ಬಾಧ್ಯತೇ ಶಿಶು.**

**ಅರ್ಥ :–** ಅಶ್ವಿನೀ, ಮಘಾ, ಮೂಲಾ ಈ ನಕ್ಷತ್ರಗಳಲ್ಲಿ ಪೂರ್ವಾರ್ಧದಲ್ಲಿ ಯಾವ ಶಿಶುವು ಜನನವಾಗುತ್ತದೆಯೋ ಆ ಶಿಶುವಿನ ತಂದೆಗೂ, ರೇವತೀ, ಆಶ್ಲೇಷಾ, ಜ್ಯೇಷ್ಠಾ ನಕ್ಷತ್ರಗಳ ಉತ್ತರಾರ್ಧದಲ್ಲಿ ಜನನವಾದರೆ ಶಿಶುವಿನ ತಾಯಿಗೂ, ಅರಿಷ್ಟವಾಗುವುದು. ಪೂರ್ವಾರ್ಧ ಉತ್ತರಾರ್ಧದ ಬಗ್ಗೆ ಧರ್ಮಸಿಂಧುವಿನಲ್ಲಿ **ರೇವತ್ಯಾಶ್ಲೇಷಾಜ್ಯೇಷ್ಠ ನಕ್ಷತ್ರಾಣಾಮಂತ್ಯ ಘಾಟಿಕಾದ್ವಯಂ ಅಶ್ವಿನೀ ಮಾಘ ಮೂಲಾ ನಕ್ಷತ್ರಣಾಮಾದೌ ಘಟಿಕಾದ್ವಯಮಿತಿ ಘಟಿಕಾ ಚತುಷ್ಟಯಮಿತಂ ನಕ್ಷತ್ರಗಂಡಾಂತರಂ** ಎಂದು ಹೇಳಲ್ಪಟ್ಟಿರುತ್ತದೆ ಈ ರೀತಿಯಾಗಿ ಅಂತ್ಯದಲ್ಲಿಯೂ ಎರಡೆರಡು ಘಟಿಕಾ ಕಾಲ ನಕ್ಷತ್ರಗಂಡಾಂತರವೆಂದು ತಿಳಿಯತಕ್ಕದ್ದು.

**3. ಲಗ್ನಗಂಡ :– ಕುಲಿರಸಿಂಹಯೋಃ ಕೀಟಚಾಪಯೋರ್ಮಿನ ಮೇಷಯೋಃ ಗಂಡಾಂತರಮಂತಾರಾಲಸ್ಯೇ ಘಟಿಕಾರ್ಧಂ ಮೃತಿಪ್ರದಂ॥**

**ಅರ್ಥ :–** ಕರ್ಕ, ಸಿಂಹ, ವೃಶ್ಚಿಕ, ಧನಸ್ಸು, ಮೀನ, ಮೇಷ ಈ ಲಗ್ನಗಳ ಸಂಧಿಯಲ್ಲಿ ಅರ್ಧ ಘಟಿಕ ಕಾಲವು ಲಗ್ನ ಗಂಡಾಂತರವು, ಈ ಗಂಡಾತರದಲ್ಲಿ ಶಿಶು ಹುಟ್ಟಿದರೆ ಮರಣ ಪ್ರದವು ಈ ತ್ರಿವಿದ ಗಂಡಾಂತರ ಶಾಂತಿಯ ಬಗ್ಗೆ ನಿರ್ಣಯಸಿಂಧುವಿನಲ್ಲಿ **ತಿಥಿಗಂಡಕ್ಕೆ ನಾಡ್ವಹಂ ನಕ್ಷತ್ರೇಧೇನುರುಚ್ಯತೇ. ಕಾಂಚನಂ ಲಗ್ನ ಗಂಡೇತು ಗಂಡದೋಷೋವಿನಶ್ಯತಿ।**

**ಅರ್ಥ :–** ತಿಥಿ ಗಂಡಾಂತರಕ್ಕೆ ದ್ರವ್ಯವನ್ನು ನಕ್ಷತ್ರ ಗಂಡಾತರಕ್ಕೆ ಆಕಳನ್ನು, ಲಗ್ನ ಗಂಡಾಂತರಕ್ಕೆ ಸುವರ್ಣದ್ರವ್ಯವನ್ನು ದಾನಮಾಡಿದ್ದಾದರೆ ಗಂಡದೋಷ ಪರಿಹಾರವಾಗುವುದು. ಈ ಬಗ್ಗೆ ಧರ್ಮಸಿಂಧುವಿನಲ್ಲಿ **ಸರ್ವೇಷಾನಾಂ ಗಂಡಜಾನಾಂ ಪರಿತ್ಯಾಗೋ ವಿಧೀಯತೇ ವರ್ಜಯೇದ್ದರ್ಶನಂ ಯಾವತ್ ಷಾಣ್ಮಾಸಿಕಂ ಭವೇತ್ ಶಾಂತಿರ್ವಾ ಪುಷ್ಕಲಾ ಕಾರ್ಯಾಸೋಮಮಂತ್ರೇಣ ಭಕ್ತಿಮಾನ್** ಎಂದರೆ ಎಲ್ಲಾ ಗಂಡಕಾಲದಲ್ಲಿ ಹುಟ್ಟಿದ ಶಿಶುಗಳನ್ನು ಪರಿತ್ಯಾಗ ಮಾಡಿ 9 ತಿಂಗಳವರೆಗೂ ದರ್ಶನ ಮಾಡಕೂಡದು ಅಥವಾ ಭಕ್ತಿ ಪುರಸ್ಸರವಾಗಿ ಸೋಮ ಮಂತ್ರದಿಂದ ಸಾಂಗೋಪಾಂಗವಾಗಿ ಶಾಂತಿಯನ್ನಾಚರಿಸತಕ್ಕದ್ದು.

**ಕೂಸಿಗೆ ದಂತ ಜನನ ಫಲವು :–** ಮಗುವಿಗೆ 1ನೆಯ ತಿಂಗಳಲ್ಲಿ ಹಲ್ಲು ಹುಟ್ಟಿದರೆ ಅದಕ್ಕೆ ಹಾನಿ, 2ನೆಯ ತಿಂಗಳಲ್ಲಿ ತಮ್ಮನಿಗೆ, 3ರಲ್ಲಿ ಅತ್ತೆಗೆ, 4ರಲ್ಲಿ ತಾಯಿಗೆ, 5ರಲ್ಲಿ ಅಣ್ಣನಿಗೆ ಹಾನಿಕರ, 6ರಲ್ಲಿ ಭೋಗಪ್ರಾಪ್ತಿ, 7ರಲ್ಲಿ ತಂದೆಗೆ ಸುಖ, 8ರಲ್ಲಿ ಪುಷ್ಟಿ 9ರಲ್ಲಿ ಧನಪ್ರಾಪ್ತಿ 10ರಲ್ಲಿ ಸೌಭಾಗ್ಯ, 11ರಲ್ಲಿ ಸುಖ ಮತ್ತು ಹುಟ್ಟುವಾಗಲೇ ಹಲ್ಲು ಇದ್ದರೂ ಮೊದಲು ಮೇಲಿನ ಸಾಲಿನ ಹಲ್ಲು ಉದಯಿಸಿದರೂ ತಂದೆ ಮೊದಲಾದವರಿಗೆ ಹಾನಿಕರ, ಈ ಪ್ರಯುಕ್ತ ಶಿವಪೂಜಾ, ಘೃತದೀಪಾರಾಧನೆ ರುದ್ರಪಾರಾಯಣಾದಿಗಳಿಂದ ಶಾಂತಿಮಾಡಿಸಬೇಕು.

**ಕಿವಿ ಚುಚ್ಚುವುದಕ್ಕೆ :–** ಹಸ್ತ, ಶ್ರವಣ, ಧನಿಷ್ಠ, ಚಿತ್ತಾ, ಮೃಗ, ರೇವತಿ, ಈ ನಕ್ಷತ್ರಗಳಲ್ಲಿಯೂ, ಶುಭವಾರಗಳಲ್ಲಿಯೂ 4–9–11–14–9–30 ಈ ತಿಥಿಗಳನ್ನು ಬಿಟ್ಟು ಉಳಿದ ತಿಥಿಗಳಲ್ಲಿಯೂ ಜನ್ಮಕಾಲದಿಂದ ವಿಷಯ ತಿಂಗಳಲ್ಲಿ ಪೂರ್ವಾಭಿಮುಖವಾಗಿ ಶಿಶುವನ್ನು ಕೂಡಸಿ ಕಿವಿಯನ್ನು ಚುಚ್ಚಿಸಬೇಕು.

**ಅನ್ನಪ್ರಾಶನ :–** ಪುತ್ರನಿಗೆ 9ನೆಯ ತಿಂಗಳಲ್ಲಿ ಪುತ್ರಿಗೆ 5–7ನೇಯ ತಿಂಗಳಲ್ಲಿ ರೇವತಿ, ಶ್ರವಣ, ಪುನರ್ವಸು, ಹಸ್ತಾ ರೋಹಿಣಿ, ಮೃಗಾ, ಆರಿದ್ರ, ಉತ್ತರ, ಉ.ಷಾ, ಉ.ಭಾ ಈ ನಕ್ಷತ್ರಗಳಲ್ಲಿಯೂ ಶುಭತಿಥಿಗಳಲ್ಲಿಯೂ ಕುಯೋಗಾದಿಗಳನ್ನು ವರ್ಜ್ಯ ಮಾಡಿ ಶುಕ್ರವಾರಗಳಲ್ಲಿ ಅನ್ನಪ್ರಾಶನವನ್ನು

ಮಾಡಿಸಬೇಕು. ಕೆಲವು ಗ್ರಂಥಕಾರರ ಮತದಂತೆ 8–10–12ನೆಯ ತಿಂಗಳಲ್ಲಿಯೂ ಬರುತ್ತದೆ.

**ಚೌಲಾ ಅಥವಾ ಜಡೆ ತೆಗೆಯಿಸುವುದಕ್ಕೆ :–** ಈ ಕಾರ್ಯವನ್ನು ಗಂಡು ಮಗುವಿಗೆ ಸಮಮಾಸಗಳಲ್ಲಿ ಹೆಣ್ಣುಕೂಸಿಗೆ ವಿಷಮಮಾಸಗಳಲ್ಲಿ, ಉತ್ತರಾಯಣದಲ್ಲಿ ಹಗಲಿನ ಪೂರ್ವಭಾಗದಲ್ಲಿ ಪುನ, ಪುಷ್ಯ, ಅಶ್ವಿನಿ, ರೇವ, ಮೃಗ, ಶ್ರವಣ, ಹಸ್ತಾ, ಸ್ವಾತಿ, ಚಿತ್ತಾ, ಧನಿ, ಶತ, ಈ ನಕ್ಷತ್ರಗಳಲ್ಲಿ 2–5–8–9–10–12–13 ಈ ತಿಥಿಗಳಲ್ಲಿ ಗುರು ಶುಕ್ರ ಬುಧ ಈ ವಾರಗಳಲ್ಲಿ ಜಡೆಯನ್ನು ತೆಗೆಯಿಸಲಿಕ್ಕೆ ಉತ್ತಮವು. ಈ ಕಾರ್ಯವು ಗುರು–ಶುಕ್ರರ ಅಸ್ತಕಾಲದಲ್ಲಿ ಮಾತ್ರ ಪ್ರಶಸ್ತವಿರುವುದಿಲ್ಲ.

**ವಿದ್ಯಾರಂಭಕ್ಕೆ :–** ರೇವ, ಮೃಗ, ಅರ್ದ್ರಾ, ಶ್ರವಣ, ಪುಷ್ಯ, ಹಸ್ತಾ, ಚಿತ್ತ, ಮೂಲಾ, ಅಶ್ವಿನಿ, ಈ ನಕ್ಷತ್ರಗಳಲ್ಲಿ ಬುಧ, ಗುರು, ಶುಕ್ರ, ಈ ವಾರಗಳಲ್ಲಿ ಉತ್ತರಾಯಣದಲ್ಲಿ ಹಗಲಿನಲ್ಲಿ ಉತ್ತಮ ಆದರೆ 6–30 ತಿಥಿ ಸಂಕ್ರಮಣ ಸೂರ್ಯಸಂಕ್ರಾತಿ ಮೃತ್ಯು, ದಗ್ಧ, ಯಮಗಂಡಯೋಗ, ಪರಿಘ, ವೈಧೃತಿ, ವ್ಯಾಘಾತ, ಅತಿಗಂಡ, ವಜ್ರಯೋಗ, ಭದ್ರ, ಶಕುನಿ, ಕಿಂಸ್ತುಘ್ನ ಈ ಕರಣಗಳನ್ನು ತ್ಯಜಿಸತಕ್ಕದ್ದು ಇದಲ್ಲದೆ ಗುರು–ಶ್ರುಕ್ರರ ಅಸ್ತಕಾಲವನ್ನು ಸಹ ತ್ಯಜಿಸುವುದು ಶಾಸ್ತ್ರಸಮ್ಮತವಾದದ್ದು.

**ಲಗ್ನಾಂಗಭೂತ ಕಾರ್ಯಾದಿಗಳಿಗೆ ಮುಹೂರ್ತ :–** ಮೂಲಾ, ರೇವತಿ, ಹಸ್ತಾ, ಮಘ, ರೋಹಿಣಿ, ಉತ್ತರ, ಉತ್ತರಾಷಾಡ, ಉತ್ತರಾಭಾದ್ರ, ಮೃಗಶಿರ, ಸ್ವಾತಿ, ಅನೂರಾಧ, ಮತ್ತು ಅಶ್ವಿನಿ, ಚಿತ್ತಾ, ಪೂರ್ವಾಷಾಢ, ಪೂರ್ವಭಾದ್ರ, ಶ್ರವಣ, ಧನಿಷ್ಠಾ ಈ 17 ನಕ್ಷತ್ರಗಳಲ್ಲಿ ವಾಹನ ನಿಶ್ಚಯ ಮಾಡೋಣ, ಒರಳು ಕಲ್ಲು ಪೂಜಿಸೋಣ, ವಧೂ–ವರರಿಗೆ ಎಣ್ಣೆ ಅರಿಷಿಣ ಹಚ್ಚುವುದು. ಮಂಟಪಾ ಪ್ರತಿಷ್ಠಾ ಅಂಕುರಾರ್ಪಣ, ವಿಘ್ನೇಶ್ವರ ಪೂಜಾ ಮುಂತಾದ ಕಾರ್ಯಗಳನ್ನು ಮಾಡಲು ಶುಭವು ಹಂದರ ಹಾಕಿದ 3–6–9 ದಿನಗಳಲ್ಲಿ ಲಗ್ನ ಮಾಡಬಾರದು.

ಸರ್ವ ಮಂಗಳಕಾರ್ಯಗಳಿಗೆ ಸಾಧಾರಣ ದಿನ ಶುದ್ಧಿಯು ಕೃಷ್ಣಪಕ್ಷದಲ್ಲಿ 13–14–20 ಶುಕ್ಲ ಪ್ರತಿಪದ ಈ ತಿಥಿಗಳ ಸಂಕ್ರಮಣ, ವ್ಯತಿಪಾತ, ವೈಧೃತಿ ಗ್ರಹಣ, ಕ್ಷಯ, ವೃದ್ಧಿ, ಭದ್ರಾ, ಪರಿಘಾಯೋಗದ ಪೂರ್ವಾರ್ಧ, ರವಿ, ಮಂಗಳ, ಶನಿವಾರಗಳು ಕೃಷ್ಣಪಕ್ಷದ ಪಂಚಮಿಯವರೆಗಿನ ಚಂದ್ರನನ್ನು ಕೃಷ್ಣಪಕ್ಷದಲ್ಲಿ ತಾರಾಬಲವನ್ನೂ ಅವಶ್ಯವಾಗಿ ನೋಡಬೇಕು.

**ವಿವಾಹ ಸಂಬಂಧ ಮುಹೂರ್ತಗಳು :–** ಲಗ್ನಕಾರ್ಯಕ್ಕೆ ಚೈತ್ರ (ರವಿಯು ಮೇಷ ರಾಶಿಯಲ್ಲಿದ್ದರೆ) ವೈಶಾಖ, ಜ್ಯೇಷ್ಠ, ಮಿಥುನ, ಕಾರ್ತಿಕ, ಮಾರ್ಗಶಿರ, ಮಾಘ, ಫಾಲ್ಗುಣ ಮಾಸಗಳಲ್ಲಿ 2–3–5–9–10–13–15 ಬಹುಳ 1 ತಿಥಿಗಳಲ್ಲಿ ಹಸ್ತಾ, ಸ್ವಾತೀ, ಅನುರಾಧಾ, ರೋಹಿಣೀ, ಉ.ಷಾ, ಉತ್ತರಾಭಾದ್ರ, ಮಘ, ಮೃಗಶಿರಾ, ರೇವತೀ ನಕ್ಷತ್ರಗಳಲ್ಲಿ ಮತ್ತು ಸೋಮ, ಬುಧ, ಗುರು, ಶುಕ್ರವಾರಗಳಲ್ಲಿ ಮಾಡುವುದು ಶ್ರೇಷ್ಠ.

**ವಿಶೇಷ ಸೂಚನೆ :–** ವಧೂ–ವರರ ಜನನ, ಮಾಸ, ನಕ್ಷತ್ರ ಮತ್ತು ದಿನದಲ್ಲಿಯೂ ಒಂದು ವೇಳೆ ದಂಪತಿಗಳು ಜ್ಯೇಷ್ಠವೆಂಬ ದೋಷಉಂಟಾಗುವುದರಿಂದ ಜ್ಯೇಷ್ಠಮಾಸದಲ್ಲಿ ವಿವಾಹವನ್ನು ಮಾಡಬಹುದು.

ವಿವಾಹ ಕುಂಡಲಿಯಲ್ಲಿ ಗ್ರಹಗಳು ಹೇಗೆ ಇದ್ದರೆ ಶ್ರೇಷ್ಠ 4–9–10ನೆಯ ಸ್ಥಾನದಲ್ಲಿ ಬುಧ, ಗುರು, ಶುಕ್ರರಿರಬೇಕು ಮತ್ತು 2–9–10ನೇಯ ಸ್ಥಾನಗಳಲ್ಲಿ ಚಂದ್ರನಿರಬೇಕು. ಇದರಂತೆಯೇ ಮೂರು (3)ರಲ್ಲಿ ಶನಿಯೂ, 9ರಲ್ಲಿ ಕುಜ, ಶನಿಯು, 8ರಲ್ಲಿ ರವಿ–ಶನಿಗಳೂ, 11ರಲ್ಲಿ ರವಿ–ಕುಜರೂ ಶುಭವಾದವುಗಳ ಇನ್ನು 11ನೆಯ ಸ್ಥಾನದಲ್ಲಿ ಸರ್ವಗ್ರಹಗಳು 1–9–11ನೆಯ ಸ್ಥಾನಗಳಲ್ಲಿ ಪಾಪಗ್ರಹಗಳು ಇರಬೇಕು.

**ವಿವಾಹದ ನಂತರ ವಧುವಿನ ನಿಯಮ :–** ಮೊದಲನೆಯ ವರ್ಷದಲ್ಲಿ ಅಷಾಢ ಮಾಸದಲ್ಲಿ ಗಂಡನ ಮನೆಯಲ್ಲಿದ್ದರೆ ಅತ್ತೆಗೆ ಅನಿಷ್ಟದಾಯಕವು, ಜ್ಯೇಷ್ಠದಲ್ಲಿ ಭಾವನಿಗೂ, ಪೌಷ್ಯದಲ್ಲಿ ಮಾವನಿಗೂ, ಅಧಿಕಮಾಸದಲ್ಲಿ ಪತಿಗೂ, ಚೈತ್ರದಲ್ಲಿ ತವರು ಮನೆಯಲ್ಲಿದ್ದರೆ ಮಾತಾ ಪಿತೃಗಳಿಗೂ ಅನಿಷ್ಠದಾಯಕವು. ಮೇಲೆ ಹೇಳಿದ ಶಾಸ್ತ್ರವನ್ನು ಅವಶ್ಯವಾಗಿ ಪಾಲಿಸಬೇಕು. ಯಾರಿಗೆ ದೋಷದಾಯಕವಿರುವುದೋ ಅವರು ಜೀವಂತವಿರದೇ ಇದ್ದಪಕ್ಷದಲ್ಲಿ ಈ ನಿಯಮವನ್ನು ಪಾಲಿಸುವ ಕಾರಣವಿಲ್ಲ.

**ದೀಕ್ಷಾ (ಉಪನಯನ)ಕಾರ್ಯಕ್ಕೆ ಶುಭ ಮಾಸಗಳು :–** ಚೈತ್ರ, ವೈಶಾಖ, ಕಾರ್ತೀಕ, ಮಾರ್ಗಶಿರ, ಮಾಘ, ಫಾಲ್ಗುಣ, ಶುಭ ನಕ್ಷತ್ರಗಳು – ಅಶ್ವಿನಿ, ರೋಹಿಣಿ, ಮೃಗಶಿರ, ಉತ್ತರಾಷಾಡ, ಉತ್ತರಭಾದ್ರಾ, ಚಿತ್ತ ಪುನರ್ವಸು, ಪುಷ್ಯ, ಹಸ್ತ, ಸ್ವಾತಿ ಮೂಲ, ಶ್ರವಣ, ಧನಿಷ್ಠ ಶತತಾರ, ಶುಭವಾರಗಳು ರವಿ, ಚಂದ್ರ, ಬುಧ, ಗುರು, ಶುಕ್ರವಾರಗಳು (ಭದ್ರಾದಿಯೋಗವಿಲ್ಲದ ದಿವಸಗಳಿರಬೇಕು) 2–3–5–9–10–11–12 ಮತ್ತು ಕೃಷ್ಣಪಕ್ಷ (ಪಂಚಮಿ).

**ಗೃಹಾರಂಭ ಮುಹೂರ್ತ :–** ಶುಭ ನಕ್ಷತ್ರಗಳು ಮೃಗ, ರೇವತಿ, ಜ್ಯೇಷ್ಠ, ಅನು, ಉತ್ತರ, ಉ.ಷಾ. ಉ.ಭಾ, ರೋಹಿಣಿ ಸ್ವಾತಿ, ಧನಿಷ್ಠ, ಪುಷ್ಯ, ಶುಭತಿಥಿಗಳು 2–3–5–6–10–11–12–13–15 ಶುಕ್ಲ ಪಾಡ್ಯ ವರ್ಜ್ಯವು ಶುಭವಾರಗಳಲ್ಲಿಯೂ ಲಗ್ನ 1–2–5–9–11–12 ಕೇಂದ್ರ ತ್ರಿಕೋಣದಲ್ಲಿ ಶುಭಗ್ರಹ 3–9 ರಲ್ಲಿ ಪಾಪಗ್ರಹವಿದ್ದರೆ ಶುಭವು.

**ಮರಣಕ್ಕೆ ದುಷ್ಟ ನಕ್ಷತ್ರಗಳು :–** ಧನಿಷ್ಠ, ಶತಭಿಷ, ಪೂರ್ವಭಾದ್ರಪದ, ಉ.ಭಾ., ರೇವತಿ ಇವು ಪಂಚಕ ನಕ್ಷತ್ರಗಳು ಇವು ಮರಣಕ್ಕೆ ಅನಿಷ್ಠದಾಯಕವು 5 ತಿಂಗಳು ಮನೆಯನ್ನು ಬಿಟ್ಟು ನಂತರ ಪಂಚಕ ಶಾಂತಿ ಮೃತ್ಯುಂಜಯ ಶಾಂತಿಯನ್ನು ಮಾಡಿಕೊಂಡು ಬರತಕ್ಕದ್ದು. ದೀರ್ಘಾವದಿ ಮನೆಯನ್ನು ಬಿಟ್ಟ ನಂತರ ಶಾಂತಿಯನ್ನು ಮಾಡಿಸತಕ್ಕದು.

**ತ್ರಿಪಾದಿ ನಕ್ಷತ್ರಗಳು :–** ಕೃತ್ತಿಕಾ, ಪುನರ್ವಸು, ಉತ್ತರ, ವೈಶಾಖ, ಉತ್ತರಾಷಾಢ, ಪೂರ್ವಾಭಾದ್ರಪದ ಇವು ತ್ರಿಪಾದಿ ನಕ್ಷತ್ರಗಳು. ಇವುಗಳಲ್ಲಿ ಪೂರ್ವಾಭಾದ್ರ ಹೊರತು ಬಾಕಿ ನಕ್ಷತ್ರಗಳಲ್ಲಿ ಮರಣವಾದರೆ ಆ ಸ್ಥಳವನ್ನು 3 ತಿಂಗಳ ಕಾಲ ಬಿಡಬೇಕು. ನಂತರ ಶಾಂತಿಯನ್ನು ಮಾಡಿಕೊಂಡು ಬರತಕ್ಕದ್ದು.

**ಧನಿಷ್ಟ ಪಂಚಕದಲ್ಲಿ ಯಾತ್ರಾ ಪ್ರಕರಣ :–** ಮಂಗಳವಾರ ಪೂರ್ವದಿಕ್ಕಿಗೂ, ಸೋಮವಾರ, ಶನಿವಾರಗಳಲ್ಲಿ ದಕ್ಷಿಣ ದಿಕ್ಕಿಗೂ, ಬುಧವಾರ, ಗುರುವಾರಗಳಲ್ಲಿ ಪಶ್ಚಿಮ ದಿಕ್ಕಿಗೂ, ಭಾನುವಾರ, ಶುಕ್ರವಾರಗಳಲ್ಲಿ ಉತ್ತರ ದಿಕ್ಕಿಗೂ ಪ್ರಯಾಣವು ಶುಭವು.

ಸೋಮ, ಬುಧ, ಗುರು, ಶುಕ್ರವಾರಗಳೂ, ದ್ವಿತೀಯ, ತೃತೀಯ, ಪಂಚಮೀ, ಸಪ್ತಮೀ, ದಶಮೀ, ತ್ರಯೋದಶಿ ತಿಥಿಗಳೂ, ಅಶ್ವಿನಿ, ಮೃಗಶಿರ, ಪುನರ್ವಸು, ಪುಷ್ಯ, ಹಸ್ತ, ಅನುರಾಧ, ಮೂಲ, ಶ್ರವಣ, ಧನಿಷ್ಠ, ರೇವತಿ ಈ ನಕ್ಷತ್ರಗಳೂ, ಸಿಂಹ, ತುಲಾ, ಧನುಸ್ಸು, ಮೀನ ಲಗ್ನಗಳೂ ಶುಭಕರಗಳು, ಕೆಲವರು ಮೀನ ಲಗ್ನವನ್ನು ಉತ್ತಮವೆಂದು ಸಮ್ಮತಿಸುವುದಿಲ್ಲ. ಪ್ರಯಾಣದಲ್ಲಿ ಮುಖ್ಯವಾಗಿ ಪಂಚಕ, ಯೋಗಿನಿ ವಾರಶೂಲೆ ಇವುಗಳನ್ನು ಗಮನಿಸಬೇಕು.

ಸೋಮವಾರ ಶನಿವಾರಗಳಲ್ಲಿ 8 ಘಳಿಗೆಗಳ ಮೇಲೂ, ಮಂಗಳವಾರ ಬುಧವಾರಗಳಲ್ಲಿ 12 ಘಳಿಗೆಗಳ ಮೇಲೂ, ಭಾನುವಾರ ಶುಕ್ರವಾರಗಳಲ್ಲಿ 15 ಘಳಿಗೆಗಳ ಮೇಲೂ, ಗುರುವಾರ 22 ಘಳಿಗೆಗಳ ಮೇಲೂ ವಾರಶೂಲೆಯ ದೋಷವಿಲ್ಲ. ಅದರೂ ಗುಳಿಕಕಾಲ ರಾಹುಕಾಲಗಳನ್ನು ಬಿಡಬೇಕು.

ನವಮೀ ದಿವಸ ಪ್ರಯಾಣ ಹೊರಡುವುದೂ, ಹೊರಟ ಒಂಭತ್ತನೇ ದಿವಸ ಒಂದು ಸ್ಥಳಕ್ಕೆ ಹೋಗಿ ಸೇರುವುದೂ, ಸೇರಿದ ಒಂಭತ್ತನೇ ದಿನ

ಪುನಃ ಪ್ರಯಾಣ ಹೊರಡುವುದು, ಊರಿನಿಂದ ಹೊರಟ ಒಂಭತ್ತನೇ ದಿನ ಪುನಃ ಬಂದು ಸೇರುವುದೂ ಕೂಡದು.

**ಶಾಂತಿ :–** ಪೂರ್ವದಿಕ್ಕಿಗೆ ಪ್ರಯಾಣ ಹೊರಡುವಾಗ ಮೊಸರನ್ನೂ, ದಕ್ಷಿಣ ದಿಕ್ಕಿಗೆ ಹೊರಡುವಾಗ ಎಳ್ಳೆಣ್ಣೆ ಆಥವಾ ಬೆಣ್ಣೆಯನ್ನೂ, ಪಶ್ಚಿಮ ದಿಕ್ಕಿಗೆ ಹೊರಡುವಾಗ ಬೆಲ್ಲವನ್ನೂ, ಉತ್ತರ ದಿಕ್ಕಿಗೆ ಹೊರಡುವಾಗ ಹಾಲನ್ನೂ ಊಟಮಾಡಿ ಹೊರಟರೆ ವಾರಶೂಲೆ ದೋಷವಿಲ್ಲ.

**ಆಯುಷ್ಕರ್ಮ :–** ದ್ವಿತೀಯ, ತೃತೀಯ, ಪಂಚಮೀ, ಸಪ್ತಮೀ, ತ್ರಯೋದಶಿ ತಿಥಿಗಳೂ, ಸೋಮ, ಬುಧ, ಗುರುವಾರಗಳೂ, ಅಶ್ವಿನೀ, ಮೃಗಶಿರಾ, ಪುನರ್ವಸು, ಪುಷ್ಯಾ, ಹಸ್ತಾ, ಚಿತ್ತಾ, ಸ್ವಾತೀ, ಜ್ಯೇಷ್ಠಾ, ಶ್ರವಣ, ಧನಿಷ್ಠ, ಶತಭಿಷ, ರೇವತಿ ನಕ್ಷತ್ರಗಳೂ, ಪೂರ್ವಾಹ್ನವೂ ಶುಭ ಲಗ್ನ ಶ್ರೇಷ್ಠವಾದದ್ದು ಶುಭಕಾಲದಲ್ಲಿ ಶಾಸ್ತ್ರೋಕ್ತರೀತ್ಯಾ ಕ್ಷೌರ ಮಾಡಿಸಿಕೊಳ್ಳುವುದರಿಂದ ಆಯುಷ್ಯಾಭಿವೃದ್ಧಿಯೂ, ಅಶುಭ ಕಾಲದಲ್ಲಿ ಮಾಡಿಸಿಕೊಳ್ಳುವುದರಿಂದ ತನಗೂ ತನ್ನ ಕುಟುಂಬಕ್ಕೆ ಸೇರಿದವರಿಗೂ ಆಯುಃ ಕ್ಷೀಣವುಂಟಾಗುವುದರಿಂದ ಈ ಕರ್ಮಕ್ಕೆ ಆಯುಷ್ಕರ್ಮವೆಂದು ಹೆಸರು. ಫಲವು ಅದೃಶ್ಯವಾದ್ದರಿಂದ ಹಿಂದೂ ಶಾಸ್ತ್ರಕ್ಕೆ ಕಟ್ಟುಪಡುವವರೆಲ್ಲರೂ ಇದಕೆ ಮುಖ್ಯವಾಗಿ ಗಮನವನ್ನು ಕೊಡಬೇಕು. ಅಣ್ಣ ತಮ್ಮಂದಿರೂ, ತಂದೆ ಮಕ್ಕಳೂ ಒಂದೇ ದಿನ ಮಾಡಿಸಿಕೊಳ್ಳಬೇಕಾದ ಸಂದರ್ಭ ಉಂಟಾದರೆ ಪುನಃ ಶೀಘ್ರದಲ್ಲೇ ಉತ್ತಮ ದಿನದಲ್ಲಿ ಮಾಡಿಸಿಕೊಳ್ಳುವುದರಿಂದ ಹಿಂದಿನ ದೋಷವು ಪರಿಹಾರವಾಗುವುದೆಂಬುದು ಶಾಸ್ತ್ರಸಮ್ಮತವು.

ತಂದೆ, ಅಣ್ಣ, ತಮ್ಮಂದಿರು ಇರುವವರು ರವಿ, ಗುರುವಾರಗಳಲ್ಲಿ ಸಹೋದರರು ಚತುರ್ಥಿಯಲ್ಲಿ. ತಾಯಿ ಷಷ್ಠಿ, ಪತ್ನಿ–ಅಷ್ಟಮಿ, ಪುತ್ರರು– ದಶಮಿ ಅಕ್ಕ, ತಂಗಿಯರು– ಚತುರ್ದಶಿ. ತಂದೆ ಕೃಷ್ಣಪಕ್ಷ ಅಷ್ಟಮಿ, ಚತುರ್ದಶಿ, ಸಂಕ್ರಾಂತಿ, ಅಮಾವಾಸ್ಯೆ, ಧಾನ್ಯವಂತರಿಗೆ ಪಂಚಮೀ, ನವಮಿ. ಎಲ್ಲರಿಗೂ ದಶಮಿ, ಏಕಾದಶಿ ದ್ವಾದಶಿ ಮೇಲೆಹೇಳಿದ ದಿವಸಗಳಲ್ಲಿ ಆಯುಷ್ಕರ್ಮವು ಶುಭವಲ್ಲ.

**ಜ್ಯೇಷ್ಠ ಮಾಸದಲ್ಲಿ ಆಚರಿಸಬಹುದಾದ ವಿಶೇಷ ವ್ರತಗಳು :–** ರಂಭಾವ್ರತ ಜ್ಯೇಷ್ಠಮಾಸದ ತದಿಗೆ ದಿನ ಸ್ನಾನ ಮಾಡಿ ರಂಭಾವ್ರತವನ್ನು ಆಚರಿಸಬೇಕು. ಇದರಿಂದ ದುರ್ಲಭವಾದ ಶ್ರೇಷ್ಠ ಫಲಗಳು, ಅಕ್ಷಯವಾದ ಐಶ್ವರ್ಯ, ಸುಖ, ಸೌಭಾಗ್ಯಗಳು, ಅಜರಾಮರವಾದ ಸಹಬಾಳ್ವೆಗಳು ದೊರಕುವುವು. ಈ ವ್ರತವನ್ನು ಉದ್ಯಾನದಲ್ಲಿಯಾಗಲಿ, ಮನೆಯ ಹಿಂಬದಿಯಲ್ಲಾಗಲಿ, ಬಾಳೆಗಿಡಗಳನ್ನು ಬೆಳೆಸಬೇಕು. ಪಂಚಾಮೃತ, ಗಂಧ, ಪುಷ್ಪಮಾಲೆ, ಕರ್ಪೂರ, ಕೇಸರದಿಂದ ಸುಗಂಧಿತವಾದ, ಶುದ್ಧವಾದ ತಂಪು ನೀರು ಇವುಗಳಿಂದ ಬಾಳೆ ಗಿಡದ ಸುತ್ತಲೂ ಸೇಚನ ಮಾಡಿ ಪೂಜಿಸಬೇಕು. ಅನಂತರ ಸುರ್ವಣದಿಂದ ಬ್ರಹ್ಮನನ್ನು ನಿಲ್ಲಿಸಿ, ಬಾಳೆಯ ತೋಟದ ಮಧ್ಯಭಾಗದಲ್ಲಿ ಕಲಶವನ್ನು ಸ್ಥಾಪಿಸಿ ಷೋಡಶೋಪಚಾರದಿಂದ ಪೂಜಿಸಬೇಕು. ವಿವಿಧ ಪದಾರ್ಥಗಳನ್ನು ನಿವೇದಿಸಬೇಕು. ಶಕ್ತ್ಯಾನುಸಾರ ರಾಮನ ಪೂಜೆ ಮಾಡಿಸಿ ತಾನು ಪ್ರಸಾದವನ್ನು ಸ್ವೀಕರಿಸಬೇಕು. ಗೀತ, ವಾದ್ಯ, ಶ್ರವಣ, ಪುರಾಣ, ಹರಿಕಥೆ, ನಾಮ ಸಂಕೀರ್ತನೆಗಳಿಂದ ಜಾಗರಣೆ ಮಾಡಬೇಕು. ಈ ರೀತಿ ವ್ರತ ಪೂರ್ತಿಯಾದ ನಂತರ ಪ್ರತಿಮೆ ಮತ್ತು ಬಾಳೆವನವನ್ನು ಬ್ರಾಹ್ಮಣನಿಗೆ ದಾನವಾಗಿ ಕೊಡಬೇಕು. ಹೀಗೆ ನಡೆಸಿದಲ್ಲಿ ಸಕಲ ಐಶ್ವರ್ಯಗಳು ಕೈಗೂಡುವವು.

ಬ್ರಹ್ಮನ ಶಾಪದಿಂದ ತಪ್ತಳಾದ ಸಾವಿತ್ರಿಯು ಬ್ರಹ್ಮನನ್ನೇ ಮೊರೆ ಹೋಗಿ ಐದು ವರ್ಷಗಳ ಕಾಲ ಜ್ಯೇಷ್ಠಮಾಸದಲ್ಲಿ ಪೂಜಿಸಿದ ಕಾರಣ ಬ್ರಹ್ಮನು ಸಾವಿತ್ರಿಗೆ ಕೊಟ್ಟ ವರವೇನೆಂದರೆ – ಸಮಸ್ತ ಭೂಲೋಕ ಜನರಿಗೆ ಅನುಗ್ರಹ ಮಾಡಲಿಕ್ಕಾಗಿ ಒಂದಂಶದಿಂದ ರಂಭಾ ಎಂದು ಜ್ಯೇಷ್ಠಮಾಸದಲ್ಲಿ

ಪೂಜೆಯನ್ನು ಸ್ವೀಕರಿಸುವುದರಿಂದ ಸಕಲ ಸೌಭಾಗ್ಯ ಸಂಪತ್ತುಗಳು ಅವರಿಗೆ ಲಭಿಸುವಂತೆ ಮಾಡುತ್ತೇನೆಂದು ಹೇಳಿದನು.

**ದಶಹರ ವ್ರತ :–** ಜ್ಯೇಷ್ಠಮಾಸ ಶುಕ್ಲ ಪಕ್ಷದ ದಶಮಿ ತಿಥಿ ಬುಧವಾರ ಹಸ್ತ ನಕ್ಷತ್ರ, ಗರಜ ಕರಣ, ಆನಂದ ಯೋಗ ಅಥವಾ ವ್ಯತೀಪಾತ ಯೋಗ ಇರುವಾಗ ಚಂದ್ರ ಕನ್ಯಾರಾಶಿಯಲ್ಲಿರುವಾಗ ಸ್ನಾನ ದಾನಾದಿಗಳನ್ನು ಮಾಡುವುದರಿಂದ ಸರ್ವಪಾಪಗಳು ನಾಶವಾಗುವುವು.

ಅನ್ಯಾಯದಿಂದ ಪರದ್ರವ್ಯಾಪಹರಣ, ಶಾಸ್ತ್ರ ವಿರುದ್ಧವಾದ ಹಿಂಸಾಚಾರ, ಪರಸ್ತ್ರೀ ಗಮನ ಈ ಮೂರು ಕಾಯಿಕ ಕರ್ಮಗಳು. ಕಠೋರವಾಚನಗಳನ್ನಾಡುವುದು, ಅಸತ್ಯ ಮಾತನಾಡುವುದು, ಪರೋಕ್ಷ, ಪರನಿಂದೆ, ಅಸಂಬದ್ಧ ಪ್ರಲಾಪ ಇವುಗಳು ವಾಚಿಕ ಕರ್ಮಗಳು. ಪರರ ದ್ರವ್ಯವನ್ನು ಅನ್ಯಾಯದಿಂದ ಅಪಹರಿಸುವ ಬಗ್ಗೆ ಯೋಚಿಸುವುದು, ಪರರಿಗೆ ಮನಸಾ ಅನ್ಯಾಯವನ್ನು ಬಗೆಯುವುದು, ಮಿಥ್ಯಾಪವಾದ ವಿಚಾರ– ಈ ಮೂರು ಮಾನಸಿಕ ಕರ್ಮಗಳು. ಇವುಗಳು ಜ್ಯೇಷ್ಠ ಶುದ್ಧ ದಶಮಿಯಂದು ಭಗವದ್ದರ್ಶನ, ಸ್ಪರ್ಶ, ನದಿಸ್ನಾನ, ತೀರ್ಥಸ್ನಾನ, ಭಗವಂತನ ಅರ್ಚನೆಗಳಿಂದ ಮೇಲೆ ಹೇಳಿದ ಹತ್ತು ವಿಧ ಪಾಪಗಳು ನಶಿಸಿ ಹೋಗುವುವು. ಆದ್ದರಿಂದ ದಶಹರ ಎಂದು ಕರೆಯುತ್ತಾರೆ.

ಹಿಂದಿನ ಹತ್ತು ಜನ್ಮಗಳಲ್ಲಿ ಸಂಗ್ರಹವಾದ ಬ್ರಹ್ಮಹತ್ಯೆ ಸಮವಾದ ಪಾಪಗಳು ಕಾರಣಾಂತರದಿಂದ ನಾಶವಾಗುವುದಕ್ಕೆ ದಶಹರ ಎಂದು ಕರೆಯುತ್ತಾರೆ. ದಶವಿಧ ಪಾಪಗಳನ್ನು ನಾಶಮಾಡುವ ಗಂಗೆಗೆ ನಮೋನಮಃ ಎಂಬ ಮಂತ್ರವನ್ನು ಪಠಿಸುತ್ತ ಭಕ್ತಿಯಿಂದ ಗಂಗೆಯನ್ನು ಪೂಜಿಸಬೇಕು. ಅದೇ ಸಮಯದಲ್ಲಿ ನಾರಾಯಣ, ಚತುರ್ಮುಖ ಬ್ರಹ್ಮ, ಮಹೇಶ, ಸೂರ್ಯ, ಭಗೀರಥ, ಹಿಮವಂತ, ಸ್ಕಂಧ, ಗಣಪತಿ, ಚಂಡಿ ಮತ್ತು ಸೋಮ ಎಂಬ ಹತ್ತು ದೇವತೆಗಳನ್ನು ಪ್ರತ್ಯೇಕವಾಗಿ ಹತ್ತಿಯ ಫಲಗಳಿಂದ ಪೂಜಿಸಿ ಪ್ರಾರ್ಥಿಸಬೇಕು. ಹತ್ತು ಜನ ಬ್ರಾಹ್ಮಣರಿಗೆ – ಪ್ರತಿಯೊಬ್ಬರಿಗೂ ಎಳ್ಳು–ಬೆಲ್ಲ ಕೊಟ್ಟು ಪೂಜಿಸಬೇಕು. ಹತ್ತು ಸಕ್ತ ಪಿಂಡಗಳನ್ನು ಜಲದಲ್ಲಿ ಹಾಕಬೇಕು. ಶಕ್ತ್ಯಾನುಸಾರ ಹತ್ತು ಗುಡ ಪಿಂಡಗಳನ್ನು ದಾನ ಕೊಡಬೇಕು. ಮತ್ಸ್ಯ, ಕಚ್ಛಪ, ಮಂಡೂಕ, ಶಿಂಶುಮಾರ ಇವೇ ಮೊದಲಾದ ಪ್ರತಿಮೆಗಳನ್ನು ಸುವರ್ಣ, ರಜತ, ಇತರ ಧಾತುಗಳಿಂದ ಮಾಡಿದ್ದು ಅದೂ ಸಾಧ್ಯವಾಗದಿದ್ದರೆ, ಪಿಷ್ಟದಿಂದ ಮಾಡಿಸಿ ಅರ್ಚಿಸಿ ಗಂಗೆಯಲ್ಲಿ ಹಾಕಬೇಕು ಅನಂತರ ಪ್ರತಿಯೊಬ್ಬರಿಗೂ ತಿಲ, ಭತ್ತ, ಗೋದಿ, ಒಂದು ಆಕಳು ಮುಂತಾದವುಗಳನ್ನು ದಾನವಾಗಿ ಕೊಡಬೇಕು. ವಿವಿಧ ಭಕ್ಷಗಳಿಂದ ಬ್ರಾಹ್ಮಣರಿಗೆ ಭೋಜನ ಮಾಡಿಸಬೇಕು. ಹೀಗೆ ಮಾಡುವುದರಿಂದ ಹತ್ತು ಜನ್ಮಗಳ ಸಂಚಿತ ಪಾಪಕರ್ಮಗಳು ನಾಶವಾಗುವುವು. ಜ್ಯೇಷ್ಠ ಶುದ್ಧ ಪ್ರತಿಪದದಿಂದ ದಶಮಿವರೆಗೆ ಪ್ರತಿದಿನ ಸ್ನಾನವು ವಿಶೇಷ ಫಲದಾಯಕವಾಗಿದೆ. ದೈವ ಯೋಗದಿಂದ ದಶಯೋಗಗಳು ಕೂಡಿಬಂದಾಗ ಈ ದಶಹರ ದಿನವು ದಶಯೋಗಾ ಎಂದಾಗುತ್ತದೆ.

**ಧನುರ್ವ್ಯತೀಪಾತಯೋಗ :–** ಧನುರ್ಮಾಸ, ವ್ಯತೀಪಾತಯೋಗ, ಅರುಣೋದಯ ಕಾಲದಲ್ಲಿ ವಿಷ್ಣುವನ್ನು ಪೂಜಿಸಿ, **ವ್ಯತಿಪಾತ ಮಹಾಸತ್ವ ಸರ್ವಪಾಪಪ್ರಣಾಶನ। ಸಹಸ್ರಬಾಹೋ ವಿಶ್ವಾತ್ಮನ್ ಗೃಹಾಣಾರ್ಘ್ಯಂ ನಮೋಽಸ್ತುತೇ॥** ಎಂದು ವ್ಯತೀಪಾತ ದೇವತೆಗೆ ಅರ್ಘ್ಯವನ್ನು ಕೊಡಬೇಕು. ಆಮೇಲೆ ದಕ್ಷಿಣಾಭಿಮುಖವಾಗಿ ವಂಶದ್ವಯ ಪಿತೃಗಳ ತೃಪ್ತಿಗಾಗಿ ಅವರನ್ನು ಸ್ಮರಿಸುತ್ತಾ **ವಿಷ್ಣುಪ್ರಿಯ ವ್ಯತೀಪಾತ ಪಿತೃಣಾಮನೃಣಪ್ರದ। ಪಿತೃಣಾಂಮಮ ವೈಕುಂಠಂ ಪ್ರಯಚ್ಛ ಭಗವನ್ ಹರೇ॥ ತ್ವತ್ಪ್ರಸಾದೇನ ಮೇ ಭಕ್ತಿರಸ್ತ್ವೇವಮನಪಾಯಿನೀ। ಜ್ಞಾನವಿಜ್ಞಾನವೈರಾಗ್ಯಂ ಪ್ರಯಚ್ಛ ಭಗವನ್ಮಮ॥** ಎಂಬ ಮಂತ್ರದಿಂದ ತರ್ಪಣವನ್ನು ಕೊಡಬೇಕು. ಈ ವ್ಯತೀಪಾತ ದಿನದ

ಪೂಜೆಯು ಅರ್ಧೋದಯಾದಿ ಮಹಾಪುಣ್ಯ ಕಾಲಕ್ಕಿಂತ ಸಹಸ್ರಪಾಲು ಅಧಿಕ ಪುಣ್ಯಪ್ರದವಾಗಿದೆ.

**ಅಶೌಚ ಪ್ರಾರಂಭ :-** ದಿವಸದ 60 ಘಳಿಗೆಯಲ್ಲಿ ಹಗಲಿನ ಪ್ರಮಾಣವನ್ನು ಕಳೆದು ಉಳಿದ ಭಾಗವೇ ರಾತ್ರಿ ಪ್ರಮಾಣ, ಅದನ್ನು 8 ಭಾಗ ಮಾಡಿದಾಗ ಮೊದಲ ಐದುಭಾಗಗಳಲ್ಲಿ ಜನನವಾಗಲಿ, ಮರಣವಾಗಲಿ ಆದರೆ, ಅದು ಹಿಂದಿನ ದಿನಕ್ಕೆ ಸೇರುತ್ತದೆ. ನಂತರದ 6, 7, 8, ಭಾಗಗಳಲ್ಲಾದರೆ ಮುಂದಿನ ದಿನಕ್ಕೆ ಸೇರುತ್ತದೆ.

**ರಜಸ್ವಲಾ ಶುದ್ಧಿ :-** ಒಮ್ಮೆ ರಜಸ್ವಲೆಯಾಗಿ ಪುನಃ 17 ದಿವಸದೊಳಗೆ ಪುನಃ ರಜಸ್ವಲೆಯಾದರೆ ಸ್ನಾನ ಮಾಡಿದರೆ ಸಾಕು. 18ನೇ ದಿನ ರಜಸ್ವಲೆಯಾದರೆ 1 ದಿನ ನಂತರ ಸ್ನಾನದಿಂದ ಶುದ್ಧಿ. 19ನೇ ದಿನ ರಜಸ್ವಲೆಯಾದರೆ 2 ದಿನ ಅಶುಚಿ, ನಂತರ ಸ್ನಾನದಿಂದ ಶುದ್ಧಿ.

~*~

## ಅಶೌಚನಿರ್ಣಯ (ಸ್ಥೂಲ ಪರಿಚಯ)

**ಅಥ ಜನನಾಶೌಚ**

1) 1, 2, 3ನೇ ತಿಂಗಳಲ್ಲಿ ಗರ್ಭಸ್ರಾವವಾದರೆ ತಾಯಿಗೆ ರಜಸ್ವಲೆಯಂತೆ ಮೈಲಿಗೆ, ತಂದೆ ಮೊದಲಾದವರು ಸ್ನಾನದಿಂದ ಶುದ್ಧಿ.

2) 4ನೇ ತಿಂಗಳಲ್ಲಿ ಗರ್ಭಸ್ರಾವವಾದರೆ ತಾಯಿಗೆ 4 ದಿನ ಮೈಲಿಗೆ.

3) 5ನೇ ತಿಂಗಳಲ್ಲಿ ಗರ್ಭಸ್ರಾವವಾದರೆ ತಾಯಿಗೆ 5 ದಿನ ಮೈಲಿಗೆ ತಂದೆ ಮೊದಲಾದವರು 3 ದಿನ ಜಾತಾಶೌಚ.

4) 6ನೇ ತಿಂಗಳಲ್ಲಿ ಗರ್ಭಸ್ರಾವವಾದರೆ ತಾಯಿಗೆ 6 ದಿನ ಮೈಲಿಗೆ.

5) 7 ರಿಂದ ಮಗುವಿನ ಜನನದ ವರೆಗೂ ತಾಯಿಗೆ 10 ದಿನ ರಜಸ್ವಲೆಯಂತೆ ಮೈಲಿಗೆ, ತಂದೆ ಮೊದಲಾದವರಿಗೆ 10ದಿನ ಜಾತಾಶೌಚ 7 ತಲೆಯವರೆಗೂ 3 ದಿನ.

**6) ಮಗಳು ತಂದೆ-ತಾಯಿಗಳ ಮನೆಯಲ್ಲಿ ಹಡೆದರೆ :** ತಂದೆ-ತಾಯಿಗಳಿಗೆ ಮೂರುದಿನ ಜಾತಾಶೌಚ. ಜನ್ಮ ನೀಡಿದವಳ ಅಣ್ಣ ತಮ್ಮಂದಿರು, ಚಿಕ್ಕಪ್ಪ ದೊಡ್ಡಪ್ಪರು, ಅಲ್ಲಿಯೇ ಇದ್ದರೆ ಮಾತ್ರ ಒಂದು ದಿನ ಅಶೌಚ.

**7) ಗಂಡನ ಮನೆಯಲ್ಲಿ ಹಡೆದರೆ :** ತಂದೆ-ತಾಯಿ, ಮೊದಲಾದವರಿಗೆ ಅಶುಚಿಯಿಲ್ಲ, ಸ್ನಾನಮಾತ್ರ, 'ಪತಿಗೃಹೇ ಪ್ರಸವೇ ಪಿತ್ರಾದೀನಾಂ ನಾಶೌಚಮಾ' (ಧ.ಸಿಂ)

**8) ಮೃತಾಶೌಚ ನಿರ್ಣಯ :** 7 ರಿಂದ ಮೊದಲು ಮಾಡಿ ಮೃತಶಿಶುವಾಗಲಿ, ಜನನಾ ನಂತರ ಅಲ್ಪಕಾಲದಲ್ಲಿಯೇ ಮೃತವಾದರೂ ತಂದೆ-ತಾಯಿ, ಸಪಿಂಡರಿಗೆಲ್ಲಾ 10 ದಿನ ಮೃತಾಶೌಚ.

**9) ಮಗು ಹುಟ್ಟಿ ನಾಲವನ್ನು ಕತ್ತರಿಸುವ ಮೊದಲು ಮೃತವಾದರೆ :** ತಾಯಿಗೆ 10 ದಿನ, ತಂದೆ ಮೊದಲಾದವರಿಗೆ 3 ದಿನ ಜಾತಾಶೌಚ ಮಾತ್ರ.

**10) ಹತ್ತುದಿನದೊಳಗೆ ಮೃತವಾದರೆ :** ತಾಯಿಗೆ ಜಾತಾಶೌಚ 10 ದಿನ, ತಂದೆ ಮೊದಲಾದವರಿಗೆ 10 ದಿನ ಜಾತಾಶೌಚ. ಮೃತಾಶೌಚವಿಲ್ಲ. **ದಶಾಹಾಭ್ಯಂತರೇ ಮೃತೇ ಸಪಿಂಡಾನಾಂ ಜನನಾಶೌಚಮ್। ದಶದಿನಂ ಮೃತಾಶೌಚಂ ತುನಾಸ್ತ್ಯೇವ ॥**

**11) ಹತ್ತು ದಿನಾ ನಂತರ ನಾಮಕರಣದ ಮೊದಲೇ ಸತ್ತರೆ :** (12 ದಿನದೊಳಗೆ) ತಂದೆ-ತಾಯಿಗಳಿಗೆ ಸವತಿ ತಾಯಿಗೂ ಮೂರು ದಿನ ಅಶೌಚ, 3 ತಲೆ ದಾಯಾದಿಗಳಿಗೆ ಸ್ನಾನಮಾತ್ರ.

12) ನಾಮಕರಣದಿಂದ ದಂತಜನನವರೆಗೂ (ಸುಮಾರು 7 ತಿಂಗಳು).

**13) ಜನನ ಶೌಚದಲ್ಲಿ ಕರ್ತವ್ಯ :** ಗರ್ಭಿಣಿಗೆ ಹತ್ತುದಿನದ ಅಸ್ಪೃಶ್ಯತ್ವ, ಯಾರೂ ಅವಳನ್ನು ಮುಟ್ಟಬಾರದು. ತಂದೆಗೆ ಸ್ನಾನದಿಂದ ಶುದ್ಧಿ, ಸ್ನಾನದ ಮೊದಲಿ ಅಸ್ಪೃಶ್ಯತೆ. ದಾಯಾದಿಗಳಿಗೆಲ್ಲರಿಗೂ ಕರ್ಮ ಅನಧಿಕಾರವು, ತಂದೆಗೆ ಜಾತಕರ್ಮ, ದಾನಾದಿಗಳಲ್ಲಿ ಅಧಿಕಾರವಿದೆ. ದಾಯಾದಿಗಳು ಎಂದರೆ ಮೂಲಪುರುಷನಿಂದ 7 ತಲೆ.

14) ಗಂಡು/ಹೆಣ್ಣು ಮಗುವಾದಾಗ ವಿಶೇಷ ಶೌಚ ತಾಯಿಗೆ, ಗಂಡುಮಗುವಾದರೆ ಹತ್ತುದಿನ ಹಾಗೂ ಇಪ್ಪತ್ತುದಿನ ಅಧಿಕಾ ಶೌಚ. ಹೆಣ್ಣುಮಗುವಾದರೆ ಒಂದು ತಿಂಗಳು/ಅಂದರೆ 40 ದವನ ಕರ್ಮಾನಧಿಕಾರ.

**15) ಖನನವೋ ದಹನವೊ** ? 12 ದಿವಸದೊಳಗೆ ಮಗುವು ಮೃತವಾದರೆ ಹೂಳುವುದು. 12 ರಿಂದ 3 ವರ್ಷದವರೆಗೂ ಖನನ/ದಹನವು. ಆದರೆ ಪ್ರಥಮ ವರ್ಷದಲ್ಲಿ ಚೌಲವಾಗಿದ್ದರೆ ದಹನವೆ. 3 ವರ್ಷಾನಂತರ ದಹನವೇ.

**ಮೃತಾ ಶೌಚ : (ಸಣ್ಣ ಮಕ್ಕಳ ಮೃತಾಶೌಚ)** : 1. ಹತ್ತು ದಿನವಾದ ಮೇಲೆ ನಾಮಕರಣ ಮೊದಲು (12 ದಿನದೊಳಗೆ) ಗಂಡುಮಗು ಮೃತವಾದರೆ ತಂದೆ-ತಾಯಿಗೆ ಮಾತ್ರ 3 ದಿನ ಮೃತಾಶೌಚ. 3 ತಲೆ ಸಪಿಂಡರಿಗೆ ಸ್ನಾನಮಾತ್ರ. ನಾಮಕರಣಾ ನಂತರ ಹಲ್ಲು ಬರುವವರೆಗೂ ಪುತ್ರ ಮೃತಿಯಲ್ಲಿ ದಹನ ಮಾಡಿದರೆ 3 ತಲೆ ಸಪಿಂಡರಿಗೆ ಒಂದುದಿನ, ಹೂತು ಹಾಕಿದರೆ ಸ್ನಾನಮಾತ್ರ. ತಂದೆ-ತಾಯಿಗಳಿಗೆ ಖನನ - ದಹನದಲ್ಲಿ ಮೂರು ದಿನ ಅಶೌಚ.

**ಹೆಣ್ಣು ಮಗು ಮೃತವಾದರೆ :** ತಂದೆ-ತಾಯಿಗಳಿಗೆ ದಹನ-ಖನನವಾಗಲಿ ಒಂದು ದಿನ. 3 ತಲೆ ಸಪಿಂಡರಿಗೆ ಸ್ನಾನಮಾತ್ರ.

2. ದಂತೋತ್ಪತ್ತಿಯಿಂದ ಚೌಲದವರೆಗೂ (3 ವರ್ಷದ ಒಳಗೆ) ಪುತ್ರ ಮೃತಿಯಲ್ಲಿ ಸಪಿಂಡರಿಗೆ ಒಂದು ದಿನ ತಂದೆ-ತಾಯಿಗಳಿಗೆ 3 ದಿನ, ಕನ್ಯಾ ಮೃತಿಯಲ್ಲಿ ಸಪಿಂಡರಿಗೆ ಸ್ನಾನಮಾತ್ರ, ತಂದೆ-ತಾಯಿಗಳಿಗೆ 3 ದಿನ.

**ಪ್ರಥಮ ವರ್ಷದಲ್ಲಿಯೇ ಚೌಲವಾಗಿದ್ದರೆ :** ಚೌಲವಾದ ಪುತ್ರನು ಮೃತನಾದಾಗ ಪಿತ್ರಾದಿ ಸಪಿಂಡರಿಗೆಲ್ಲಾ 3 ದಿನ. ದಹನವೂ ನಿಯತ.

**ಮೂರು ವರ್ಷಾನಂತರ ಉಪನಯನದ ಮೊದಲು :** ತಂದೆ-ತಾಯಿ ಸಪಿಂಡರಿಗೆ 3 ದಿನ ಶೌಚ. ಉಪನಯನವಾದ ಮೇಲೆ ಮೃತನಾದಾಗ 10 ದಿನ. ಉಪನೀತನಾಗಿದ್ದು ಮೃತನಾದವಾರ್ತೆ ಹತ್ತು ದಿನ ನಂತರ ತಿಳಿದಾಗ, ತಂದೆ-ತಾಯಿಗಳಿಗೆ 3 ದಿನ, ದಾಯಾದಿಗಳಿಗೆ 1 ದಿನ. ಉಪನಯನವಾಗದ ಮಗನ ವಾರ್ತೆಯಾದರೆ ತಂದೆ-ತಾಯಿ ಸಪಿಂಡರಿಗ್ಯಾರಿಗೂ ಅಶೌಚವಿಲ್ಲ.

**3. ಹೆಣ್ಣುಮಗಳು :** ಹತ್ತನೆಯ ದಿನಾನಂತರ 6 ತಿಂಗಳೊಳಗೆ, 6 ತಿಂಗಳಿಂದ 3 ವರ್ಷದವರೆಗೂ ತಂದೆ-ತಾಯಿ, 3 ತಲೆ ಸಪಿಂಡರಿಗೆ ಅಶೌಚವಿಲ್ಲ. 3 ವರ್ಷದಿಂದ ವಿವಾಹವಾಗುವವರೆಗೂ ತಂದೆ-ತಾಯಿಗಳಿಗೆ 3 ದಿನ. 3 ತಲೆ ಸಪಿಂಡರಿಗೆ 1 ದಿನ.

**ವಿವಾಹ ನಿಶ್ಚಯವಾಗಿದ್ದರೆ:** ತಂದೆ-ತಾಯಿ, ಮಲತಾಯಿಗೂ 3 ದಿನ. 3 ತಲೆ ಸಪಿಂಡರಿಗೆ, ನಿಶ್ಚಯವಾದ ವರನಿಗೆ ಅವನ ತಂದೆ-ತಾಯಿಗಳಿಗೆ 3 ದಿವಸ.

**4. ವಿವಾಹವಾದ ನಂತರ ಗಂಡನ ಮನೆಯಲ್ಲಿ ಮೃತಳಾದರೆ :** ಗಂಡನ ಮನೆಯವರಿಗೆ 10 ದಿನಗಳು, ಜನ್ಮ ನೀಡಿದ ತಂದೆ-ತಾಯಿಗಳಿಗೆ 3 ದಿನಗಳು. ಮೃತಳ ಅಣ್ಣ ತಮ್ಮೊಂದಿರಿಗೆ ಪಕ್ಷಿಣೀ ಅಶೌಚವು (1 1/2) ಚಿಕ್ಕಪ್ಪ ಮೊದಲಾದವರಿಗೆ 1 ದಿನ.

**ವಿವಾಹಾನಂತರ ತಂದೆ ಮನೆಯಲ್ಲಿ ಮೃತಳಾದರೆ :** ತಂದೆ-ತಾಯಿ, ಅವಳ ಅಣ್ಣ-ತಮ್ಮ, ಮಲ ಅಣ್ಣತಮ್ಮಂದಿರಿಗೂ 3 ದಿನ, ಚಿಕ್ಕಪ್ಪ

ಮೊದಲಾದವರಿಗೆ 1 ದಿನ. ಗ್ರಾಮಾಂತರದಲ್ಲಿ ಮೃತಳಾದರೆ ತಂದೆ-ತಾಯಿಗಳಿಗೆ 1 1/2 ದಿನ (ಪಕ್ಷಿಣಿ) **(ಪಿತೃಗೇಹಾದನ್ಯತ್ರ ಮೃತಾ ಯದಿ ಪಿತ್ರೋಃ ಪಕ್ಷಿಣೀ** )

**5. ಉಪನೀತ/ವಿವಾಹಿತ ಮೃತಿಯಲ್ಲಿ :** ತಂದೆ-ತಾಯಿಗಳು ಮೃತರಾದಾಗ ಉಪನಯನವಾಗದ, ವಿವಾಹವಾಗದ ಪುತ್ರ-ಪುತ್ರಿಯರಿಗೆ 10 ದಿನ ಶೌಚ. ವಿವಾಹಿತ ಕನ್ಯೆಗೆ 3 ದಿನ ಅಶೌಚ, ಹತ್ತು ದಿನಾನಂತರ ತಿಳಿದಾಗ ಪಕ್ಷಿಣೀ, ಪುತ್ರನಿಗಾದರೂ 10 ದಿನಾನಂತರ ವರ್ಷದೊಳಗೆ, 3 ವರ್ಷವಾಗಲಿ ಯಾವಾಗಲೇ ತಿಳಿದರೂ ತಿಳಿದ ದಿನದಿಂದ ಹತ್ತು ದಿನ ಶೌಚ. ದತ್ತು ಪುತ್ರನಿಗಾದರೆ ಸ್ವಗೋತ್ರನಾದರೆ 10 ದಿನ, ಅನ್ಯಗೋತ್ರನಾದರೆ 3 ದಿನಶೌಚ.

**ಸವತಿ ತಾಯಿ ಮೃತಳಾದಾಗ :** ಪುತ್ರನಿಗೆ (ತಂದೆ ಒಬ್ಬನೆ ಆದ್ದರಿಂದ) 10 ದಿನಾಶೌಚ. ಹತ್ತು ದಿನಾನಂತರ ತಿಳಿದರೆ 3 ದಿನ. ವರ್ಷದೊಳಗೆ ಪಕ್ಷಿಣೀ. ವಿವಾಹಿತ ಪುತ್ರಿಗೆ 3 ದಿನ, ಹತ್ತು ದಿನಾನಂತರ ತಿಳಿದರೆ ಪಕ್ಷಿಣೀ.

**6. ತಂದೆಯ ತಂದೆ (ಪಿತಾಮಹ) :** ಪಿತಾಮಹ ಮೃತನಾದಾಗ ಮೊಮ್ಮಗನಿಗೆ 10ದಿನ, ಮೊಮ್ಮಗಳಿಗೆ 3ದಿನ, ವಿವಾಹಿತಳಾಗಿದ್ದರೆ ಸ್ನಾನ ಮಾತ್ರ.

**ತಂದೆಯ ತಾಯಿ (ಪಿತಾಮಹಿ) :** ಒಂದೇ ಊರಿನಲ್ಲಾದರೆ ಮೊಮ್ಮಗ ಮೊಮ್ಮಗಳಿಗೆ ಪಕ್ಷಿಣೀ ಬೇರೆ ಗ್ರಾಮವಾದರೆ ಒಂದುದಿನ.

**7. ವಿವಾಹಿತ ಅಣ್ಣ-ತಮ್ಮಂದಿರು :** ಮೃತನ ಅಣ್ಣ ತಮ್ಮಂದಿರಿಗೆ 10 ದಿನ, ವಿವಾಹಿತ ಅಕ್ಕ-ತಂಗಿಯರಿಗೆ ಪಕ್ಷಿಣೀ, ಅಕ್ಕ-ತಂಗಿಯರ ಮನೆಯಲ್ಲಿ ಮೃತನಾಗಿದ್ದರೆ ಅಕ್ಕ-ತಂಗಿಯರಿಗೆ 3ದಿನ ಶೌಚ. ಗ್ರಾಮಾಂತರದಲ್ಲಾದರೆ 1 ದಿನ, ಉಪನೀತನಾಗದಿದ್ದರೆ ಸ್ನಾನಮಾತ್ರ.

**8. ವಿವಾಹಿತ ಅಕ್ಕ-ತಂಗಿಯರ ಮೃತ :** ಉಪನೀತ ಅಣ್ಣ-ತಮ್ಮಂದಿರಿಗೆ ಪಕ್ಷಿಣೀ, ತಮ್ಮ ಮನೆಯಲ್ಲಾದರೆ 3 ದಿನ, ಗ್ರಾಮಾಂತರದಲ್ಲಾದರೆ 1 ದಿನ.

**9. ಅವಿವಾಹಿತ ಅಕ್ಕ-ತಂಗಿಯರು ಮೃತಿ :** ಉಪನೀತ ಅಣ್ಣ-ತಮ್ಮಂದಿರಿಗೆ, 3 ತಲೆ ಸಪಿಂಡರಿಗೆ 1 ದಿನ, ಮೃತಳ ತಂದೆ-ತಾಯಿಗಳಿಗೆ 3 ದಿನ. ಅಕ್ಕ-ತಂಗಿಯರ ಮನೆಯಲ್ಲಿ ಮೃತಳಾದರೆ ಅಕ್ಕ-ತಂಗಿಯರಿಗೆ 3 ದಿನ, ಬೇರೆ ಮನೆಯಲ್ಲಿ 1 1/2 ದಿನ, ಗ್ರಾಮಾಂತರದಲ್ಲಿ 1 ದಿನ.

**10. ಮಾತಾಮಹ (ತಾಯಿಯ ತಂದೆ) :** ಮೊಮ್ಮಕ್ಕಳಿಗೆ 3 ದಿನ, ಮೊಮ್ಮಗಳಿಗೂ 3 ದಿನ. ಗ್ರಾಮಾಂತರದಲ್ಲಿ ಪಕ್ಷಿಣೀ, ಅನುಪನೀತ ಮೊಮ್ಮಗನ ಮೃತಿ. ಮಾತಾ ಮಹಾ- ಮಾತಾಮಹಿಗೆ ಪಕ್ಷಿಣೀ, ಉಪನೀತ ನೀತನಾದರೆ 3 ದಿನ.

**11. ತಾಯಿಯ ತಾಯಿ (ಅಜ್ಜಿ) :** ಮೊಮ್ಮಗ - ಮೊಮ್ಮಗಳು ಪಕ್ಷಿಣೀ, ಗ್ರಾಮಾಂತರ 1 ದಿನ.

**12. ಪಿತೃವ್ಯ -ಪಿತೃವ್ಯ ಪತ್ನೀ :** ಚಿಕ್ಕಪ್ಪ ಮೃತನಾದಾಗ ಗಂಡು ಮಕ್ಕಳಿಗೆ 10 ದಿನ. ಚಿಕ್ಕಮ್ಮ ಮೃತನಾದಾಗ ಗಂಡು ಮಕ್ಕಳಿಗೆ 10 ದಿನ. ವಿವಾಹಿತ ಹೆಣ್ಣು ಮಕ್ಕಳಿಗೆ ಸ್ನಾನಮಾತ್ರ.

**13. ಸೋದರ ಮಾವ (ಮಾತುಲ) :** ತಾಯಿಯ ಅಣ್ಣ ತಮ್ಮಂದಿರು ಮೃತರಾದಾಗ ಸೋದರಳಿನಿಗೆ - ಸೋದರ ಸೊಸೆಗೆ ಪಕ್ಷಿಣೀ, ಆದರೆ ವಿದ್ಯಾಭ್ಯಾಸಾದಿಗಳಿಗೆ ಧನಸಹಾಯಾದಿಗಳನ್ನು ಮಾಡಿ ಉಪಕೃತನಾಗಿದ್ದರೆ ಅವನ ಮೃತಿಯಲ್ಲಿ ಸೋದರಳಿಯ, ಸೊಸೆಗೆ 3ದಿನ, ಸ್ವಗೃಹದಲ್ಲಿಯೇ ಮೃತನಾದ 3ದಿನ. ಅನುಪನೀತ ಸೋದರಮಾವ ಮೃತನಾದಾಗ 1ದಿನ ಶೌಚ.

**ಸೋದರಮಾವನ ಪತ್ನಿ ಮೃತಳಾದಾಗ :** ಸೋದರಳಿಯ, ಸೋದರ ಸೊಸೆಗೂ ಪಕ್ಷಿಣೀ, ಸವತಿತಾಯಿಯ ಅಣ್ಣ ತಮ್ಮಂದಿರ ಪತ್ನಿಯರ ಮೃತಿಯಲ್ಲಿ

ಆಶೌಚವಿಲ್ಲ. ಉಪನೀತ ಸೋದರಳಿಯ ಮೃತನಾದಾಗ ಸೋದರಮಾವನಿಗೆ: ಸೋದರಮಾವನಿಗೆ ಹಾಗೂ ಅವನ ಪತ್ನಿಗೂ 3 ದಿನ, ಅನುಪನೀತ ಸೋದರ ಮೃತಿಯಲ್ಲಿ ಪಕ್ಷಿಣೀ, ಸೋದರಸೊಸೆ ವಿವಾಹಿತಳಾಗಿದ್ದಾಗ ಸೋದರಮಾವ, ಅವನಪತ್ನಿಗೆ ಸ್ನಾನಮಾತ್ರ. **(ಅನುಪನೀತೇ ಮೃತೇ ಮಾತುಲ ತತ್ಪತ್ನ್ಯೋಶ್ಚ ಪಕ್ಷಿಣೀ)**

**14. ಸೋದರತ್ತೆ: (ತಂದೆಯ ಅಕ್ಕ-ತಂಗಿಯರು) :** ಸೋದರತ್ತೆ ಮೃತಳಾದಾಗ ಸೋದರಳಿಯನಿಗೆ, ಸೋದರ ಸೊಸೆಗೆ ಪಕ್ಷಿಣೀ, ಸ್ವಗೃಹದಲ್ಲಿ 3 ದಿನ, **ಸೋದರತ್ತೆಯ ಗಂಡನ ಮೃತಿ :** ಸೋದರಳಿಯನಿಗೆ ಸೊಸೆಗೆ ಸ್ನಾನಮಾತ್ರ. (ಪಿತೃಷ್ವಸರಿ ಮೃತಾಯಾಂ ಮಾತ್ರಪತ್ಯಸ್ಯ ಪಕ್ಷಿಣೀ)

**15. ಮಾತೃಷ್ವಸಾ (ತಾಯಿಯ ಅಕ್ಕ-ತಂಗಿಯರು) :** ಅಕ್ಕತಂಗಿಯರ ಪುತ್ರಾದಿಗಳಿಗೆ ಪಕ್ಷಿಣೀ, ಸ್ವಗೃಹದಲ್ಲೆ ಮೃತಿಯಾದರೆ 3 ದಿನ. ಸೋದರತ್ತೆಗೆ ಅಣ್ಣ ತಮ್ಮಂದಿರ ಪುತ್ರ ಪುತ್ರಿಯರ ಮೃತಿಯಲ್ಲಿ : ಸೋದರತ್ತೆಗೆ ಸ್ನಾನಮಾತ್ರ.

**16. ಅಣ್ಣ-ತಮ್ಮಂದಿರು ಮೃತರಾದಾಗ:** ಅಣ್ಣ-ತಮ್ಮಂದಿರಿಗೆ 10 ದಿನ ಶೌಚ. ತಂದೆ-ತಾಯಿಗಳಿಗೂ, ಸಪಿಂಡರಿಗೂ 10 ದಿನ ಶೌಚ. ಅಕ್ಕ-ತಂಗಿಯರಿಗೆ ಸ್ವಗೃಹದಲ್ಲಿ 3 ದಿನ, ಅನ್ಯಗೃಹದಲ್ಲಿ ಪಕ್ಷಿಣೀ, ಗ್ರಾಮಾಂತರದಲ್ಲಾದರೆ 1 ದಿನ.

**17. ಅಕ್ಕ-ತಂಗಿಯರು ಮೃತಿಯಲ್ಲಿ ಅಣ್ಣತಮ್ಮಂದಿರಿಗೆ :** ಸ್ವಗೃಹದಲ್ಲಾದರೆ 3 ದಿನ, ಗೃಹಾಂತರದಲ್ಲಿ ಪಕ್ಷಿಣೀ, ಗ್ರಾಮಾಂತರದಲ್ಲಿ 1 ದಿನ. ಅಕ್ಕತಂಗಿಯರಿಗೂ ಸ್ವಗೃಹ 3 ದಿನ, ಗೃಹಾಂತರ ಪಕ್ಷಿಣೀ, ಗ್ರಾಮಾಂತರ 1 ದಿನ.

**18. ಅತ್ತೆ ಮಾವಂದಿರು (ಶ್ವಶುರ, ಶ್ವಶ್ರೂ) :** ಹೆಣ್ಣು ಕೊಟ್ಟ ಅತ್ತೆ ಮಾವಂದಿರ ಮೃತಿಯಲ್ಲಿ ಒಂದೇ ಊರಾದಿಗದ್ದಲ್ಲಿ 3 ದಿನ. ಬೇರೆ ಊರಾಗಿದ್ದರೆ ಪಕ್ಷಿಣೀ, ಉಪಕಾರಕರಾಗಿದ್ದರೆ ಅಳಿಯನಿಗೆ 3 ದಿನ. ಹೆಂಡತಿಯು ಮೃತಳಾಗಿದ್ದು ಅತ್ತೆ ಮಾವಂದಿರು ಮೃತರಾದಾಗ ಹಾಗೂ ಉಪಕಾರ ಮಾಡಿದವರಾಗಿದ್ದರೂ, ಅಳಿಯನಿಗೆ ಪಕ್ಷಿಣೀ ಅಶೌಚ. ಹೆಂಡತಿಯ ಸಂತಾನವಿದ್ದರೆ 3 ದಿನ.

**19. ಅಳಿಯ ಮೃತನಾದಾಗ :** ಮಾವನ ಮನೆಯಲ್ಲಾದರೆ 3 ದಿನಾಶೌಚ. ಬೇರೆಡೆಯಾದರೆ 1 ದಿನ.

**20. ಭಾವಮೈದುನರ ಮೃತಿಯಲ್ಲಿ :** ಪತ್ನಿಯ ಅಣ್ಣ-ತಮ್ಮಂದಿರು ಮೃತರಾದಾಗ, ಉಪನೀತನಾಗಿದ್ದರೆ 1 ದಿನ, ಅನುಪನೀತ, ಗ್ರಾಮಾಂತರದಲ್ಲಿ, ಹೆಂಡತಿಯು ಮೃತಳಾಗಿದ್ದರೆ ಸ್ನಾನಮಾತ್ರ. ಭಾವಮೈದುನರ ಪುತ್ರ ಮೃತನಾದರೆ ಸ್ನಾನಮಾತ್ರ.

**21. ಹೆಂಡತಿಯ ಅಕ್ಕತಂಗಿಯರು :** ಹೆಂಡತಿಯ ಅಕ್ಕತಂಗಿಯರು ಮೃತರಾದಾಗ ಭಾವನಿಗೆ ಸ್ನಾನಮಾತ್ರ. ಅಕ್ಕತಂಗಿಯರ ಗಂಡ ಮೃತನಾದಾಗ ಭಾವಮೈದುನರಿಗೆ, ಹಾಗೂ ನಾದಿನಿಯರಿಗೆ ಸ್ನಾನಮಾತ್ರ.

**22. ಅಕ್ಕತಂಗಿಯರ ಪುತ್ರ ಹಾಗೂ ಮಗಳು:** ಉಪನೀತನಾದ ಅಕ್ಕತಂಗಯರ ಪುತ್ರ ಮೃತನಾದಾಗ ಸೋದರಮಾವ ಅಬಚಿಗೆ, 3 ದಿನಾಶೌಚ. ಅನುಪನೀತನಾಗಿದ್ದರೆ ಪಕ್ಷಿಣೀ, ಹೆಣ್ಣು ಮಗಳಾದರೆ ಸ್ನಾನಮಾತ್ರ.

**23. ಮಗಳಮಗ ಮೃತಿಯಲ್ಲಿ :** ಉಪನೀತನಾಗಿದ್ದರೆ ಮಾತಾಮಹ ಮಾತಾಮಹಿಗೆ 3 ದಿನ. ಅನುಪೀತನಾದರೆ ಪಕ್ಷಿಣೀ, ಮಗಳು ಮೃತಳಾದಾಗ ಸ್ನಾನಮಾತ್ರ.

**24. ಆತ್ಮಬಂಧುತ್ರಯರ ಮೃತಿಯಲ್ಲಿ :** ಸೋದರತ್ತೆ, ಸೋದರಮಾವ, ಅಬಚಿ, ಇವರ ಮಕ್ಕಳು ಮೃತರಾದಾಗ ಸ್ವಗೃಹದಲ್ಲಾದರೆ 3 ದಿನ. ಬೇರೆ ಗೃಹದಲ್ಲಿ ಪಕ್ಷಿಣೀ, ಅನುಪನೀತನಾದರೆ 1 ದಿನ. ಹೆಣ್ಣುಮಗಳು ವಿವಾಹವಾಗಿದ್ದರೂ 1 ದಿನ. ವಿವಾಹವಾಗದಿದ್ದರೆ ಸ್ನಾನಮಾತ್ರ.

**ಪಕ್ಷಿಣೀ ಆಶೌಚ ಸಂಗ್ರಹ :**

1) ತನ್ನ ಮಗನ ಮಗಳು ಹಾಗೂ ಮಗಳ ಮಗಳು ಮೃತರಾದಾಗ ಪಕ್ಷಿಣೀ.

2) ಮದುವೆಯಾದ ಮಗಳಿಗೆ ತಂದೆಯ ತಂದೆ, ತಂದೆಯ ತಾಯಿ ಪಕ್ಷಿಣೀ.

3) ಸೋದರತ್ತೆಯ ಮಗನ ಹೆಂಡತಿ ಪಕ್ಷಿಣೀ.

4) ತಾಯಿಯ ತಂದೆ ತಾಯಿ, ಅಕ್ಕತಂಗಿಯರು, ಅವರ ಮಗ, ಮಗಳು ಪಕ್ಷಿಣೀ.

5) ಮದುವೆಯಾದ ಮಗಳಿಗೆ ತಂದೆಯ ಅಣ್ಣತಮ್ಮಂದಿರ (ಚಿಕ್ಕಪ್ಪ ದೊಡ್ಡಪ್ಪ) ಹೆಂಡತಿ ಹಾಗೂ ಮಗನ ಹೆಂಡತಿ ಪಕ್ಷಿಣೀ.

6) ಅಕ್ಕತಂಗಿಯರ ಮಗನ ಹೆಂಡತಿ ಪಕ್ಷಿಣೀ.

7) ಮದುವೆಯಾದ ಮಗಳಿಗೆ ಅಣ್ಣತಮ್ಮಂದಿರ, ಹೆಂಡತಿ, ಹಾಗೂ ಮಗನ ಹೆಂಡತಿ ಪಕ್ಷಿಣೀ.

8) ಮಗಳ ಮಗನ ಹೆಂಡತಿ ಪಕ್ಷಿಣೀ.

9) ಸೋದರಮಾವ, ಅವನ ಪತ್ನಿ, ಮಗ, ಮಗಳು ಪಕ್ಷಿಣೀ.

10) ತಾಯಿಯ ಅಕ್ಕ (ದೊಡ್ಡಮ್ಮ- ಚಿಕ್ಕಮ್ಮ) ಅವರ ಮಗಳು, ಮಗ, ಮಗನ ಹೆಂಡತಿ ಪಕ್ಷಿಣೀ.

11) ತಂದೆಯ ಅಕ್ಕ ತಂಗಿಯರು (ಸೋದರತ್ತೆ) ಅವರ ಮಗಳು, ಮಗ, ಮಗನ ಹೆಂಡತಿ ಪಕ್ಷಿಣೀ.

12) ಅಕ್ಕತಂಗಿಯರು, ಅವರ ಮಗಳ ಮಗ ಪಕ್ಷಿಣೀ.

13) ತಂದೆಯ ಅಣ್ಣತಮ್ಮಂದಿರ ಮಗಳು, ಅವರ ಮಗಳ ಮಗಳು ಪಕ್ಷಿಣೀ.

14) ಅಕ್ಕತಂಗಿಯರು ಅವರ ಮಗಳು, ಮಗ (ಪರೋಕ್ಷದಲ್ಲಿ) ಪಕ್ಷಿಣೀ.

15) ತಂದೆಯ ಚಿಕ್ಕಪ್ಪ ದೊಡ್ಡಪ್ಪಂದಿರ ಮಗಳು, ಮಗಳ ಮಗಳು ಪಕ್ಷಿಣೀ.

16) ತಂದೆಯ ಅಕ್ಕತಂಗಿಯರ ಮಗಳು, ಮಗಳ ಮಗಳು ಪಕ್ಷಿಣೀ.

17) ಸೋದರಮಾವನ ಮಗಳು, ಮಗ, ಮಗನ ಹೆಂಡತಿ ಪಕ್ಷಿಣೀ.

**25. ಏಕಾದಶೀ ಮರಣವಾದಾಗ :** ಕೇವಲ ಶವದಹನ ಮಾತ್ರ, ಅಗ್ನಿಯಲ್ಲಿ ನಾರಾಯಣನಿಗೆ ಮಾತ್ರ ಆಹುತಿ, ಪ್ರೇತನಿಗೆ ಪಿಂಡದಾನ, ತಿಲಾಂಜಲಿ ಅಂದು ಮಾಡದೇ ದ್ವಾದಶಿಯಂದು ಮಾಡಬೇಕು.

**26. ಸಂಪಾತಾಶೌಚ:** ಹತ್ತುದಿನದ ಅಶೌಚ ನಡೆಯುತ್ತಿರುವಾಗಲೇ ಮತ್ತೊಂದು ದಶಾಹಾಶೌಚ ಬಂದರೆ ಮೊದಲಿನ ಹತ್ತು ದಿವಸ ಮುಗಿದಾಗ ಹೊಸದಾಗಿ ಬಂದದ್ದೂ ಮುಗಿಯುತ್ತದೆ. ಆದರೆ ತಂದೆ ಮೃತನಾಗಿರುವಾಗ 10 ದಿವಸದ ಒಳಗೆ ತಾಯಿಯು ಮೃತಳಾದರೆ ಪಿತೃವಿನ ದಶಾಹ ಕಳೆದ ಮೇಲೆ ಪಕ್ಷಿಣೀ ಆಚರಿಸಬೇಕು. ಹತ್ತನೆಯ ದಿನ ರಾತ್ರಿ ತಾಯಿ ಮೃತಳಾದರೆ ಎರಡುದಿನ ಅಧಿಕಾಶೌಚ ನಾಲ್ಕನೆಯ ಯಾಮವಾದರೆ 3 ದಿನ ಅಧಿಕಾಶೌಚ.

*~*~*~*~*~*~*

## ಯತಿಗಳ ಆರಾಧನೆಗಳು

| ತಾರೀಖು | ಮಾಸ | ತಿಥಿ | ವಾರ | ಯತಿಗಳು | ಊರು |
|---|---|---|---|---|---|
| 06.04.2025 | ಚೈತ್ರ ಶುದ್ಧ | ನವಮೀ | ಭಾನುವಾರ | ಶ್ರೀ ಪ್ರಾಜ್ಞನಿಧಿತೀರ್ಥರು | ಮುಳಬಾಗಿಲು |
| 12.04.2025 | ಚೈತ್ರ ಶುದ್ಧ | ಪೌರ್ಣಿಮೀ | ಶನಿವಾರ | ಶ್ರೀ ಸತ್ಯವ್ರತತೀರ್ಥರು | ಶ್ರೀರಂಗ |
| 28.04.2025 | ವೈಶಾಖ ಶುದ್ಧ | ಪಾಡ್ಯ | ಸೋಮವಾರ | ಶ್ರೀ ವಿದ್ಯಾನಿಧಿತೀರ್ಥರು | ಪಳ್ಳಿಪಾಳ್ಯಂ |
| 12.05.2025 | ವೈಶಾಖ ಶುದ್ಧ | ಪೌರ್ಣಿಮೀ | ಸೋಮವಾರ | ಶ್ರೀ ಲಕ್ಷ್ಮೀನಾಥತೀರ್ಥರು | ಅಬ್ಬೂರು |
| 22.05.2025 | ವೈಶಾಖ ಬಹುಳ | ದಶಮೀ | ಗುರುವಾರ | ಶ್ರೀ ಶ್ರೀಪತಿತೀರ್ಥರು | ಮಾರಂಡಹಳ್ಳಿ |
| 24.05.2025 | ವೈಶಾಖ ಬಹುಳ | ದ್ವಾದಶೀ | ಶನಿವಾರ | ಶ್ರೀ ಬ್ರಹ್ಮಣ್ಯತೀರ್ಥರು | ಅಬ್ಬೂರು |
| 26.05.2025 | ವೈಶಾಖ ಬಹುಳ | ಚತುರ್ದಶೀ | ಸೋಮವಾರ | ಶ್ರೀ ಸುಗುಣನಿಧಿತೀರ್ಥರು | ಭವಾನಿ |
| 09.06.2025 | ಜ್ಯೇಷ್ಠ ಶುದ್ಧ | ತ್ರಯೋದಶೀ | ಸೋಮವಾರ | ಶ್ರೀ ಶ್ರೀಪಾದರಾಜರ ಪೂರ್ವಾರಾಧನೆ | ಮುಳಬಾಗಿಲು |
| 10.06.2025 | ಜ್ಯೇಷ್ಠ ಶುದ್ಧ | ಚತುರ್ದಶೀ | ಮಂಗಳವಾರ | ಶ್ರೀ ಶ್ರೀಪಾದರಾಜರ ಆರಾಧನೆ | ಮುಳಬಾಗಿಲು |
| 10.06.2025 | ಜ್ಯೇಷ್ಠ ಶುದ್ಧ | ಚತುರ್ದಶೀ | ಮಂಗಳವಾರ | ಶ್ರೀ ಲಕ್ಷ್ಮೀಕಾಂತತೀರ್ಥರು | ವೆಂಗರೆ |
| 15.06.2025 | ಜ್ಯೇಷ್ಠ ಬಹುಳ | ಚೌತಿ | ಭಾನುವಾರ | ಶ್ರೀ ಸ್ವರ್ಣವರ್ಣತೀರ್ಥರು | ಶ್ರೀರಂಗ |
| 23.06.2025 | ಜ್ಯೇಷ್ಠ ಬಹುಳ | ತ್ರಯೋದಶೀ | ಸೋಮವಾರ | ಶ್ರೀ ವಿಜಯೀಂದ್ರತೀರ್ಥರು | ಕುಂಭಕೋಣಂ |
| 30.06.2025 | ಆಷಾಢ ಶುದ್ಧ | ಪಂಚಮೀ | ಸೋಮವಾರ | ಶ್ರೀ ರಘುನಾಥತೀರ್ಥರು | ಎರಗಂಬಳ್ಳಿ |
| 02.07.2025 | ಆಷಾಢ ಶುದ್ಧ | ಸಪ್ತಮೀ | ಬುಧವಾರ | ಶ್ರೀ ಸುಮತಿನಿಧಿತೀರ್ಥರು | ಭವಾನಿ |
| 07.07.2025 | ಆಷಾಢ ಶುದ್ಧ | ದ್ವಾದಶೀ | ಸೋಮವಾರ | ಶ್ರೀ ಲಕ್ಷ್ಮೀಪತಿತೀರ್ಥರು | ಪಳ್ಳಿಪಾಳ್ಯಂ |
| 15.07.2025 | ಆಷಾಢ ಬಹುಳ | ಪಂಚಮೀ | ಮಂಗಳವಾರ | ಶ್ರೀ ಮಟ್ಟೀಕಾಕೃತ್ಪಾದರು | ಮುಳಬಾಗಿಲು |
| 16.07.2025 | ಆಷಾಢ ಬಹುಳ | ಷಷ್ಠೀ | ಬುಧವಾರ | ಶ್ರೀ ಸತ್ಯನಿಧಿತೀರ್ಥರು | ಮುಳಬಾಗಿಲು |
| 26.07.2025 | ಶ್ರಾವಣ ಶುದ್ಧ | ಬಿದಿಗೆ | ಶನಿವಾರ | ಶ್ರೀ ತೇಜೋನಿಧಿತೀರ್ಥರು | ಪಳ್ಳಿಪಾಳ್ಯಂ |

| | | | | | |
|---|---|---|---|---|---|
| 09.08.2025 | ಶ್ರಾವಣ ಶುದ್ಧ | ಪೌರ್ಣಮೀ | ಶನಿವಾರ | ಶ್ರೀ ಗೋಪಾಲಸ್ವಾಮಿತೀರ್ಥರು | ಮುಳಬಾಗಿಲು |
| 11.08.2025 | ಶ್ರಾವಣ ಬಹುಳ | ಬಿದಿಗೆ | ಸೋಮವಾರ | ಶ್ರೀ ರಾಘವೇಂದ್ರಸ್ವಾಮಿಗಳು | ಮಂತ್ರಾಲಯ |
| 28.08.2025 | ಭಾದ್ರಪದ ಶುದ್ಧ | ಪಂಚಮೀ | ಗುರುವಾರ | ಶ್ರೀ ತಪೋನಿಧಿತೀರ್ಥರು | ಪಳ್ಳಿಪಾಳ್ಯಂ |
| 19.09.2025 | ಭಾದ್ರಪದ ಬಹುಳ | ತ್ರಯೋದಶೀ | ಶುಕ್ರವಾರ | ಶ್ರೀ ವಿಜ್ಞಾನನಿಧಿತೀರ್ಥರು | ಮುಳಬಾಗಿಲು |
| 21.09.2025 | ಭಾದ್ರಪದ ಬಹುಳ | ಅಮಾವಾಸ್ಯೆ | ಭಾನುವಾರ | ಶ್ರೀ ಮಾಧವತೀರ್ಥರು | ಮಣೂರು |
| 29.09.2025 | ಆಶ್ವಯುಜ ಶುದ್ಧ | ಸಪ್ತಮೀ | ಸೋಮವಾರ | ಶ್ರೀ ವೈರಾಗ್ಯನಿಧಿತೀರ್ಥರು | ಮುಳಬಾಗಿಲು |
| 06.10.2025 | ಆಶ್ವಯುಜ ಶುದ್ಧ | ಚತುರ್ದಶೀ | ಸೋಮವಾರ | ಶ್ರೀ ಶ್ರೀಧರತೀರ್ಥರು | ಮುಳಬಾಗಿಲು |
| 10.10.2025 | ಆಶ್ವಯುಜ ಬಹುಳ | ಚೌತಿ | ಶುಕ್ರವಾರ | ಶ್ರೀ ಸುಬೋಧನಿಧಿತೀರ್ಥರು | ಮುಳಬಾಗಿಲು |
| 13.10.2025 | ಆಶ್ವಯುಜ ಬಹುಳ | ಸಪ್ತಮೀ | ಸೋಮವಾರ | ಶ್ರೀ ಶ್ರೀನಿಧಿತೀರ್ಥರು | ಪಳ್ಳಿಪಾಳ್ಯಂ |
| 14.10.2025 | ಆಶ್ವಯುಜ ಬಹುಳ | ಅಷ್ಟಮೀ | ಮಂಗಳವಾರ | ಶ್ರೀ ಆನಂದನಿಧಿತೀರ್ಥರು | ಮೈಸೂರು |
| 05.11.2025 | ಕಾರ್ತಿಕ ಶುದ್ಧ | ಪೌರ್ಣಿಮೀ | ಬುಧವಾರ | ಶ್ರೀ ಹಯಗ್ರೀವತೀರ್ಥರು | ಮುಳಬಾಗಿಲು |
| 19.11.2025 | ಕಾರ್ತಿಕ ಬಹುಳ | ಚತುರ್ದಶೀ | ಬುಧವಾರ | ಶ್ರೀ ಪದ್ಮನಾಭತೀರ್ಥರು | ಮುಳಬಾಗಿಲು |
| 20.11.2025 | ಕಾರ್ತಿಕ ಬಹುಳ | ಅಮಾವಾಸ್ಯೆ | ಗುರುವಾರ | ಶ್ರೀ ಮೇಧಾನಿಧಿತೀರ್ಥರು | ಪಳ್ಳಿಪಾಳ್ಯಂ |
| 30.11.2025 | ಮಾರ್ಗಶಿರ ಶುದ್ಧ | ದಶಮೀ | ಭಾನುವಾರ | ಶ್ರೀ ವಿಭುದೇಂದ್ರತೀರ್ಥರು | ತಿರುನೆಲ್ವೇಲಿ |
| 03.12.2025 | ಮಾರ್ಗಶಿರ ಶುದ್ಧ | ತ್ರಯೋದಶೀ | ಬುಧವಾರ | ಶ್ರೀ ಲಕ್ಷ್ಮೀವಲ್ಲಭತೀರ್ಥರು | ಓಡಪಳ್ಳಿ |
| 04.12.2025 | ಮಾರ್ಗಶಿರ ಶುದ್ಧ | ಪೌರ್ಣಿಮೀ | ಗುರುವಾರ | ಶ್ರೀ ಲಕ್ಷ್ಮೀಧರತೀರ್ಥರು | ತುಂಗಭದ್ರದಂಡೆ |
| 09.12.2025 | ಮಾರ್ಗಶಿರ ಬಹುಳ | ಪಂಚಮೀ | ಮಂಗಳವಾರ | ಶ್ರೀ ಮದಕ್ಷೋಭ್ಯತೀರ್ಥರು | ಮುಳಬಾಗಿಲು |
| 17.12.2025 | ಮಾರ್ಗಶಿರ ಬಹುಳ | ತ್ರಯೋದಶೀ | ಬುಧವಾರ | ಶ್ರೀ ದಯಾನಿಧಿತೀರ್ಥರು | ಮುಳಬಾಗಿಲು |
| 29.12.2025 | ಪುಷ್ಯ ಶುದ್ಧ | ದಶಮೀ | ಸೋಮವಾರ | ಶ್ರೀ ಆದಿರಾಜತೀರ್ಥರು | ಶ್ರೀರಂಗ |
| 29.12.2025 | ಪುಷ್ಯ ಶುದ್ಧ | ದಶಮೀ | ಸೋಮವಾರ | ಶ್ರೀ ಗುಣಸಾರನಿಧಿತೀರ್ಥರು | ಮುಳಬಾಗಿಲು |

| | | | | | |
|---|---|---|---|---|---|
| 29.12.2025 | ಪುಷ್ಯ ಶುದ್ಧ | ದಶಮೀ | ಸೋಮವಾರ | ಶ್ರೀ ಯಶೋನಿಧಿತೀರ್ಥರು | ಪಳ್ಳಿಪಾಳ್ಯಂ |
| 31.12.2025 | ಪುಷ್ಯ ಶುದ್ಧ | ದ್ವಾದಶೀ | ಬುಧವಾರ | ಶ್ರೀ ರಘೋತ್ತಮತೀರ್ಥರು | ತಿರುಕೋಯಿಲೂರು |
| 03.01.2026 | ಪುಷ್ಯ ಶುದ್ಧ | ಪೌರ್ಣಮೀ | ಶನಿವಾರ | ಶ್ರೀ ಲಕ್ಷ್ಮೀಮನೋಹರತೀರ್ಥರು | ಪಳ್ಳಿಪಾಳ್ಯಂ |
| 10.01.2026 | ಪುಷ್ಯ ಬಹುಳ | ಸಪ್ತಮೀ | ಶನಿವಾರ | ಶ್ರೀ ನರಹರಿತೀರ್ಥರು | ಹಂಪಿ |
| 13.01.2026 | ಪುಷ್ಯ ಬಹುಳ | ದಶಮೀ | ಮಂಗಳವಾರ | ಶ್ರೀ ಕೇಶವನಿಧಿತೀರ್ಥರ ಪೂರ್ವಾರಾಧನೆ | ಮುಳಬಾಗಿಲು |
| 15.01.2026 | ಪುಷ್ಯ ಬಹುಳ | ದ್ವಾದಶೀ | ಗುರುವಾರ | ಶ್ರೀ ಕೇಶವನಿಧಿತೀರ್ಥರ ಮಹಾಸಮಾರಾಧನೆ | ಮುಳಬಾಗಿಲು |
| 16.01.2026 | ಪುಷ್ಯ ಬಹುಳ | ತ್ರಯೋದಶೀ | ಶುಕ್ರವಾರ | ಶ್ರೀ ಕೇಶವನಿಧಿತೀರ್ಥರ ಉತ್ತರಾರಾಧನೆ | ಮುಳಬಾಗಿಲು |
| 20.01.2026 | ಮಾಘ ಶುದ್ಧ | ಬಿದಿಗೆ | ಮಂಗಳವಾರ | ಶ್ರೀ ಸಂಕರ್ಷಣತೀರ್ಥರು | ಶ್ರೀನಗರ |
| 23.01.2026 | ಮಾಘ ಶುದ್ಧ | ಪಂಚಮೀ | ಶುಕ್ರವಾರ | ಶ್ರೀ ವಲ್ಲಭತೀರ್ಥರು | ಓಡಪಳ್ಳಿ |
| 01.02.2026 | ಮಾಘ ಶುದ್ಧ | ಪೌರ್ಣಮೀ | ಭಾನುವಾರ | ಶ್ರೀ ಜ್ಞಾನನಿಧಿತೀರ್ಥರು | ಶ್ರೀರಂಗಪಟ್ಟಣ |
| 08.02.2026 | ಮಾಘ ಬಹುಳ | ಸಪ್ತಮೀ | ಭಾನುವಾರ | ಶ್ರೀ ಗುಣನಿಧಿತೀರ್ಥರು | ತಾಯೂರು |
| 17.02.2026 | ಮಾಘ ಬಹುಳ | ಅಮಾವಾಸ್ಯೆ | ಮಂಗಳವಾರ | ಶ್ರೀ ಶ್ರೀಕಾಂತತೀರ್ಥರು | ನಂಗಲಿ |
| 03.03.2026 | ಫಾಲ್ಗುಣ ಶುದ್ಧ | ಪೌರ್ಣಿಮೀ | ಮಂಗಳವಾರ | ಶ್ರೀ ಸುಜ್ಞಾನನಿಧಿತೀರ್ಥರು | ಮುಳಬಾಗಿಲು |
| 03.03.2026 | ಫಾಲ್ಗುಣ ಶುದ್ಧ | ಪೌರ್ಣಿಮೀ | ಮಂಗಳವಾರ | ಶ್ರೀ ಪರಶುರಾಮತೀರ್ಥರು | ಶ್ರೀರಂಗ |
| 05.03.2026 | ಫಾಲ್ಗುಣ ಬಹುಳ | ಬಿದಿಗೆ | ಗುರುವಾರ | ಶ್ರೀ ವಿಜಯನಿಧಿತೀರ್ಥರು | ಮುಳಬಾಗಿಲು |
| 06.03.2026 | ಫಾಲ್ಗುಣ ಬಹುಳ | ತದಿಗೆ | ಶುಕ್ರವಾರ | ಶ್ರೀ ವಾದಿರಾಜರು | ಸೋದೆ |
| 07.03.2026 | ಫಾಲ್ಗುಣ ಬಹುಳ | ಚೌತಿ | ಶನಿವಾರ | ಶ್ರೀ ವ್ಯಾಸರಾಜರು | ನವವೃಂದಾವನ |
| 10.03.2026 | ಫಾಲ್ಗುಣ ಬಹುಳ | ಸಪ್ತಮೀ | ಮಂಗಳವಾರ | ಶ್ರೀ ಉದ್ದಂಡ ರಾಮಚಂದ್ರತೀರ್ಥರು | ಪೆನುಗೊಂಡ |
| 11.03.2026 | ಫಾಲ್ಗುಣ ಬಹುಳ | ಅಷ್ಟಮೀ | ಬುಧವಾರ | ಶ್ರೀ ಸುಧಿನಿಧಿತೀರ್ಥರು | ಪಳ್ಳಿಪಾಳ್ಯಂ |

| ನಕ್ಷತ್ರ ಪ್ರಕರಣಂ | | | | | | | | | | | | | | |
|---|---|---|---|---|---|---|---|---|---|---|---|---|---|---|
| ನಾಮಕ್ಷರ | ನಕ್ಷತ್ರ | ಗಣ | ಯೋನಿ | ವೈರಿ | ರಜ್ಜು | ವೇಧ | ನಾಡೀ | ಪಕ್ಷಿ | ವೃಕ್ಷ | ನಾಳ | ಲಿಂಗ | ಗುಣ | ಮುಖ | ದೃಷ್ಟಿ |
| ಚೂ,ಚೇ,ಚೋ,ಲಾ | ಅಶ್ವಿನಿ | ದೇವ | ಕುದುರೆ | ಎಮ್ಮೆ | ಪಾದ | ಜ್ಯೇಷ್ಠ | ಆಧಿ | ಭೇರುಂಡ | ಹುಂಗೇ | ಹೊರ | ಪು | ಕ್ಷಿಪ್ರ | ತಿರ್ಯಕ್ | ಮಂದ |
| ಲೀ,ಲೂ,ಲೇ,ಲೋ | ಭರಣಿ | ಮನುಷ್ಯ | ಆನೇ | ಸಿಂಹ | ಜಾನು | ಅನುರಾಧ | ಮಧ್ಯ | ಭೇರುಂಡ | ನೆಲ್ಲಿ | ಹೊರ | ಸ್ತ್ರೀ | ಉಗ್ರ | ಅಧಃ | ಮಧ್ಯ |
| ಆ,ಈ,ಊ,ಏ | ಕೃತ್ತಿಕಾ | ರಾಕ್ಷಸ | ಆಡು | ಕಪಿ | ನಾಭಿ | ವಿಶಾಖಾ | ಅಂತ್ಯ | ಭೇರುಂಡ | ಅತ್ತಿ | ಒಳ | ಸ್ತ್ರೀ | ತಿಕ್ಷ್ಣ | ಅಧಃ | ಸುದೃಶ |
| ಓ,ವಾ,ವೀ,ವೂ | ರೋಹಿಣಿ | ಮನುಷ್ಯ | ಹಾವು | ಮುಂಗ್ಸಿ | ಕಂಠ | ಸ್ವಾತಿ | ಅಂತ್ಯ | ಭೇರುಂಡ | ನೇರಳೆ | ಒಳ | ಪು | ಸ್ಥಿರ | ಊರ್ಧ್ವ | ಅಂಧ |
| ವೇ,ವೊ,ಕಾ,ಕೀ | ಮೃಗಶಿರ | ದೇವ | ಹಾವು | ಮುಂಗ್ಸಿ | ಶಿರಃ | ಚಿತ್ರಾ | ಮಧ್ಯ | ಭೇರುಂಡ | ಖದಿರ | ಒಳ | ನ | ಮೃದು | ತಿರ್ಯಕ್ | ಮಂದ |
| ಕೂ,ಘ,ಜ,ಛ | ಆರ್ದ್ರಾ | ಮನುಷ್ಯ | ನಾಯಿ | ಜಿಂಕೆ | ಕಂಠ | ಶ್ರವಣ | ಆಧಿ | ಪಿಂಗಲ | ಮರುವ | ಒಳ | ಸ್ತ್ರೀ | ತೀಕ್ಷ್ಣ | ಊರ್ಧ್ವ | ಮಧ್ಯ |
| ಕೇ,ಕೋ,ಹಾ,ಹೀ | ಪುನರ್ವಸು | ದೇವ | ಬೆಕ್ಕು | ಇಲಿ | ನಾಭಿ | ಉಷಾ | ಆಧಿ | ಪಿಂಗಲ | ಬಿದಿರು | ಹೋರ | ಪು | ಚರ | ತಿರ್ಯಕ್ | ಸುದೃಶ |
| ಹೂ,ಹೇ,ಹೋ,ಡಾ | ಪುಷ್ಯ | ದೇವ | ಆಡು | ಕಪಿ | ಜಾನು | ಪೂ.ಷಾ. | ಮಧ್ಯ | ಪಿಂಗಲ | ಅಶ್ವತ್ಥ | ಹೋರ | ಪು | ಕ್ಷಿಪ್ರ | ಊರ್ಧ್ವ | ಅಂಧ |
| ಡೀ,ಡೂ,ಡೇ,ಡೋ | ಆಶ್ಲೇಷಾ | ರಾಕ್ಷಸ | ಬೆಕ್ಕು | ಇಲಿ | ಪಾದ | ಮೂಲಾ | ಅಂತ್ಯ | ಪಿಂಗಲ | ನಾಗಚಂ | ಹೋರ | ಸ್ತ್ರೀ | ತೀಕ್ಷ್ಣ | ಆಧಃ | ಮಂದ |
| ಮಾ,ಮೀ,ಮೂ,ಮೆ | ಮಘಾ | ರಾಕ್ಷಸ | ಇಲಿ | ಬೇಕ್ಕು | ಪಾದ | ರೇವತಿ | ಅಂತ್ಯ | ಪಿಂಗಲ | ಚಂಪಕ | ಒಳ | ಸ್ತ್ರೀ | ಉಗ್ರ | ಅಧಃ | ಮಧ್ಯ |
| ಮೋ,ಟಾ,ಟೀ,ಟೂ | ಪುಬ್ಬಾ | ಮನುಷ್ಯ | ಇಲಿ | ಬೇಕ್ಕು | ಜಾನು | ಉಭಾ | ಮಧ್ಯ | ಪಿಂಗಲ | ಗೋಳಿ | ಒಳ | ಸ್ತ್ರೀ | ಉಗ್ರ | ಅಧಃ | ಸುದೃಶ |
| ಟೇ,ಟೋ,ಪಾ,ಪೀ | ಉತ್ತರಾ | ಮನುಷ್ಯ | ಎತ್ತು | ಹುಲಿ | ಪಾದ | ಪೂ.ಭಾ. | ಆಧಿ | ಕಾಕ | ಪಾಲಾಶ | ಒಳ | ಸ್ತ್ರೀ | ಸ್ಥಿರ | ಊರ್ಧ್ವ | ಅಂಧ |
| ಪೂ,ಷ,ಣಾ,ಡಾ | ಹಸ್ತ | ದೇವ | ಎಮ್ಮೆ | ಕುದುರೆ | ಪಾದ | ಶತಭಿಷಾ | ಆಧಿ | ಕಾಕ | ಹೆರಳೆ | ಒಳ | ಪು | ಕ್ಷಿಪ್ರ | ತಿರ್ಯಕ್ | ಮಂದ |
| ಪೇ,ಪೋ,ರಾ,ರೀ | ಚಿತ್ರಾ | ರಾಕ್ಷಸ | ಹುಲಿ | ಗೋವು | ಶಿರಃ | ಮೃಗಶಿರ | ಮಧ್ಯ | ಕಾಕ | ಅಂಬಟೆ | ಹೋರ | ಸ್ತ್ರೀ | ಮೃಧು | ತಿರ್ಯಕ್ | ಮಧ್ಯ |

| | | | | | | | | | | | | | | |
|---|---|---|---|---|---|---|---|---|---|---|---|---|---|---|
| ರೂ,ರೇ,ರೋ,ತಾ | ಸ್ವಾತಿ | ದೇವ | ಕೋಣ | ಕುದುರೆ | ಕಂಠ | ರೋಹಿಣಿ | ಅಂತ್ಯ | ಕಾಕ | ಬಿಲ್ವ | ಹೋರ | ಸ್ತ್ರೀ | ಚರ | ತಿರ್ಯಕ್ | ಸುದೃಶ |
| ತೀ,ತೂ,ತೇ,ತೋ | ವಿಶಾಖಾ | ರಾಕ್ಷಸ | ಹುಲಿ | ಗೋವು | ನಾಭಿ | ಕೃತ್ತಿಕಾ | ಅಂತ್ಯ | ಕಾಕ | ಅಂಕೋ | ಹೋರ | ಸ್ತ್ರೀ | ತಿಕ್ಷ್ಣ | ಅಧಃ | ಅಂಧ |
| ನಾ,ನೀ,ನೂ,ನೇ | ಅನುರಾಧ | ದೇವ | ಜಿಂಕೆ | ನಾಯಿ | ಜಾನು | ಭರಣಿ | ಮಧ್ಯ | ಕಾಕ | ರಜೆ | ಒಳ | ಪು | ಮೃಧು | ತಿರ್ಯಕ್ | ಮಂದ |
| ನೋ,ಯಾ,ಯೀ,ಯ | ಜ್ಯೇಷ್ಠಾ | ರಾಕ್ಷಸ | ಜಿಂಕೆ | ನಾಯಿ | ಪಾದ | ಅಶ್ವಿನಿ | ಆಧಿ | ಕುಕ್ಕುಟ | ಸರಳಿ | ಒಳ | ಸ್ತ್ರೀ | ತೀಕ್ಷ್ಣ | ತಿರ್ಯಕ್ | ಮಧ್ಯ |
| ಯೇ,ಯೋ,ಬಾ,ಬೀ | ಮೂಲ | ರಾಕ್ಷಸ | ನಾಯಿ | ಜಿಂಕೆ | ಪಾದ | ಆಶ್ಲೇಷಾ | ಆಧಿ | ಕುಕ್ಕುಟ | ಚಂದನ | ಒಳ | ನ | ತೀಕ್ಷ್ಣ | ಅಧಃ | ಸದೃಶ |
| ಬೂ,ಧೂ,ಭೂ,ಢಾ | ಪೂ,ಷಾ | ಮನುಷ್ಯ | ಕಪಿ | ಆಡು | ಜಾನು | ಪುಷ್ಯ | ಮಧ್ಯ | ಕುಕ್ಕುಟ | ನೇರಳೆ | ಒಳ | ಸ್ತ್ರೀ | ಉಗ್ರ | ಅಧಃ | ಅಂಧ |
| ಬೇ,ಬೋ,ಜಾ,ಜೀ | ಉ,ಷಾ | ಮನುಷ್ಯ | ಮುಂಗ್ಸಿ | ಹಾವು | ನಾಭಿ | ಪುನರ್ವಸು | ಅಂತ್ಯ | ಕುಕ್ಕುಟ | ಹಲಸು | ಹೊರ | ಸ್ತ್ರೀ | ಸ್ಥಿರ | ಊರ್ದ್ವ | ಮಂದ |
| ಶೀ,ಶೂ,ಷೇ,ಷೋ | ಶ್ರವಣ | ದೇವ | ಕಪಿ | ಆಡು | ಕಂಠ | ಆರ್ದ್ರಾ | ಅಂತ್ಯ | ಕುಕ್ಕುಟ | ಎಕ್ಕೆ | ಒಳ | ಪು | ಚರ | ಊರ್ದ್ವ | ಸದೃಶ |
| ಗಾ,ಗೀ,ಗೂ,ಗೇ | ಧನಿಷ್ಠಾ | ರಾಕ್ಷಸ | ಸಿಂಹ | ಆನೆ | ಶಿರಃ | ಮ.ಚಿ. | ಮಧ್ಯ | ನವಿಲು | ಶಮೀ | ಒಳ | ಸ್ತ್ರೀ | ಚರ | ಊರ್ದ್ವ | ಅಂಧ |
| ಗೋ,ಸಾ,ಸೀ,ಸೂ | ಶತಭಿಷಾ | ರಾಕ್ಷಸ | ಕುದುರೆ | ಎಮ್ಮೆ | ಕಂಠ | ಹಸ್ತ | ಆಧಿ | ನವಿಲು | ಕದಂಬ | ಒಳ | ನ | ಚರ | ಊರ್ದ್ವ | ಮಂಧ್ಯ |
| ಸೇ,ಸೋ,ಜೀ,ದಾ | ಪೂ,ಭಾ, | ಮನುಷ್ಯ | ಸಿಂಹ | ಆನೆ | ನಾಭಿ | ಉತ್ತರಾ | ಆಧಿ | ನವಿಲು | ಮಾವು | ಒಳ | ಪು | ಉಗ್ರ | ಅಧಃ | ಮಂಧ್ಯ |
| ದು,ಜ,ಞ,ಥಾ | ಉ.ಭಾ. | ಮನುಷ್ಯ | ಆಕಳು | ಹುಲಿ | ಜಾನು | ಪುಬ್ಬಾ | ಮಧ್ಯ | ನವಿಲು | ಲಿಂಬೆ | ಒಳ | ಪು | ಸ್ಥಿರ | ಊರ್ದ್ವ | ಸದೃಶ |
| ದೇ,ದೋ,ಚಾ,ಚೀ | ರೇವತಿ | ದೇವ | ಆನೆ | ಸಿಂಹ | ಪಾದ | ಮಘಾ | ಅಂತ್ಯ | ನವಿಲು | ಹಿಪ್ಪೆ | ಹೊರ | ಸ್ತ್ರೀ | ಮೃದು | ತಿರ್ಯಕ್ | ಅಂಧ |

## ಆಶ್ವೀಜ, ಕಾರ್ತಿಕ, ಪುಷ್ಯ, ಮಾರ್ಗಶಿರ, ಮಾಘ ಈ ತಿಂಗಳಲ್ಲಿ ನೋಡುವುದು

| ರವಿವಾರ | | ಚಂದ್ರವಾರ | | ಮಂಗಳವಾರ | | ಬುಧವಾರ | | ಗುರುವಾರ | | ಶುಕ್ರವಾರ | | ಶನಿವಾರ | |
|---|---|---|---|---|---|---|---|---|---|---|---|---|---|
| ಹಗಲು | ರಾತ್ರಿ | ಹಗಲು | ರಾತ್ರಿ | ಹಗಲು | ರಾತ್ರಿ | ಹಗಲು | ರಾತ್ರಿ | ಹಗಲು | ರಾತ್ರಿ | ಹಗಲು | ರಾತ್ರಿ | ಹಗಲು | ರಾತ್ರಿ |
| ಅ 6 | ಶೂ 2 | ಅ 4 | ಚ 6 | ಅ 2 | ಚ 6 | ಶೂ 2 | ಚ 4 | ಅ 4 | ಶೂ 2 | ಅ 2 | ಚ 4 | ಚ 6 | ಅ 14 |
| ಚ 8 | ಚ 4 | ಚ 4 | ಅ 8 | ಶೂ 2 | ಅ 2 | ಮ 4 | ಅ 4 | ಚ 6 | ಅ 8 | ಚ 6 | ಅ 4 | ಅ 6 | ಶೂ 4 |
| ಅ 6 | ಅ 6 | ಅ 6 | ಚ 8 | ಅ 10 | ಶೂ 2 | ಅ 2 | ಚ 8 | ಅ 4 | ಚ 6 | ಅ 6 | ಶೂ 4 | ಮ 2 | ಚ 4 |
| ಶೂ 2 | ಚ 6 | ಚ 16 | ಅ 2 | ಚ 6 | ಅ 2 | ಶೂ 2 | ಅ 6 | ಶೂ 4 | ಅ 4 | ಚ 6 | ಮ 2 | ಅ 8 | ಶೂ 2 |
| ಮ 2 | ಅ 4 | | ಚ 6 | ಶೂ 6 | ಶೂ 4 | ಚ 4 | ಶೂ 8 | ಚ 6 | ಚ 6 | ಅ 8 | ಚ 6 | ಶೂ 8 | ಚ 4 |
| ಶೂ 4 | ಶೂ 2 | | | ಚ 4 | ಮ 2 | ಅ 6 | | ಶೂ 2 | ಮ 2 | ಶೂ 2 | ಶೂ 6 | | ಅ 2 |
| ಚ 2 | ಚ 4 | | | | ಅ 4 | ಶೂ 8 | | ಅ 4 | ಶೂ 2 | | ಅ 4 | | |
| | ಶೂ 2 | | | | ಶೂ 4 | ಅ 2 | | | | | | | |

## ಚೈತ್ರ, ವೈಶಾಖ, ಶ್ರಾವಣ, ಭಾದ್ರಪದ, ಫಾಲ್ಗುಣ ಈ ತಿಂಗಳಲ್ಲಿ

| ರವಿವಾರ | | ಚಂದ್ರವಾರ | | ಮಂಗಳವಾರ | | ಬುಧವಾರ | | ಗುರುವಾರ | | ಶುಕ್ರವಾರ | | ಶನಿವಾರ | |
|---|---|---|---|---|---|---|---|---|---|---|---|---|---|
| ಹಗಲು | ರಾತ್ರಿ | ಹಗಲು | ರಾತ್ರಿ | ಹಗಲು | ರಾತ್ರಿ | ಹಗಲು | ರಾತ್ರಿ | ಹಗಲು | ರಾತ್ರಿ | ಹಗಲು | ರಾತ್ರಿ | ಹಗಲು | ರಾತ್ರಿ |
| ಮ 2 | ಶೂ 4 | ಅ 4 | ಚ 2 | ಚ 4 | ಅ 4 | ಚ 4 | ಶೂ 2 | ಅ 6 | ಚ 4 | ಶೂ 2 | ಶೂ 2 | ಶೂ 4 | ಶೂ 2 |
| ಚ 2 | ಮ 4 | ಚ 8 | ಅ 6 | ಶೂ 2 | ಶೂ 2 | ಅ 4 | ಅ 6 | ಶೂ 4 | ಮ 4 | ಅ 16 | ಚ 4 | ಚ 8 | ಚ 4 |
| ಅ 8 | ಶೂ 2 | ಅ 6 | ಚ 6 | ಅ 6 | ಅ 2 | ಶೂ 2 | ಶೂ 4 | ಚ 4 | ಅ 2 | ಚ 8 | ಅ 6 | ಅ 4 | ಅ 4 |
| ಚ 6 | ಅ 4 | ಚ 6 | ಅ 8 | ಚ 6 | ಚ 4 | ಚ 4 | ಚ 6 | ಅ 6 | ಚ 8 | ಅ 2 | ಶೂ 4 | ಚ 6 | ಚ 4 |
| ಶೂ 10 | ಶೂ 2 | ಅ 4 | ಚ 8 | ಅ 2 | ಶೂ 6 | ಮ 2 | ಶೂ 4 | ಚ 6 | ಅ 4 | ಶೂ 2 | ಅ 6 | ಶೂ 4 | ಅ 6 |
| ಮ 2 | ಚ 6 | ಶೂ 2 | | ಶೂ 4 | ಅ 4 | ಅ 4 | ಅ 8 | ಅ 4 | ಶೂ 4 | | ಮ 2 | ಚ 4 | ಚ 4 |
| ಮ 2 | ಶೂ 6 | | | ಅ 6 | ಚ 2 | ಚ 4 | | | ಅ 4 | | ಶೂ 6 | | ಅ 2 |
| | ಮ 2 | | | | ಅ 2 | ಅ 4 | | | | | | | ಶೂ 4 |
| | | | | | ಶೂ 4 | ಶೂ 2 | | | | | | | |

## ಜ್ಯೇಷ್ಠ, ಆಷಾಢ ಈ ತಿಂಗಳಲ್ಲಿ

| ರವಿವಾರ | | ಚಂದ್ರವಾರ | | ಮಂಗಳವಾರ | | ಬುಧವಾರ | | ಗುರುವಾರ | | ಶುಕ್ರವಾರ | | ಶನಿವಾರ | |
|---|---|---|---|---|---|---|---|---|---|---|---|---|---|
| ಹಗಲು | ರಾತ್ರಿ | ಹಗಲು | ರಾತ್ರಿ | ಹಗಲು | ರಾತ್ರಿ | ಹಗಲು | ರಾತ್ರಿ | ಹಗಲು | ರಾತ್ರಿ | ಹಗಲು | ರಾತ್ರಿ | ಹಗಲು | ರಾತ್ರಿ |
| ಶೂ 4 | ಅ 4 | ಚ 8 | ಶೂ 4 | ಅ 4 | ಶೂ 4 | ಶೂ 6 | ಅ | ಅ 2 | ಶೂ 4 | ಶೂ 4 | ಅ 4 | ಶೂ 4 | ಚ 4 |
| ಅ 8 | ಶೂ 4 | ಅ 4 | ಚ 8 | ಚ 4 | ಚ 4 | 10 | | ಶೂ 4 | ಅ 4 | ಅ 14 | ಶೂ 2 | ಚ 4 | ಅ 4 |
| ಚ 6 | ಚ 4 | ಶೂ 2 | ಅ 8 | ಶೂ 8 | ಅ 6 | ಅ 8 | ಚ 2 | ಚ 6 | ಶೂ 4 | ಚ 8 | ಅ 6 | ಶೂ 2 | ಚ 6 |
| ಅ 6 | ಅ 6 | ಚ 4 | ಚ 4 | ಚ 6 | ಚ 4 | ಚ 6 | ಶೂ 4 | ಅ 6 | ಚ 4 | ಅ 2 | ಶೂ 6 | ಅ 6 | ಅ 4 |
| ಚ 4 | ಚ 8 | ಅ 6 | ಶೂ 2 | ಮ 2 | ಅ 2 | ಅ 8 | ಅ 4 | ಶೂ 2 | ಶೂ 2 | ಶೂ 2 | ಅ 8 | ಶೂ 2 | ಶೂ 4 |
| ಶೂ 2 | ಶೂ 4 | ಮ 6 | ಅ 4 | ಚ 4 | ಶೂ 2 | ಶೂ 2 | ಚ 6 | ಚ 4 | ಅ 6 | | ಮ 2 | ಅ 2 | ಚ 4 |
| | | | | ಅ 2 | ಚ 4 | | ಶೂ 4 | ಅ 6 | ಚ 6 | | ಶೂ 2 | ಶೂ 4 | ಅ 2 |
| | | | | | ಅ 4 | | | | | | | ಚ 6 | ಚ 2 |

**ಪ್ರಯಾಣಕ್ಕೆ ಶಿವಲಿಖಿತವು :** ಮುಹೂರ್ತ ರಾಜವೆಂಬ ಶಿವಲಿಖಿತವು ಪ್ರಯಾಣಕ್ಕೆ ಬಹು ಉಪಯುಕ್ತವಾದದ್ದು ಇದನ್ನು ನೋಡಿದ ಮೇಲೆ ದುಷ್ಟವಾರ, ದುರದೃಷ್ಟ ನಕ್ಷತ್ರ, ದುಷ್ಟ ಯೋಗ ದುಷ್ಟ ಕರಣ, ಸಂಕ್ರಾಂತಿ, ಅಮಾವಾಸ್ಯ, ಗ್ರಹಣ ಮುಂತಾದವುಗಳನ್ನು ನೋಡುವ ಅವಶ್ಯಕತೆಯಿಲ್ಲ. ಇದರಲ್ಲಿ ಹೇಳಿದ ಶೂನ್ಯ ಚಕ್ರಗಳು ಮಾತ್ರಪ್ರಯಾಣಕ್ಕೆ ಉಪಯುಕ್ತವಲ್ಲ. ಅಮೃತ ಮಹೇಂದ್ರಗಳ ಅವಶ್ಯ ಬಹು ಒಳ್ಳೆಯದು. ಅಮೃತ ವೇಳೆಯಲ್ಲಿ ಪ್ರಯಾಣ ಮಾಡಿದರೆ ಮಹತ್ವಕಾರ್ಯವಾಗುವುದು.

ಯಾವ ಯಾವ ಮಾಸಗಳಲ್ಲಿ, ಯಾವ ಯಾವ ವಾರದ ದಿವಸ ಹಗಲು-ರಾತ್ರಿ ಎಷ್ಟೆಷ್ಟು ಘಳಿಗೆಯವರಗೆ ಶೂನ್ಯ, ಚಕ್ರ, ಅಮೃತ, ಮಹೇಂದ್ರ ಗಳಿರುವುದೆಂಬುದನ್ನು ಇಲ್ಲಿ ತೋರಿಸಿದ ಕೋಷ್ಟದ ಮೇಲಿಂದ ತಿಳಿದುಕೊಳ್ಳಬೇಕು. ಸಂಕ್ಷಿಪತಿವಾಗಿ ಶೂ ಹಾಕಿದ್ದು ಶೂನ್ಯವೆಂದು, ಚ ಹಾಕಿದ್ದು ಚಕ್ರವೆಂದು, ಅ ಹಾಕಿದ್ದು ಅಮೃತವೆಂದು, ಮ ಹಾಕಿದ್ದು ಮಹೇಂದ್ರವೆಂದು ತಿಳಿಯಬೇಕು. ಹಗಲು ಸೂರ್ಯೋದಯದಿಂದಲೂ ಘಳಿಗೆಗಳ ಲೆಕ್ಕ ಮಾಡಬೇಕು(2 1/2 ಘಳಿಗೆಗೆ 1 ತಾಸಾಗುವುದು).

**ಶಿವಲಿಖಿತ ಚಕ್ರವನ್ನು ನೋಡುವ ರೀತಿ :** ಆಶ್ವಿಜ ಮಾಸದ ರವಿವಾರ ದಿವಸ ಸೂರ್ಯೋದಯದಿಂದ 6 ಘಳಿಗೆಗಳವರಗೆ ಅಮೃತ ವೇಳೆ, ಆಮೇಲೆ 8 ಘಳಿಗೆಗಳವರಗೆ ಚಕ್ರ, ಅನಂತರ 8 ಘಳಿಗೆಗಳವರೆಗೆ ಅಮೃತ, ಬಳಿಕ 3 ಘಳೀಗೆಗಳವರೆಗೆ ಶೂನ್ಯ, ಆಮೇಲೆ 2 ಘಳಿಗೆಗಳವರೆಗೆ ಮಹೇಂದ್ರ ಹೀಗೆ ವೇಳೆಯನ್ನು ತಿಳಿದುಕೊಳ್ಳಬೇಕು.

## ರಂಗವಿಠಲ ಮಾಸಪತ್ರಿಕೆ – ಹರಿದಾಸ ಸಾಹಿತ್ಯದ ಅಧ್ಯಯನ ಮತ್ತು ಪ್ರಸಾರ

ಕನ್ನಡ ಭಾಷೆಯಲ್ಲಿ ಆಧ್ಯಾತ್ಮಿಕ ಅನುಭವಗಳ ಭಕ್ತಿ ಭಾವವನ್ನು ತುಂಬಿ, ಸರಳ ಶೈಲಿಯಲ್ಲಿ ಸುಂದರವಾದ ಭಾವನೆಗಳಿಂದ ಶಬ್ದ ಅಲಂಕಾರಗಳನ್ನು ಹೊಂದಿದ ಕೀರ್ತನೆಗಳನ್ನು ಶ್ರೀ ಶ್ರೀಪಾದರಾಜರು ರಚಿಸಿದರು. ಅದನ್ನು ಮುಂದೆ ಶ್ರೀ ವ್ಯಾಸರಾಜರು, ಶ್ರೀ ವಾದಿರಾಜರು, ಶ್ರೀ ಪುರಂದರದಾಸರು, ಶ್ರೀ ಕನಕದಾಸರು, ಶ್ರೀ ಪ್ರಸನ್ನ ವೆಂಕಟದಾಸರು, ಶ್ರೀ ವಿಜಯದಾಸರು, ಶ್ರೀ ಗೋಪಾಲದಾಸರು, ಮತ್ತು ಶ್ರೀ ಜಗನ್ನಾಥದಾಸರ ಅವರ ಶಿಷ್ಯ–ಪ್ರಶಿಷ್ಯರು ಈ ಹರಿದಾಸ ಸಾಹಿತ್ಯ ಪರಂಪರೆಯನ್ನು ಬೆಳೆಸಿದ ಮಹಾನುಭಾವರು.

ಶ್ರೀ ಶ್ರೀಪಾದರಾಜ ಮಠಾಧೀಶರಾದ ಶ್ರೀ ಶ್ರೀ ವಿಜ್ಞಾನನಿಧಿತೀರ್ಥ ಶ್ರೀಪಾದಂಗಳವರು **ಕನ್ನಡ ಹರಿದಾಸ ಸಾಹಿತ್ಯ**ವನ್ನು ಮತ್ತು **ರಾಷ್ಟ್ರೀಯ ವೇದ ವಿಜ್ಞಾನ**ವನ್ನು ಪ್ರಚರಪಡಿಸಲು ಮಹತ್ವದ ಕಾರ್ಯಗಳನ್ನು ನಡೆಸಿದವರು. ಅವರು ಸಾಹಿತ್ಯದ ಪ್ರಚಾರಕ್ಕಾಗಿ ಅನೇಕರೊಂದಿಗೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ತಾವು ಖುದ್ದಾಗಿ ಭಾಗವಹಿಸುತ್ತಿದ್ದರು. ದಾಸ ಸಾಹಿತ್ಯಕ್ಕಾಗಿ ಕನ್ನಡದಲ್ಲಿ "**ರಂಗವಿಠಲ ಮಾಸ ಪತ್ರಿಕೆ**" ಆರಂಭಿಸಿದರು.

**ರಂಗವಿಠಲ ಮಾಸ ಪತ್ರಿಕೆ** ಕಳೆದ 20 ವರ್ಷಗಳಿಂದ ಹರಿದಾಸ ಸಾಹಿತ್ಯಕ್ಕೆ ಸಂಬಂಧಿಸಿದ ಅನೇಕ ಮಹತ್ವಪೂರ್ಣ ವಿಷಯಗಳನ್ನು ಹಾಗೂ ಲೇಖನಗಳನ್ನು ಹೊರತಂದಿದೆ.

ಹರಿದಾಸ ಸಾಹಿತ್ಯದಲ್ಲಿ **ದಶಾವತಾರಗಳ ಚಿಂತನೆ**, ಹರಿದಾಸ ಸಾಹಿತ್ಯದಲ್ಲಿ **ಚತುರ್ವಿಂಶತಿ ರೂಪಗಳ ಚಿಂತನೆ**, ಹರಿದಾಸ ಸಾಹಿತ್ಯದಲ್ಲಿ **ತೀರ್ಥಕ್ಷೇತ್ರಗಳ ವರ್ಣನೆ**, ಹರಿದಾಸ ಸಾಹಿತ್ಯದಲ್ಲಿ **ನವವಿಧ ಭಕ್ತಿಯ ವಿವರಣೆ**, ಅನೇಕ ಪ್ರಚಲಿತ ಹಾಗೂ ಅಪ್ರಚಲಿತ ಹರಿದಾಸರುಗಳ **ಜೀವನ ಚರಿತ್ರೆ ಮತ್ತು ಕೃತಿಗಳ ಅಧ್ಯಯನ**, ಶ್ರೀ ಶ್ರೀಪಾದರಾಜರು ರಚಿಸಿದ **ಮಧ್ವನಾಮದ ಸುಧೀರ್ಘವಾದ ಅಧ್ಯಯನ** ಅಲ್ಲದೆ ಭಾಗವತದಲ್ಲಿ ಬರುವ **ಭಗವದ್ರೂಪಗಳ ಚಿಂತನೆ**ಯನ್ನು ನಡೆಸಿದೆ. ಇದು ಓದುಗರಲ್ಲಿ ವಿಶೇಷ ಚಿಂತನೆಗೆ ಪ್ರೇರಣೆ ನೀಡಿದೆ.

ಇನ್ನೂ ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:

## ರಂಗವಿಠಲ
## ಚಂದಾವಿವರ (Subscription Detail)

| | |
|---|---|
| **ದಶವಾರ್ಷಿಕ ಚಂದಾ** (Ten Years) | 900-00 |
| **ಪಂಚವಾರ್ಷಿಕ ಚಂದಾ**(Five Years) | 450-00 |
| **ತ್ರೈವಾರ್ಷಿಕ ಚಂದಾ** (Three Years) | 275-00 |
| **ವಾರ್ಷಿಕ ಚಂದಾ** (Annual) | 100-00 |
| **ಬಿಡಿ ಪ್ರತಿ** (Per Copy) | 10-00 |

**ಚಂದಾದಾರರಾಗಲು ಬಯಸುವವರು**
**ಈ ಕೆಳಗಿನ ವಿಳಾಸಕ್ಕೆ ನಗದು/DD/MO/Cheque ಮೂಲಕ**
**ಹಣಸಂದಾಯ ಮಾಡಬಹುದು**

**ನಮ್ಮ ವಿಳಾಸ : RANGAVITTALA**
**Sri Sripadaraja Mutt, No. 58, Raghavendra Colony,**
**Chamarajapet, Bangalore-18. Phone : 63645 17614.**

**PhonePe, Google Pay :**
**63645 17614**
(After Payment Please Send us Y
our Details to whatsApp or
E-mail.rangavittala.sripada@gmail.com)